SAPTHAGIRI (KANNADA)
SPIRITUAL ILLUSTRATED MONTHLY
Volume:03, Issue: 6 Pages:56
JANUARY - 2024, Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಜನವರಿ 2024
ಬೆಲೆ ರೂ. 20/-



ವಿನಾ ವೇಂಕಟೇಶಂ ನ ನಾಥೋ ನ ನಾಥಃ ಸದಾ ವೇಂಕಟೇಶಂ ಸ್ಮರಾಮಿ ಸ್ಮರಾಮಿ
ಹರೇ ವೇಂಕಟೇಶಂ ಪ್ರಸೀದ ಪ್ರಸೀದ ಪ್ರಿಯಂ ವೇಂಕಟೇಶ ಪ್ರಯಚ್ಛ ಪ್ರಯಚ್ಛ





ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರಿಗೆ 10-11-2023 ರಿಂದ 18-11-2023 ರ ವರೆಗೆ ನಡೆದ ಕಾರ್ತೀಕ ಬ್ರಹ್ಮೋತ್ಸವಗಳ ದೃಶ್ಯಮಾಲಿಕೆ . ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶ್ರೀ ಶ್ರೀ ಶ್ರೀ ಪೆದ್ದಜೀಯರ್ ಸ್ವಾಮಿಯವರು, ಶ್ರೀ ಶ್ರೀ ಶ್ರೀ ಚಿನ್ನ ಜೀಯರ್ ಸ್ವಾಮಿಯವರು ಮತ್ತು ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿ ಯವರು, ತಿ.ತಿ.ದೇ., ಕಾರ್ಯ ನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ರವರು ಅರ್ಚಕರು ಕಳಾ ಬೃಂದದವರು ಮತ್ತು ಭಕ್ತರು.

















# ಭಗವದ್ಗೀತೆ



**ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ।**
**ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥**

**(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -11)**

**ಶ್ರೀ ಕೃಷ್ಣ**

**ನೀನು ಯಾರಿಗಾಗಿ ಅಳಬಾರದೋ ಅವರಿಗಾಗಿ ಅಳುತ್ತಿ, ಜಾಣನಂತೆ ಮಾತುಗಳನ್ನೂ ಆಡುತ್ತಿ, ತಿಳಿದವರು ಸತ್ತವರಿಗಾಗಲಿ ಸಾಯುವವರಿಗಾಗಲಿ ಅಳುವುದಿಲ್ಲ.**




**ಎಂದು ಕಾಂಬೆನೊ ಎನ್ನ ಸಲಹುವ**
**ಬಂಧುಬಳಗ ನಮ್ಮಪ್ಪನ ತಿರುಪತಿಯಲಿಪ್ಪನ**
**ದಂಡಿಗೆಯ ಬಾರಿಸುತ ಶ್ರುತಿಗೂಡಿ ಕೊಂಡು**
**ಹರುಷದಿ ಹಾಡುತ ಮನದಿ ಲೋಲ್ಯಾಡುತ**
**ಕುಣಿಕುಣಿದಾಡುತ ಬೆಟ್ಟದೊಡೆಯನ ಚರಣ**
**ಕಲಕೆ ಶಿರ ವಿಟ್ಟು ಕರಗಳ ಮುಗಿವೆ ನಾ ಕವಕವ**
**ನಗುವೆ ನಾ ಎನ್ನೊಡೆಯನಾ ಪೊಗಳು ನಾ ಸ್ವಾಮಿ**
**ಪುಷ್ಕರಣಿಯಲಿ ಸ್ನಾನ ನೇಮ ವ ಮಾಡುವೆ ಪುಣ್ಯ**
**ಕ್ಷೇತ್ರವ ನೋಡುವೆ ಹಯವದನನ ಕೊಂಡಾಡುವೆ**

**- ಶ್ರೀ ವಾದಿರಾಜರು**

(ಒಂಬತ್ತನೆಯ ದಶಕ)

# ದಯಾ ಶತಕಮ್




- ಎನ್. ನರಸಿಂಹಾಚಾರ್ಯ

ಕೃಪೇ ಪರವತಸ್ತ್ವಯಾ ವೃಷಗಿರೀಶಿತುಃ ಕ್ರೀಡಿತಂ ಜಗದ್ಧಿತಮಶೇಷತಸ್ತದಿದಮಿತ್ಥಮರ್ಥಾಪ್ಯತೇ।
ಮದಚ್ಛಲಪರಿಚ್ಯುತ ಪ್ರಣತ ದುಷ್ಕೃತ ಪ್ರೇಕ್ಷಿತೈಃ ಹತ ಪ್ರಬಲ ದಾನವೈಃ ಹಲಧರಸ್ಯ ಹೇಲಾಶತೈಃ॥88॥

ಬಲರಾಮಾವತಾರದಲ್ಲಿ ದಯಾದೇವಿಯಿಂದುಂಟಾದ ಉಪಕಾರವು ಈ ಪದ್ಯದಲ್ಲಿ ವರ್ಣಿಸಲ್ಪಡುವುದು. ವೇಂಕಟಾಚಲಾಧೀಶನಾದ ಶ್ರೀನಿವಾಸನ ಸರ್ವಲೀಲೆಗಳೂ ಲೋಕಕ್ಕೆ ಹಿತವನ್ನುಂಟುಮಾಡುವವುಗಳೇ. ಈ ಮಹಿಮೆಯನ್ನು ಹೇಗೆ ನಿರೂಪಿಸಬಹುದೆಂದರೆ-ಬಲರಾಮಾವತಾರದಲ್ಲಿ ಇದನ್ನು ಚೆನ್ನಾಗಿ ಕಾಣಬಹುದು. ಆ ಅವತಾರದಲ್ಲಿ ಆಶ್ರಿತಪಕ್ಷಪಾತವು ಅತ್ಯಂತ ಸ್ಪಷ್ಟವಾಗಿ ತೋರುವುದು. ಆದ್ದರಿಂದಲೇ ದುರ್ಯೋಧನನ ಹಲವಾರು ದೋಷಗಳೂ ಅವರ ಕಣ್ಣಿಗೆ ಕಾಣಲಿಲ್ಲ. ಮದ್ಯಪಾನ ಮಾಡುವುದು ಆ ಅವತಾರದಲ್ಲಿದ್ದ ಒಂದು ಅಭ್ಯಾಸವಾಗಿತ್ತು. ಅದರಿಂದ ಉಂಟಾದ ಮದವೆಂಬ ವ್ಯಾಜದಿಂದ ತನ್ನನ್ನು ಆಶ್ರಯಿಸಿದವರ ಪ್ರಬಲವಾದ ದುಶ್ಚೇಷ್ಟೆಗಳೂ ಅವನ ಗಮನಕ್ಕೆ ಬರಲಿಲ್ಲವಂತೆ. ಅದರಿಂದ ಆಶ್ರಿತರಿಗೂ ಯಾವದೊಂದು ವಿಧವಾದ ಕೆಡಕೂ ಉಂಟಾಗಲಿಲ್ಲ. ತನ್ನನ್ನು ಆಶ್ರಯಿಸದೇ ಇದ್ದ ದುಷ್ಟರಾದ ಅನೇಕ ಅಸುರರ ವಧೆಯನ್ನೂ ಮಾಡಿದನು. ಆ ವಧೆಯೂ ಕೂಡ ಹಿಂದೆಯೇ ತಿಳಿಸಿರುವಂತೆ ಹಿತದಲ್ಲಿಯೇ ಪರಿಣಮಿಸುವುದು. ಆದ್ದರಿಂದ ಆಶ್ರಿತರು ಅನಾಶ್ರಿತರೆಂಬ ಇಬ್ಬರಲ್ಲಿಯೂ ಅವನು ನಡೆಸಿದ ಲೀಲೆಗಳು ಲೋಕಹಿತದಲ್ಲಿಯೇ ಪರ್ಯವಸಾನ ಹೊಂದುವುದರಿಂದ ಶ್ರೀನಿವಾಸನ ಸರ್ವಲೀಲೆಗಳೂ ಲೋಕಹಿತವಾದುವುಗಳು ಎನ್ನುವುದರಲ್ಲಿ ಸಂದೇಹವೇ ಇಲ್ಲ. ಮದ್ಯಪಾನದಿಂದ ಉಂಟಾದ ಮದವೆಂಬುದು ಕೇವಲ ವ್ಯಾಜವೇ ಹೊರತು, ಆಶ್ರಿತರಲ್ಲಿರುವ ಪ್ರೀತಿಯೇ-ಅಂದರೆ ದಯೆಯೇ ಅವರ ದೋಷಗಳನ್ನು ಗಮನಿಸದೇ ಇರುವುದಕ್ಕೆ ಮುಖ್ಯಕಾರಣವೆಂದು ತಾತ್ಪರ್ಯ.

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ ನಾಮಸಂವತ್ಸರ ಮಾರ್ಗಶಿರ - ಪುಷ್ಯಮಾಸ ಮಾಸ ಸಂಚಿಕೆ

ಸಂಪುಟ : 03 ಜನವರಿ - 2024 ಸಂಚಿಕೆ : 06



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ||ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ.ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ನಾಡ ಸುಗ್ಗಿ ಹಬ್ಬ | -ಭೂಮನ ಕರುಣಾಕರ ರೆಡ್ಡಿ | 07 |
| ಉಡುಪಿ ಪುತ್ತಿಗೆ ಮಠದ ಚತುರ್ಥ ಪರ್ಯಾಯ ವೈಶಿಷ್ಟ್ಯತೆ ಮತ್ತು ವೈಭವಗಳು | -ಓಂ ಪ್ರಕಾಶ್ ಭಟ್ | 09 |
| ಸಂಕ್ರಾಂತಿ | -ಬೆಳವಾಡಿ ಅಶ್ವತ್ಥನಾರಾಯಣ | 12 |
| ರಾಮರಾಜ್ಯದ ದ್ವಾರ ಅಯೋಧ್ಯಾ | -ವೇ.ವಿ. ಶಿವರಾಮ ಜೋಗಳೇಕರ | 16 |
| ಶ್ರೀ ವಿಶ್ವೇಶತೀರ್ಥರು ಶ್ರೀರಾಮ ಜನ್ಮಭೂಮಿ ನಂಟು | - ಡಾ|| ಎ.ಬಿ. ಶ್ಯಾಮಾಚಾರ್ಯ | 19 |
| ನೋಡಬನ್ನಿ ಬನದ ಹುಣ್ಣಿಮೆಯ ವೈಭವ | - ಕು|| ದೀಪಶ್ರೀ ಎಸ್. ಕೂಡ್ಲಿಗಿ | 21 |
| ಗೋದೆ ಹಾಡಿರುವ ಗೀತೆ "ತಿರುಪ್ಪಾವೈ" | -ಡಾ|| ಎನ್.ಕೆ. ರಾಮಶೇಷನ್ | 24 |
| ಹರಿದಾಸ ಕುಲ ತಿಲಕ ಶ್ರೀಗುರು ಗೋವಿಂದ ವಿಠ್ಠಲ ದಾಸರು | -ಶ್ರೀಮತಿ. ಡಾ|| ಎನ್.ಜಿ.ವಿಜಯಲಕ್ಷ್ಮೀ | 31 |
| ಚುಂಚನಕಟ್ಟೆ ಶ್ರೀಕೋದಂಡರಾಮ ದೇವಾಲಯ | - ಕೆಂಗೇರಿ ಚಕ್ರಪಾಣಿ | 33 |
| ಶ್ರೀ ರಘೋತ್ತಮ ತೀರ್ಥರು | - ಶ್ರೀಮತಿ. ಮಾಧುರಿ ದೇಶಪಾಂಡೆ | 35 |
| ಪೃಥಾದೇವಿ | -ಶ್ರೀಮತಿ. ಡಾ|| ವಾಣಿಶ್ರೀ ಬಿ.ಎಂ. | 37 |
| ತಿರುನಾಗೈ ಪಟ್ಟಣ | -ಶ್ರೀಮತಿ. ಸೂರ್ಯವಂಶಿ | 39 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ. ಆರ್. ನರಸಿಂಹನ್ | 42 |
| ಶ್ರೀವೆಂಕಟಾಚಲ ಮಹಾತ್ಮೆ | -ಶ್ರೀಮತಿ. ಎನ್.ಪಾರ್ವತಿ | 44 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ|| ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಹಾಲಿನಂಥೆ ಸಾರ್ಥಕ ಬದುಕು ಬಾಳೋಣ | - ಡಾ||ಗುರುರಾಜಪೋಶೆಟ್ಟಿಹಳ್ಳಿ | 48 |
| ಚಿತ್ರಕಥೆ -ಗೋಪಿಕೆಯರ ಚಿತ್ತಚೋರನಿಗೆ ವಂದನೆಗಳು | - ಶ್ರೀನಿವಾಸದೀಕ್ಷಿತರು | 52 |


ಮುಖಚಿತ್ರ - ಶ್ರೀದೇವಿ ಭೂದೇವಿ ಸಮೇತ ಶ್ರೀಮಲೆಯಪ್ಪಸ್ವಾಮಿಯವರು
ಹಿಂಬದಿಚಿತ್ರ - ಶ್ರೀ ಗೋದಾದೇವಿಯ ಅಲಂಕಾರದಲ್ಲಿ ಶ್ರೀ ಮಲೆಯಪ್ಪಸ್ವಾಮಿ

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ


| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿವಾರ್ಷಿಕಚಂದಾ | ರೂ. 1030/- |

# ಸಂಪಾದಕೀಯ

# ಶಾಂತಿ ಪ್ರತೀಕ ಮಕರ ಸಂಕ್ರಾಂತಿ

"ತಮಸೋಮಾ ಜ್ಯೋತಿರ್ಗಮಯ" ಎಂಬ ಮಾತಿನಂತೆ ನಡೆದುಕೊಳ್ಳುವುದರ ರೂಪವೇ ಈ ಸಂಕ್ರಾಂತಿ. ಸೂರ್ಯನ ಪರಿಭ್ರಮಣದೊಂದಿಗೆ ಬೆಸೆದುಕೊಂಡಿರುವ, ಕಾಂತಿಗೆ ಚಿಹ್ನೆಯಾದ ಈ ಸಂಕ್ರಾಂತಿಗೆ, ಮೂಲಪ್ರಕೃತಿ ನಿಯಮಗಳಲ್ಲಿ ಉಂಟಾಗುವ ಗಣನೀಯವಾದ ಬದಲಾವಣೆಗಳಿಗೆ ಸೂರ್ಯನು ಒಂದು ಪ್ರತೀಕವಾಗಿದ್ದಾನೆ. ಸೂರ್ಯನ ಚಲನೆಯಲ್ಲಿ ಕಂಡು ಬರುವ ಬದಲಾವಣೆಯೇ ಒಂದು ಕಾಂತಿ!


ಮೇಷಸಂಕ್ರಮಣದಿಂದ ಹಿಡಿದು ಪ್ರತಿ ತಿಂಗಳೂ ಬರುವ ಸಂಕ್ರಮಣದಲ್ಲಿ ಮಕರ ಸಂಕ್ರಮಣಕ್ಕೆ ಅಧಿಕವಾದ ಪ್ರಾಧಾನ್ಯತೆ ಇದೆ. ದಕ್ಷಿಣಾಯನವು ಪೂರ್ತಿಯಾಗಿ ಉತ್ತರಾಯಣವು ಪ್ರವೇಶಿಸುವ ಈ ಸಂಧಿ ಕಾಲಕ್ಕೆ ವಿಶೇಷವಾದ ಆಧ್ಯಾತ್ಮಿಕತೆಯ ವೈಶಿಷ್ಟ್ಯತೆ ಇದೆ. ಸೂರ್ಯನು ಮಕರರಾಶಿಯಲ್ಲಿ ಪ್ರವೇಶಿಸುತ್ತಲೇ ಅದ್ಭುತವಾದ ತೇಜಸ್ಸಿನೊಂದಿಗೆ ಪ್ರಕಾಶಿಸುತ್ತಾನೆ. ಈ ಸಂಕ್ರಾಂತಿ ಹಬ್ಬವು,ಪ್ರಾಚೀನ-ನವೀನದ ಒಗ್ಗೂಡುವಿಕೆಯಾಗಿ ನಾವು ನೋಡುವಂತಹಾ ಸಮಶೀತೋಷ್ಣಕಾಲವನ್ನು ಅನಿರ್ವಚನೀಯವಾದ ಅನುಭವವನ್ನು ಪ್ರತಿಪ್ರಾಣಿಗೂ ಉಂಟುಮಾಡುತ್ತದೆ. ಸಂಕ್ರಾಂತಿ ಹಬ್ಬವು,ಜನಜೀವನದಲ್ಲಿನ ಚೈತನ್ಯಕ್ಕೆ, ಸ್ಪಂದನೆಗೆ,ಬದಲಾವಣೆಗೆ,ಅದ್ಭುತವಾದ ಭವಿಷ್ಯಕ್ಕೆ ಶಾಂತಿಯ ಪ್ರತೀಕವಾಗಿದೆ.

ಸೂರ್ಯನು ದಕ್ಷಿಣ ದಿಕ್ಕಿಗೆ ತಿರುಗಿದಾಗ ಪ್ರಪಂಚದಲ್ಲಿ ಬೆಳಕು, ತಾಪವು ಕಡಿಮೆಯಾಗಿ ಜೀವಶಕ್ತಿಯು ಸಂಕುಚಿತವಾಗುತ್ತದೆ. ಸೂರ್ಯನು ಉತ್ತರಕ್ಕೆ ತಿರುಗಿದಾಗ ಪುನಃ ಈ ಜೀವಶಕ್ತಿಯು ಹೊಸಚೈತನ್ಯವನ್ನು ಪಡೆದು ವಿಕಸಿಸುತ್ತಾ ಪರಿಮಳಿಸುತ್ತದೆ. ಆದ್ದರಿಂದಲೇ ಈ ಸಂಕ್ರಾಂತಿಯನ್ನು ಪರ್ವದಿನವೆಂದು ಕರೆಯುತ್ತೇವೆ. ಮಾನವರ ಆತ್ಮವನ್ನು ಎಚ್ಚರಗೊಳಿಸುವಂತಹಾ ಸೂರ್ಯಕಿರಣಗಳು ಪ್ರಕಾಶವಂತವಾದ ಮಂತ್ರಗಳಾಗಿ ಭವಿಷ್ಯತ್ತಿನ ಮೇಲೆ ಆಸೆಗಳನ್ನು ಹುಟ್ಟಿಸುವಂತಹ ಗುಣವನ್ನು ಹೊಂದಿವೆ. ಅಷ್ಟೇ ಅಲ್ಲದೇ ಈ ಉತ್ತಮವಾದ ಸಂದೇಶವನ್ನು, ವಿಪ್ಲವವನ್ನು, ಅಭಿವೃದ್ಧಿಯನ್ನು, ಕ್ರಾಂತಿಯನ್ನು ಉಂಟುಮಾಡುತ್ತದೆ.

ಜೀವನಚಕ್ರದ ಪ್ರದಕ್ಷಿಣೆಯಲ್ಲಿ ಸರ್ವಶುಭಗಳು ಉಂಟಾಗಿ ಶೋಭಾಯಮಾನವಾದ ಸಂಕ್ರಾಂತಿ ಅನೇಕ ಊಹೆಗಳನ್ನು ಆಸೆಗಳನ್ನು ಪಕ್ವವಾಗಿಸಿ,ಪ್ರತಿವ್ಯಕ್ತಿಯ ಮುಖದಲ್ಲೂ ನೂತನೋತ್ಸಾಹವನ್ನು ತುಂಬುತ್ತದೆ. ಐಹಿಕಮುಕ್ತಿಕ್ಕವಾಗಿ ಶ್ರೀವೆಂಕಟೇಶ್ವರನನ್ನು ಸ್ಮರಿಸಬೇಕೆಂಬ ಆಸೆಯನ್ನು ಭಕ್ತರ ಹೃದಯದಲ್ಲಿ ಈ ಮಕರಸಂಕ್ರಾಂತಿಯು ಜ್ಯೋತಿ ಪ್ರಕಾಶಮಾನವಾಗಿ ಬೆಳಗುತ್ತದೆ.

ತೆಲುಗಿನವರಲ್ಲಿ ಸಂವತ್ಸರದ ಅಂತ್ಯದಲ್ಲಿ ನಡೆಯುವ ಹೇಮಂತದ ಸಂಭ್ರಮ ಈ ಸಂಕ್ರಾಂತಿಯಾಗಿದೆ. ಇದೇ ಪರ್ವದಿನವು ಆಂಗ್ಲ ಸಂವತ್ಸರದ ಪ್ರಾರಂಭದಲ್ಲಿ ಹೊಸ ಚೈತನ್ಯವನ್ನು ನೀಡುತ್ತಾ ಹೊಸ ಬೆಳಕುನ್ನು ತುಂಬುತ್ತಾ ಬರುವ ಕಾಂತಿ ಪುಂಜವಾಗಿದೆ. "ಸಂಕ್ರಾಂತಿ ಅಂದರೆ ಒಳ್ಳೆಯ ನಡವಳಿಕೆ,ಶಾಂತಿ ಎಂಬ ಅರ್ಥಗಳನ್ನು ಒಳಗೊಂಡಿದೆ. ಹಿಂಸಾ ಪ್ರವತ್ತಿಯನ್ನು ಬಿಟ್ಟು ಶಾಂತಿಯತ್ತ ನಡೆಯುವ ದಾರಿಯೇ ನಿಜವಾದ ಸಂಕ್ರಾಂತಿ ಎನಿಸಿಕೊಳ್ಳುತ್ತದೆ. ಈ ರೀತಿ ವೇದ ವೇದಾಂಗಗಳಿಗೆ, ಪುರಾಣ, ಇತಿಹಾಸಗಳಿಗೆ, ಲಲಿತಕಲೆಗಳಿಗೆ, ಸಕಲಪುಣ್ಯ ತೀರ್ಥಗಳಿಗೆ ಸಂಸ್ಕೃತಿ ಸಂಪ್ರದಾಯಗಳಿಗೆ ಪುಣ್ಯ ಪರ್ವದಿನಗಳಿಗೆ ತವರೂರಾದ ಭಾರತದೇಶವು ಜಗತ್ತಿನಲ್ಲಿ ಒಂದು ಪ್ರತ್ಯೇಕವಾದ ಸ್ಥಾನವೆಂದು ಕೊಂಡಾಡಲ್ಪಡುತ್ತಿದೆ. ಇಂತಹಾ ಪವಿತ್ರವಾದ ಭಾರತಾವನಿಯಲ್ಲಿ ಜನ್ಮಿಸಿರುವ ನಾವು ಭಾರತೀಯರಾಗಿ ಈ ಸಂಸ್ಕೃತಿ ಸಂಪ್ರದಾಯಗಳಿಗೆ ಮನ್ನಣೆಯನ್ನು ನೀಡುವಂತಹ ಈ ಸಂಕ್ರಾಂತಿಯ ಹಬ್ಬವನ್ನು ನಾವು ಸಂತೋಷದಿಂದ ಆಹ್ವಾನಿಸೋಣ, ಪ್ರಕಾಶವಂತವಾದ ಜೀವನವನ್ನು ಅನುಭವಿಸೋಣ, ಆ ದೇವದೇವನನ್ನು ಸ್ಮರಿಸಿ ಧನ್ಯರಾಗೋಣ.

**ಗೋವಿಂದಾ ! ಗೋವಿಂದಾ!! ಗೋವಿಂದಾ!!!**






**– ಮೂಲ. ಭೂಮನ ಕರುಣಾಕರ ರೆಡ್ಡಿ**
**ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು**

ದೊಡ್ಡ ಬಾಗಿಲು ಎಂದರೆ ಗೋಪುರದ ಪ್ರಧಾನ ದ್ವಾರ. ಹಾಗೆಯೇ ನಮ್ಮೆಲ್ಲರಿಗೂ ದೊಡ್ಡ ಹಬ್ಬವೆಂದರೆ ಸಂಕ್ರಾಂತಿ. ಸಂಕ್ರಾಂತಿಯನ್ನು ಬೊಂಬೆ ಗಳ ಹಬ್ಬ. ರಂಗೋಲಿಗಳ ಹಬ್ಬ ಪಶುಗಳ ಹಬ್ಬ ಹಿರಿಯರ ಹಬ್ಬ ಎಂದೂ ಕರೆಯುವ ವಾಡಿಕೆ ಇದೆ.ಸುಗ್ಗಿಯ ಹಬ್ಬ ಸಂಕ್ರಾಂತಿ ಪುಣ್ಯಕಾಲದಲ್ಲಿ ಸೂರ್ಯನು ಮಕರರಾಶಿಯನ್ನು ಪ್ರವೇಶಿಸುತ್ತಾನೆ. ಆದ್ದರಿಂದ ಇದು ಉತ್ತ ರಾಯಣ ಪುಣ್ಯಕಾಲ.ಇಡೀ ಉತ್ತರಾಯಣವೇ ದೇವತೆಗಳಿಗೆ ಪ್ರಿಯ ವಾದದ್ದು. ದೇವಕಾರ್ಯ, ಶುಭ ಕಾರ್ಯಗಳಿಗೆ ಈ ದಿನ ಬಹಳ ಪ್ರಾಶಸ್ತ್ಯ ವಾಗಿದೆ. ಇಂತಹ ಉತ್ತರಾಯಣವನ್ನು ಪ್ರಾರಂಭಿಸುವ ದಿನವಾದ ಮಕರ ಸಂಕ್ರಾಂತಿಗೆ ವಿಶೇಷವಾದ ಮಾನ್ಯತೆಯಿದೆ. ಈ ದಿನ ಶ್ರದ್ಧಾಭಕ್ತಿಯಿಂದ ಮಾಡುವ ಸ್ನಾನ, ಧ್ಯಾನ, ದಾನ, ಹೋಮ, ಪೂಜೆ, ತರ್ಪಣ, ಶ್ರಾದ್ದ ಮುಂತಾ ದುವುಗಳಿಗೆ ವಿಶೇಷವಾದ ಫಲ ಸಿಗುತ್ತದೆ ಎನ್ನುವ ವಿಚಾರ ಹಲವು ಶಾಸ್ತ್ರಗಳಲ್ಲಿ ಉಲ್ಲೇಖವಾಗಿದೆ.

ಪ್ರಕೃತಿಯ ಹಿನ್ನೆಲೆಯಲ್ಲಿ ಹೇಳುವುದಾದರೆ ಪ್ರತಿ ಮನೆಯಲ್ಲೂ ಹಾಲು, ಹಣ್ಣು, ಬೆಳೆ, ಕಾಳುಗಳು ಸಮೃದ್ಧಿಯಾಗಿರುವ ಕಾಲ. ಲಕ್ಷ್ಮಿಸ್ವರೂಪ ವಾದ ಪಶು ಸಂಪತ್ತನ್ನು ವಿಶೇಷವಾಗಿ ಪೂಜಿಸುವ ಪುಣ್ಯಕಾಲವಾಗಿದೆ. ರೈತನಿಗೆ ಸಂಕ್ರಾಂತಿ ಒಂದು ದೊಡ್ಡ ಹಬ್ಬ ಮುಖ್ಯವಾಗಿ ಬೆಳೆಗಳ ಹಬ್ಬ. ಅಂದರೆ ಸುಗ್ಗಿಯ ಹಬ್ಬ. ರೈತನು ಅನೇಕ ಬೆಳೆಗಳನ್ನು ಚಳಿಗಾಲದಲ್ಲಿ ಬೆಳೆದಿರುತ್ತಾನೆ. ಈ ಹಬ್ಬದಂದು ಪ್ರಕೃತಿ ದೇವತೆಗೆ ವಂದನೆ ಸಲ್ಲಿಸುವುದ ರೊಂದಿಗೆ ತಾನು ಪಟ್ಟ ಕಷ್ಟವನ್ನು ಮರೆಯುತ್ತಾನೆ. ಭೋಗಿ ಹಬ್ಬದ ದಿನ ರೈತರು ಇಂದ್ರ ದೇವನಿಗೆ ಮೊದಲ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ. ಭೂಮಿ ಯನ್ನು ಸಸ್ಯ ಶ್ಯಾಮಲಗೊಳಿಸುವ ಭಗವಂತನಿಗೆ, ಭೂಮಿಯನ್ನು ಫಲವತ್ತು ಗಳಿಸುವ ದನಕರುಗಳಿಗೆ ಕೃತಜ್ಞತಾ ಭಾವದಿಂದ ನಮಸ್ಕರಿಸುವುದೇ ಈ ಪಶುಗಳ ಹಬ್ಬ.ಸಂಕ್ರಾಂತಿ ದಿನದಂದು ಹೆಣ್ಣು ಮಕ್ಕಳೆಲ್ಲ ಮನೆಯ ಅಂಗಳ ವನ್ನು ರಂಗು ರಂಗಿನ ರಂಗವಲ್ಲಿಯಿಂದ ಅಲಂಕರಿಸುತ್ತಾರೆ. ರಂಗೋಲಿಗಳ ಮಧ್ಯೆ ಹಸುವಿನ ಸೆಗಣಿಯಿಂದ ಮಾಡಿದ ಗೊಂಬೆಗಳನ್ನು ಇಡುತ್ತಾರೆ. ಇವು ಗಳ ಮೇಲೆ ಸೇವಂತಿಕೆ ಮತ್ತು ತುಂಬೆ ಹೂವುಗಳಿಂದ ಅಲಂಕರಿಸುತ್ತಾರೆ. ಇವುಗಳ ಸುತ್ತಲೂ ಚಿಕ್ಕ ಮಕ್ಕಳು ಹಾಡುಗಳನ್ನು ಹೇಳುತ್ತಾ ನರ್ತಿಸುತ್ತಾರೆ. ಇದು ಭೂಮಿತಾಯಿಯನ್ನು ಆರಾಧಿಸುವುದೇ ಆಗಿದೆ. ಇನ್ನು ಗಂಡು ಮಕ್ಕಳು, ಗಾಳಿಪಟಗಳನ್ನು ಹಾರಿಸಿ ಆನಂದಿಸುತ್ತಾರೆ.

ಸಂಕ್ರಾಂತಿ ದಿನದಂದು ಕಪ್ಪು ಎಳ್ಳಿನೊಂದಿಗೆ ಸ್ನಾನ ಮಾಡಿ ಎಳ್ಳು ದಾನ ಕೊಟ್ಟರೆ ಸಂಚಿತ ಪಾಪ ವಿಮೋಚನೆಯಾಗುತ್ತದೆ ಎನ್ನುವ ನಂಬಿಕೆ ಯಿದೆ. ಕರ್ನಾಟಕದಲ್ಲಿ ಸಂಕ್ರಾಂತಿಗೆ ಸಂಬಂಧಪಟ್ಟ ಆಚರಣೆಗಳಲ್ಲಿ ಮುಖ್ಯ ವಾಗಿ ಕಂಡು ಬರುವುದು "ಎಳ್ಳು ಬೆಲ್ಲ"ದ ವಿನಿಮಯ. ಮನೆಯಲ್ಲಿ ಎಳ್ಳಿನ ಜೊತೆಗೆ ಸಕ್ಕರೆ ಅಚ್ಚುಗಳು, ಹಣ್ಣು ಮತ್ತು ಕಬ್ಬಿನ ತುಂಡುಗಳನ್ನು ಸಹ ಬೀರು ವುದುಂಟು. ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿದ ಬೆಲ್ಲ, ಒಣಕೊಬ್ಬರಿ, ಹುರಿ ಗಡಲೆ, ಸಿಪ್ಪೆ ತೆಗೆದ ಕಡಲೇಕಾಯಿ ಬೀಜ ಹಾಗೂ ಹುರಿದ ಬಿಳಿ ಎಳ್ಳನ್ನು ಸೇರಿಸಿ "ಎಳ್ಳುಬೆಲ್ಲ" ವನ್ನು ತಯಾರಿಸುತ್ತಾರೆ. ವಿವಾಹಿತ ಹಾಗೂ ಅವಿ ವಾಹಿತ ಹೆಣ್ಣು ಮಕ್ಕಳು ತಟ್ಟೆಯಲ್ಲಿ ಈ ಸಂಕ್ರಾಂತಿ ಎಳ್ಳಿನ ಜೊತೆ ಕಬ್ಬಿಣ ತುಂಡು, ಎಲಚಿಹಣ್ಣು ಬಾಳೆಹಣ್ಣು, ಕಿತ್ತಳೆ ಹಣ್ಣು ಹಾಗೂ ಬಣ್ಣ ಬಣ್ಣದ ಸಕ್ಕರೆ ಅಚ್ಚು ಇವುಗಳನ್ನು ಇಟ್ಟುಕೊಂಡು ಪ್ರತಿ ಮನೆಗೂ ಕೊಟ್ಟು ಬರುತ್ತಾರೆ. ಸಂಕ್ರಾಂತಿ ಎಳ್ಳನ್ನು ದಾನಮಾಡುವುದರಿಂದ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಇದೆ. "ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡು" ಎನ್ನುತ್ತಾ ಎಳ್ಳು ಬೆಲ್ಲ ವಿನಿಮಯ ಮಾಡುವ ಸಂಪ್ರದಾಯವು ಪ್ರೀತಿ ಸ್ನೇಹದ ಸಂಕೇ ತವೂ ಹೌದು, ಜೀವನದಲ್ಲಿ ಕಷ್ಟ ಸುಖಗಳನ್ನು ಸಮಾನವಾಗಿ ಸ್ವೀಕರಿಸ ಬೇಕೆಂಬ ಸಂದೇಶವೂ ಆಗಿದೆ. ಎಳ್ಳು ಹಾಗೂ ಬೆಲ್ಲಕ್ಕೆ ನಮ್ಮ ಹಿರಿಯರು ಬಹಳ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ. ಎಳ್ಳು ಶನಿಯ ಸಂಕೇತವಾದರೆ, ಬೆಲ್ಲ ಸೂರ್ಯನ ಸಂಕೇತ. ಇದೊಂದು ತಂದೆ ಮಕ್ಕಳ ಬಾಂಧವ್ಯ ಸೂಚಿ



ಸುತ್ತದೆ. ಎಳ್ಳು ಸ್ನೇಹ ಸೌಹಾರ್ದಗಳನ್ನು ಸೂಚಿಸುವುದಾದರೆ, ಬೆಲ್ಲ ಮಧುರವಾದ ನಡೆ - ನುಡಿಗಳನ್ನು ಸೂಚಿಸುತ್ತದೆ. ಇದರ ಜೊತೆಗೆ ಕಬ್ಬು, ಬಾಳೆಹಣ್ಣು, ಎಲಚಿಹಣ್ಣು ಇವುಗಳನ್ನು ಮನೆ ಮನೆಗೆ ಬೀರುವುದರ ಮೂಲಕ ಬಾಂಧವ್ಯಗಳನ್ನು ಬೆಸೆಯಲಿ ಎನ್ನುವುದು ಇದರ ಉದ್ದೇಶ.

ಸಾಯಂಕಾಲ ಸಮಯದಲ್ಲಿ 5 ವರ್ಷ ಒಳಗಿನ ಮಕ್ಕಳಿಗೆ ಹಣ್ಣೆರೆಯುವ ವಾಡಿಕೆ ಇದೆ. ಎಳ್ಳು, ಎಲಚಿಹಣ್ಣು, ಅವರೇ ಕಾಯಿ ಕಡ್ಲೆಕಾಯಿ , ಕಬ್ಬಿನ ಚೂರು, ಕಿತ್ತಳೆ ಹಣ್ಣಿನ ತೊಳೆ, ಇವುಗಳನ್ನು ಬೆರೆಸಿ ಪಾವಿನಲ್ಲಿ ತುಂಬಿ ಮಕ್ಕಳಿಗೆ ದೃಷ್ಟಿಯನ್ನು ತೆಗೆದು ಮಕ್ಕಳ ತಲೆಯ ಮೇಲೆ ಸುರಿದು ಆರತಿ ಮಾಡಿ ಶುಭವಾಗಲೆಂದು ಹರಸುತ್ತಾರೆ. ಹೀಗೆ ಮಾಡುವುದರಿಂದ ಮಕ್ಕಳಿಗೆ ಬರಬಹುದಾದ ಪೀಡೆ ತೊಲಗುತ್ತದೆ. ಬುದ್ದಿ ಬಲ ಹೆಚ್ಚಾಗುತ್ತದೆ ಹಾಗೂ ಬಾಲಾರಿಷ್ಟಗಳು ಸಹ ತೊಲಗುತ್ತವೆ ಎಂಬ ನಂಬಿಕೆ ಇದೆ. ಅಂದು ಮುತ್ತೈದೆಯರಿಗೆ ತಾಂಬೂಲ ಕೊಡುವುದೆಂದರೆ ಗೌರಿ ದೇವತೆಯನ್ನು ಪೂಜಿಸುವುದಾಗಿದೆ.ಎಳ್ಳು ಫಲವಂತಿಕೆಯನ್ನು, ಜೀರಿಗೆ ಹೆಣ್ಣು-ಗಂಡುಗಳ ಸಂಬಂಧವನ್ನು ಬೆಳೆಯುವ ಧಾನ್ಯಗಳಾಗಿದ್ದು ಅವನ್ನು ಬೆಳೆದು ಕೊಡುವ ಭೂಮಿ ಸಾಕ್ಷಾತ್ ತಾಯಿ. ಆ ಕಾರಣಕ್ಕೆ ರೈತರು **"ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ ಎಳ್ಳು ಜೀರಿಗೆ ಬೆಳೆಯೋಳ-ಭೂಮಿ ತಾಯ ಎದ್ದೊಂದುಗಳಿಗೆ ನೆನೆದೇನು"**ಎಂದು ಹಾಡಿ, ಭೂಮಿತಾಯಿಗೆ ಕೃತಜ್ಞತೆ ಸಲ್ಲಿಸುತ್ತಾರೆ. ನಂತರ ಬೆಳೆಗಳನ್ನು ಕೊಯ್ಲು ಮಾಡಿ ಕಣದಲ್ಲಿ ಹಾಕಿ ಶುದ್ಧ ಮಾಡಿ ದವಸ ಧಾನ್ಯಗಳನ್ನು ಮನೆಯಲ್ಲಿ ರಾಶಿ ಹಾಕಿ ಪೂಜಿಸಿ ಬಂದ ಬಡಬಗ್ಗರಿಗೆ ದಾನ ಮಾಡಿ ಭೂತಾಯಿಯ ಋಣಸ್ಮರಣೆ ಮಾಡುತ್ತಾರೆ. ಹಾಗೆ ಬಸವಣ್ಣ ಹಾಗೂ ದನಕರುಗಳನ್ನು ಚೆನ್ನಾಗಿ ತೊಳೆದು ಸ್ನಾನ ಮಾಡಿಸಿ ನಂತರ ರಂಗು ರಂಗಿನ ಬಣ್ಣಗಳಿಂದ ಉತ್ತಮ ರೀತಿಯಲ್ಲಿ ಶೃಂಗರಿಸುತ್ತಾರೆ. ನಂತರ ಕೊಟ್ಟಿಗೆಗೆ ಹುಲ್ಲು ಮೆದೆಗಳಿಗೆ ಹಾಗೂ ಮನೆಯ ಸೂರಿಗೆ ಮಾವಿನ ಸೊಪ್ಪು ಸಿಕ್ಕಸಿ ಅಲಂಕರಿಸುತ್ತಾರೆ. ಅಲಂಕಾರಗೊಂಡ ದನಕರುಗಳನ್ನು ಪೂಜಿಸಿ, ದೇವರಿಗೆ ನೈವೇದ್ಯ ಮಾಡಿದ ಅಡುಗೆ ಪದಾರ್ಥ ಹಾಗೂ ಹಣ್ಣುಗಳನ್ನು ತಿನ್ನಿಸುತ್ತಾರೆ. ನಂತರ ಮೆರವಣೀಗೆ ಸಹ ಮಾಡುತ್ತಾರೆ.

## ಕಿಚ್ಚು ಹಾಯಿಸುವುದು

ಗ್ರಾಮೀಣ ಪ್ರದೇಶಗಳಲ್ಲಿ ಸಂಕ್ರಾಂತಿ ದಿನ ರಾತ್ರಿ ನಡೆಯುವ ಒಂದು ಕುತೂಹಲಕಾರಿ ಕಾರ್ಯಕ್ರಮವೆಂದರೆ ದನಗಳಿಂದ ಕಿಚ್ಚು ಹಾಯಿಸು ವುದು. ಸಂಜೆ ಆಯಿತೆಂದರೆ ಗ್ರಾಮದ ಪೂರ್ವ ಭಾಗಕ್ಕೆ ಹುಲ್ಲು ಹಾಕಿ ಬೆಂಕಿ ಹಚ್ಚುತ್ತಾರೆ. ನಂತರ ಎಲ್ಲರ ಸಂತಸದ ನಡುವೆ ಹಸುಗಳನ್ನು ದೂರದಿಂದ ಓಡಿಸಿಕೊಂಡು ಬಂದು ಹೊತ್ತಿಸಿದ ಬೆಂಕಿಯ ಮೇಲೆ ಓಡಿಸುತ್ತಾರೆ. ಇದಕ್ಕೆ ಕಿಚ್ಚು ಹಾಯಿಸುವುದು ಎನ್ನುತ್ತಾರೆ. ಈ ಸಂದರ್ಭದಲ್ಲಿ ಕೇಕೆ ಹಾಕಿ ಎತ್ತು ಗಳನ್ನು ಓಡಿಸುವಾಗ ಇಡೀ ಊರಿಗೆ ಊರೇ ಸಂಭ್ರಮದಲ್ಲಿರುತ್ತದೆ. **"ಹೊಳೆ ಯಲ್ಲಿ ನೀರು ತುಂಬಿ ಹೊಲದಲ್ಲಿ ಬೆಳೆ ತುಂಬಿ, ಊರಿನ ಗುಡಿಯಲ್ಲಿ ಜನ ತುಂಬಿ ಬಸವಯ್ಯ ಕಿಚ್ಚ ಹಾಯಿಸಿದ್ರು ಮನತುಂಬಿ ಎತ್ತು ಎನ್ನ ಬಹುದೆ ಎಚಚೋರಿ ಬಸವನ ಸುತ್ತೇಳು ಲೋಕ ಸಲಗದವನ - ಬಸವನ ಸತ್ಯ ಮರೆಯಿತು ಧರೆಯಲ್ಲಿ"** ಎಂದು ಹಾಡನ್ನು ಹಾಡುತ್ತ ಕಿಚ್ಚು ಹಾಯಿಸುವುದು ರೈತರಿಗೆ ಸಂಭ್ರಮದ ಸಂಕೇತವಾಗಿದೆ. ಚಳಿಗಾಲ ದಲ್ಲಿ ಹಸುಗಳಿಗೆ ಸಾಕಷ್ಟು ಕ್ರಿಮಿಕೀಟಗಳು ಬಾಧಿಸುವ ಸಂದರ್ಭದಲ್ಲಿ ಬೆಂಕಿ ಯೊಡನೆ ಮೈ ಆಡಿಸುವುದರಿಂದ ಕಚ್ಚಿ ಕೊಂಡಿರುವ ಉಣ್ಣೆಗಳು ಬೆಂಕಿ ಶಾಖಕ್ಕೆ ಉದುರುತ್ತವೆ. ಕ್ರಿಮಿಕೀಟಗಳು ಬೆಂಕಿಗೆ ಬಿದ್ದು ಸಾಯುತ್ತವೆ. ರೈತರು ವರ್ಷವಿಡಿ ಬೇಸಾಯ ಕೆಲಸದಲ್ಲಿ ತಮ್ಮೊಂದಿಗೆ ಹೆಗಲು ಕೊಟ್ಟು ದುಡಿದ ದನಕರುಗಳಿಗೆ ಈ ರೀತಿ ಕೃತಜ್ಞತೆ ಸಲ್ಲಿಸುತ್ತಾರೆ.

ಭಾರತವು ವ್ಯವಸಾಯ ಪ್ರಧಾನ ದೇಶವಾಗಿರುವುದರಿಂದ ಬೆಳೆಗಳ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಹೊಸಬೆಳೆಗಳು ಬರುವ ಸುಗ್ಗಿಯ ಕಾಲ. ಹೊಸ ಅಕ್ಕಿಯಿಂದ ಪೊಂಗಲ್ ಅನ್ನು ತಯಾರಿಸಿಸಿ ದೇವರಿಗೆ ನೈವೇದ್ಯ ಮಾಡುತ್ತಾರೆ. ಹೊಸ ಅಕ್ಕಿ, ಹೊಸ ಬೆಲ್ಲ, ಹೊಸ ಬೇಳೆ ಕಾಳುಗಳಿಂದ ಮಾಡುವ ಪದಾರ್ಥವನ್ನು (ಪೊಂಗಲ್) ದೇವರಿಗೆ ನೈವೇದ್ಯ ಮಾಡುವುದೆಂದರೆ ಪ್ರಕೃತಿ ಮಾತೆಯನ್ನು ಪೂಜಿಸಿದಂತೆ. ಯಾಂತ್ರಿಕವಾಗಿ ಕಾಲ ಬದಲಾಗುತ್ತಿದೆ. ಸೆಲ್‌ಫೋನ್‌ಗಳು, ಲ್ಯಾಪ್‌ಟಾಪ್ ಗಳು ಸಮಾಜವನ್ನು ಹೆಚ್ಚಾಗಿ ಪ್ರಭಾವಿತಗೊಳಿಸುತ್ತಿವೆ. ಇಂತಹ ಮೋಹಕ್ಕೆ ಒಳಗಾಗಿರುವ ಅನೇಕ ಹಳ್ಳಿಗಳಲ್ಲಿ ದೇಶೀಯ ಸಾಂಪ್ರ ದಾಯಿಕ ಆಚರಣೆಗಳು ಮಾಸಿ ಹೋಗುತ್ತಿವೆ. ಜನಪ್ರಿಯ ಸಾಂಪ್ರದಾಯಿಕ ಆಟಗಳು ಅಳಿದು ಹೋಗಿ ಮೋಸದಿಂದ ಕೂಡಿದ, ಎತ್ತಿನ ಓಟದಂತಹ ಜೂಜಾಟಗಳನ್ನು ಮಾತ್ರ ನೋಡುತ್ತಿದ್ದೇವೆ.

ನಮ್ಮ ಹಳ್ಳಿಗಳಲ್ಲಿ ಹಿಂದಿನ ಗತವೈಭವ ಮತ್ತೆ ಮರುಕಳಿಸಬೇಕು. ಕರ್ಣಾನಂದವನ್ನು ನೀಡುವ ಅಂತಹ ಆಚರಣೆಗಳು ವಿಜೃಂಭಿಸಬೇಕು. ಸಂಭ್ರಮದ ಆಚರಣೆಗಳು, ಹಬ್ಬಗಳು ಕೇವಲ ನೆನಪಾಗಿ ಉಳಿಯ ಬಾರದೆಂದು ನನ್ನ ಕೋರಿಕೆ.

**ಅನುವಾದ: ಎಸ್. ವಸಂತ ಮಾಧವ**

# ಉಡುಪಿ ಪುತ್ತಿಗೆ ಮಠದ ಚತುರ್ಥಪರ್ಯಾಯ ವೈಶಿಷ್ಟ್ಯತೆ ಮತ್ತು ವೈಭವಗಳು

- ಓಂ ಪ್ರಕಾಶ್ ಭಟ್
9964025922



ಉಡುಪಿ ಎಂದರೆ ನೆನಪಾಗುವುದು ಕೃಷ್ಣ ಮತ್ತು ಪರ್ಯಾಯ ಮಹೋತ್ಸವ. ಆಚಾರ್ಯತ್ರಯರಲ್ಲಿ ಒಬ್ಬರಾದ ಶ್ರೀಮಧ್ವಾಚಾರ್ಯರು ಉಡುಪಿ ಸಮೀಪದ ಪಾಜಕದಲ್ಲಿ ಹುಟ್ಟಿ ಉಡುಪಿಯಿಂದಲೇ"ತತ್ವವಾದ" ಪ್ರಚಾರ ಮಾಡುತ್ತಾ ಸಾಧಕರಿಗೆ ಕಲಿಯುಗದಲ್ಲಿ ಸಾಧನೆ ಮಾಡಲು ಬರುವ ವಿಘ್ನಗಳನ್ನು ದೂರ ಮಾಡಲು ಕೃಷ್ಣನನ್ನು ಸ್ಥಾಪನೆ ಮಾಡಿದರು. ಆಗ ಕೃಷ್ಣನಿಗೆ ಅಷ್ಟಮಹಿಷಿಯರು.ಇಲ್ಲಿಯೂ ಪೂಜೆಗೆ ತನ್ನ ಅಷ್ಟಯತಿ ಶಿಷ್ಯರನ್ನು ನೇಮಕ ಮಾಡಿದರು. ಮಧ್ವರ ಕಾಲದಲ್ಲಿ ಅಷ್ಟ ಮಠಗಳು ಇರಲಿಲ್ಲ.

ಎರಡು ತಿಂಗಳಿಗೊಮ್ಮೆ ಎಂಟು ಜನ ಶಿಷ್ಯರು ತಮ್ಮ ತಮ್ಮೊಳಗೆ ಪೂಜಾಧಿಕಾರ ಬದಲಾಯಿಸಿಕೊಳ್ಳುತ್ತಿದ್ದರು "ಶ್ರೀವಾದಿರಾಜರು (1480-1600) ಅದನ್ನು ಬದಲಾಯಿಸಿ ಎರಡು ವರ್ಷಗಳಿಗೊಮ್ಮೆ ಪೂಜಾಧಿಕಾರ ಹಸ್ತಾಂತರ ಮಾಡುವ ಬದಲಾವಣೆ ತಂದರು. ಅದುವೇ 'ಪರ್ಯಾಯ ಮಹೋತ್ಸವ'. ಇದಕ್ಕಾಗಿ ಅಷ್ಟಯತಿ ಶಿಷ್ಯ ಪರಂಪರೆಗೆ ಪ್ರತ್ಯೇಕ ಮಠವನ್ನು ರಥಬೀದಿಯ ಸುತ್ತ ಕಟ್ಟಿಸಿದರು. ಉಳಿದ ಸಮಯದಲ್ಲಿ ಎಲ್ಲರೂ ಧರ್ಮ ಪ್ರಚಾರದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದರು. ಹೀಗಾಗಿ ಅಧಿಕಾರ ಹಸ್ತಾಂತರವನ್ನು ಹಬ್ಬದ ವಾತಾವರಣವನ್ನಾಗಿ ಬೆಳಕಿಗೆ ತಂದ ಕೀರ್ತಿ ವಾದಿರಾಜರಿಗೆ ಸಲ್ಲುತ್ತದೆ. ಪ್ರತೀ ಎರಡು ವರ್ಷಗಳಿಗೊಮ್ಮೆ ಉಡುಪಿಯಲ್ಲಿ ಕೃಷ್ಣ ಮಠ ಮತ್ತು ಅಷ್ಟ ಮಠಗಳಿಗೆ ಹಬ್ಬದ ವಾತಾವರಣ.ಈ ಬಾರಿ ಕೃಷ್ಣಾಪುರ ಮಠದ ಶ್ರೀಶ್ರೀವಿದ್ಯಾಸಾಗರ ತೀರ್ಥ ಶ್ರೀಪಾದರು ಯಶಸ್ವಿಯಾಗಿ ತಮ್ಮ ನಾಲ್ಕನೇ ಪರ್ಯಾಯವನ್ನು ನಡೆಸಿದರು.ತದನಂತರ ಪುತ್ತಿಗೆ ಮಠದ ಶ್ರೀ ಶ್ರೀ ಸುಗುಣೇಂದ್ರತೀರ್ಥರು ತಮ್ಮ ನಾಲ್ಕನೇ ಪರ್ಯಾಯವನ್ನು ಮಕರ ಸಂಕ್ರಮಣದ ನಂತರ ಜನವರಿ 18,2024 ರಂದು ನೆರವೇರಿಸಲಿದ್ದಾರೆ. ಈವರೆಗೆ ಮೂರು ಪರ್ಯಾಯಗಳನ್ನು ಯಶಸ್ವಿಯಾಗಿ ನೆರವೇರಿಸಿರುವ ಶ್ರೀಪಾದರು ಈ ಬಾರಿ ತಮ್ಮ ಶಿಷ್ಯ ಶ್ರೀಶ್ರೀಸುಶ್ರೀಂದ್ರ ತೀರ್ಥರೊಂದಿಗೆ ಪರ್ಯಾಯವನ್ನು ನಡೆಸಲಿದ್ದಾರೆ.

**ಹಿಂದಿನ ಪರ್ಯಾಯದ ವೈಶಿಷ್ಟ್ಯಗಳು :**

ಹದಿನಾಲ್ಕರ ಹರೆಯದಲ್ಲೇ ಪ್ರಥಮ ಪರ್ಯಾಯವನ್ನು ಯಶಸ್ವಿಯಾಗಿ ನೆರವೇರಿಸಿದ ನಂತರ ಎರಡನೇ ಪರ್ಯಾಯದಲ್ಲಿ ಅವರು ತಮ್ಮ ಹಲವಾರು ಯೋಜನೆಗಳಿಂದ ಅದಾಗಲೇ ಪ್ರಖ್ಯಾತಿಗೊಂಡಿದ್ದರು. ಪ್ರಬುದ್ಧ ಲೇಖಕರೂ, ಉತ್ತಮ-ಗಾಢವಾದ ಪಾಂಡಿತ್ಯ ಹೊಂದಿರುವ, ಆಂಗ್ಲಭಾಷೆಯ ಪ್ರಭುತ್ವವನ್ನೂ ಹೊಂದಿರುವ ಶ್ರೀಪಾದರು 80-90ರ ದಶಕದಲ್ಲಿ ಹಲವಾರು ಲೇಖನ ಕೃತಿಗಳನ್ನು ಬರೆದಿದ್ದರು.



'ಸುಗುಣಮಾಲಾ' ಎಂಬ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಸನಾತನ ಶಿಕ್ಷಣ ಪದ್ಧತಿ ಉಳಿಸಲು ಗುರುಕುಲ ಮಾದರಿ ಶಿಕ್ಷಣವನ್ನೂ ಪ್ರಾರಂಭಿಸಿದ್ದರು. ಈ ಹಂತದಲ್ಲಿ ಅಂದರೆ 1992-1994ರಲ್ಲಿ ತಮ್ಮ ದ್ವಿತೀಯ ಪರ್ಯಾಯವನ್ನು ಗೀತಾ ಪರ್ಯಾಯವನ್ನಾಗಿ ನೆರವೇರಿಸಿದ್ದರು.ಲಕ್ಷ ಜನರಿಂದ ಭಗವದ್ಗೀತೆಯನ್ನು ಬರೆಸಿ ಕೃಷ್ಣನಿಗೆ ಅರ್ಪಿಸಿ ಗೀತಾಮಂದಿರವನ್ನು ವೈಶಿಷ್ಟ್ಯ ಪೂರ್ಣವಾಗಿ ಲೋಕಾರ್ಪಣೆಗೊಳಿಸಿದ್ದರು.ಇದು ಶಿಲೆಯಲ್ಲಿ ಕೆತ್ತಿರುವ ಗೀತೆಯ ಮಂದಿರ. ಉದ್ಘಾಟನೆಗೆ ನೇಪಾಳದ ರಾಜರು ಬಂದಿದ್ದರು. ಶ್ರೀಪಾದರ ಕೀರ್ತಿ ಅಲ್ಲಿಯವರೆಗೂ ಬೆಳೆದಿತ್ತು.

ಮುಂದೆ ತಮ್ಮ ತೃತೀಯ ಪರ್ಯಾಯವನ್ನು 2008-2010 ರಲ್ಲಿ "ವಿಶ್ವಪರ್ಯಾಯ" ವನ್ನಾಗಿ ನೆರವೇರಿಸಿದ್ದರು. ಹಲವಾರು ದೇಶಗಳಿಂದ ಕೃಷ್ಣ ಭಕ್ತರು ಆಗಮಿಸಿದ್ದರು.ಕೃಷ್ಣನ ರಥೋತ್ಸವಕ್ಕೆ 'ನವರತ್ನರಥ'ವನ್ನು ಅರ್ಪಿಸಿದ್ದರು.ನೂತನ ಭೋಜನ ಶಾಲೆ 'ಅನ್ನಬ್ರಹ್ಮ' ವನ್ನು ಸಮಾಜಕ್ಕೆ ಅರ್ಪಿಸಿ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ನೆರವೇರಿಸಿದ್ದರು.






## ಶ್ರೀ ಪಾದರ ಚತುರ್ಥ ಪರ್ಯಾಯ ಮತ್ತು ಯೋಜನೆಗಳು

2024 -2026 ರ ತಮ್ಮ ಚತುರ್ಥ ಪರ್ಯಾಯದಲ್ಲಿ ಮುಖ್ಯವಾಗಿ ಒಂದು ಕೋಟಿ ಜನರಿಂದ ಭಗವದ್ಗೀತೆಯನ್ನು ಬರೆಸುವ 'ಕೋಟಿಗೀತಾಲೇಖನ ಯಜ್ಞ' ಎಂಬ ಮಹತ್ತರವಾದ ಯೋಜನೆಯನ್ನು ಈಗಾಗಲೇ ಪ್ರಾರಂಭಗೊಳಿಸಿ ಜನರಿಗೆ ಬರೆಯಲು ಪುಸ್ತಕ,ಗೀತಾಶ್ಲೋಕಗಳನ್ನು ಕೊಡುತ್ತಿದ್ದಾರೆ. ಜನರೇ ಬಂದು ಉತ್ಸುಕರಾಗಿ ಭಕ್ತಿಯಿಂದ ಬರೆಯಲು ಪ್ರಾರಂಭಿಸಿದ್ದಾರೆ.

ಗೀತಾಚಾರ್ಯನ ವಿಶೇಷ ಸನ್ನಿಧಾನವುಳ್ಳ ಗೀತಾ ಮಂದಿರದಲ್ಲಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಭಕ್ತರಿಂದ ಗೀತಾಪಾರಾಯಣ ಯಜ್ಞವು ನೆರವೇರಲಿದೆ. ಅಂತಿಮವಾಗಿ ಪರ್ಯಾಯದ ಕೊನೆಯಲ್ಲಿ ಅಂತರಾಷ್ಟ್ರೀಯ ಗೀತಾ ಸಮ್ಮೇಳನವನ್ನು ನಡೆಸುವ ಸಂಕಲ್ಪ ಇದೆ.

ಲಕ್ಷ-ಕೋಟಿ ಸಂಖ್ಯೆಯಲ್ಲಿ ಬರುವ ಭಕ್ತರಿಗೆ ಸೂಕ್ತ ವಸತಿ ಸೌಲಭ್ಯಕ್ಕಾಗಿ "ಉಡುಪಿಕ್ಷೇತ್ರವಾಸ" ಎಂಬ ನೂತನ -ಆಧುನಿಕ ವಸತಿಗೃಹ ಸಮುಚ್ಚಯ ನಿರ್ಮಾಣವಾಗುತ್ತಿದೆ. ಇದರ ಲೋಕಾರ್ಪಣೆಯೂ ಪರ್ಯಾಯದಂದು ನಡೆಯಲಿದೆ.

ಶ್ರೀಕೃಷ್ಣಮಠದ ಉತ್ತರ ಪ್ರವೇಶಭಾಗದ ಮುಖ್ಯರಸ್ತೆಯಲ್ಲಿ ಶ್ರೀಮಧ್ವಾಚಾರ್ಯರು ಶ್ರೀಕೃಷ್ಣನ ಪ್ರತಿಮೆಯನ್ನು ಎತ್ತಿಕೊಂಡು ಪ್ರವೇಶ ಮಾಡಿದ ಪವಿತ್ರ ಸ್ಥಳದಲ್ಲಿ ಶ್ರೀ ಮಧ್ವರು ಕೃಷ್ಣನನ್ನು ಎತ್ತಿಕೊಂಡು ಬರುವ ಬೃಹತ್ ಭವ್ಯವಿಗ್ರಹವಿರುವ 'ಶ್ರೀಮದ್ವೇಶ ವೃತ್ತ' ನಿರ್ಮಾಣದೊಂದಿಗೆ 'ಸ್ವಾಗತಂ ಕೃಷ್ಣ' ಎಂಬ ಸುಂದರವಾದ ಸ್ವಾಗತಗೋಪುರ ಲೋಕಾರ್ಪಣೆಗೊಳ್ಳಲಿದೆ.

1974 ರಲ್ಲಿ ಸನ್ಯಾಸಸ್ವೀಕಾರ ಮಾಡಿದ ಶ್ರೀಗಳು ತಮ್ಮ ಸನ್ಯಾಸಸ್ವೀಕಾರದ 50ನೇ ಸಂವತ್ಸರದ ನೆನಪಿಗೆ ಸನ್ಯಾಸದ ಸುವರ್ಣೋತ್ಸವವನ್ನು ಹಲವಾರು ಕಾರ್ಯಕ್ರಮಗಳೊಂದಿಗೆ ಆಚರಿಸಲಿದ್ದಾರೆ. ಮುಖ್ಯವಾಗಿ ಕೋಟಿಗೀತಾ ಲೇಖನ ಯಜ್ಞದ ನೆನಪಿಗೆ ರತ್ನಖಚಿತ ಪಾರ್ಥಸಾರಥಿ ರಥ ಗೀತಾರಥ, ಕನಕನ ಕಿಂಡಿಗೆ ಕನಕಕವಚ,ಸುಂದರ ಉಡುಪಿಗಾಗಿ ಹಲವಾರು ಯೋಜನೆಗಳು,ಹಲವಾರು ಕೃತಿಗಳ ಪ್ರಕಟನೆ ಮುಂತಾದ ಸಮಾಜಮುಖೀ ಕಾರ್ಯಕ್ರಮಗಳೂ ಇರಲಿವೆ.

## ಸುಗುಣಗಳ ಗಣಿ ಸುಗುಣೇಂದ್ರರು

ಪಲಿಮಾರು ಮಠದ ಶ್ರೀವಿದ್ಯಾಮಾನ್ಯರ ವಿದ್ಯಾ ಶಿಷ್ಯರಾಗಿ ಬೆಳೆದ ಶ್ರೀಪಾದರು ವೇದ-ವೇದಾಂತ-ಸುಧಾಂತ ಗ್ರಂಥಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಅಷ್ಟೇ ಮನ ಮುಟ್ಟುವಂತೆ ಪ್ರವಚನ ನೀಡುವ ವಾಗ್ಮಿಗಳೂ ಹೌದು. ಆದ್ದರಿಂದಲೇ ಪ್ರಪಂಚದಾದ್ಯಂತ ಇವರು ಭಕ್ತರನ್ನು ಹೊಂದಿದ್ದಾರೆ.

ನ್ಯೂಜೆರ್ಸಿ, ಫೀನಿಕ್ಸ್,ಲಾಸ್‌ಎಂಜಲೀಸ್,ಹ್ಯೂಸ್ಟನ್, ಆಸ್ಟಿನ್,ಡಲ್ಲಾಸ್, ಸ್ಯಾನ್ ಹೊಸೆ, ಅಟ್ಲಾಂಟ, ರಾಲೆ,



ಶಿಕಾಗೋ ಸಿಯಾಟಲ್ ಮುಂತಾದ ಅಮೇರಿಕಾದ ಬೇರೆ ಬೇರೆ ಕಡೆಗಳಲ್ಲಿ ಕೃಷ್ಣ ಕ್ಷೇತ್ರಗಳನ್ನೂ ಮಠವನ್ನು ಸ್ಥಾಪಿಸಿದ್ದಾರೆ. ಅಲ್ಲದೆ ಇಂಗ್ಲೆಂಡ್, ಕೆನಡಾ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿಯೂ ಕೃಷ್ಣ ವೃಂದಾವನ ಸ್ಥಾಪಿಸಿದ್ದಾರೆ. ಹಲವಾರು ದೇಶಗಳ, ಹಲ ವಾರು ಊರುಗಳಲ್ಲಿ ಬೇಡಿಕೆಗಳು ಇನ್ನೂ ಬೆಳೆಯುತ್ತಲೇ ಇದೆ. ಶ್ರೀಪಾದರು ದೇಶಾದ್ಯಂತ ಪ್ರಪಂಚದಾದ್ಯಂತ ಕೃಷ್ಣನನ್ನು, ಕೃಷ್ಣ ಭಕ್ತಿಯನ್ನು ಹಂಚುತ್ತಿದ್ದಾರೆ.



ಭಾರತದಲ್ಲೂ,ಹತ್ತಾರು ದೇಗುಲಗಳ ಜವಾಬ್ದಾರಿ, ನಾಲ್ಕಾರು ವಿದ್ಯಾಪೀಠಗಳನ್ನು, ಗೋಶಾಲೆಗಳನ್ನು ನಡೆಸುತ್ತಿದ್ದಾರೆ.

"ಬೇಕುಗಳಿಗೆ ಬೇಕು ಬ್ರೇಕು," ಎಂದು ಹೇಳುವ ಶ್ರೀಪಾದರು ಯುವಜನರಿಗೆ ಆತ್ಮೀಯರಾಗಿದ್ದಾರೆ. "ಬರೆಯೋಣ ಬನ್ನಿ ಭಗವದ್ಗೀತೆ ಯನ್ನು, ತೊಳೆಯೋಣ ಬನ್ನಿ ಭವದ ಕೊಳೆಯನ್ನು" ಎಂದು ಕರೆ ನೀಡಿರುವ ಶ್ರೀಪಾದರು ತಮ್ಮ ಚತುರ್ಥಪರ್ಯಾಯದಲ್ಲಿ ಒಮ್ಮೆ ಯಾದರೂ ಎಲ್ಲರೂ ಉಡುಪಿಗೆ ಬನ್ನಿ ಎಂದು ಕರೆಕೊಟ್ಟಿದ್ದಾರೆ.

ಇಂತಹ ಅಪೂರ್ವ ಸನ್ನಿವೇಶಕ್ಕೆ ಇಂದು ಉಡುಪಿ ಸಾಕ್ಷಿ ಯಾಗಿದೆ.

**ಶ್ರೀಪಾದರ ಜ್ಞಾನಕಾರ್ಯ ಕೃತಿಗಳು:**

ಆದಮಾರಿನ ಆದರ್ಶ ಗುರುಕುಲದಲ್ಲಿ ಶ್ರೀವಿದ್ಯಾಮಾನ್ಯರ ಗರಡಿಯಲ್ಲಿ ಅಧ್ಯಯನ ಮಾಡುತ್ತಿರುವಾಗಲೇ ತತ್ವವಾದ, ಉದಯ ವಾಣಿಗಳಿಗೆ ಲೇಖನ ಬರೆಯುತ್ತಿದ್ದರು. ಇವರ ಲೇಖನ ಶೈಲಿಯನ್ನು ಮೆಚ್ಚಿ ಗುರುಗಳು ತಮ್ಮ ಬಳಿ ಇದ್ದ ಧರ್ಮಭೋಧ ಪ್ರೆಸ್ ಅನ್ನು ಇವ ರಿಗೆ ನೀಡಿ ಪುಸ್ತಕ ಪ್ರಕಾಶನ - ಕೃತಿ ಬರೆಯಲು ಪ್ರೇರಣೆ ನೀಡಿದರು. ಆಗ ಹುಟ್ಟಿಕೊಂಡದ್ದು 'ಸುಗುಣಮಾಲಾ' ಮಾಸಪತ್ರಿಕೆ ಸುಧಾ ಸಂದೇಶ,ಹಬ್ಬಗಳ ಸಂದೇಶ,ಮರ್ಮಮೀಮಾಂಸೆ,ಸುವಾಣಿ



ಮುಂತಾದ ಲೇಖನ ಮಾಲೆಗಳನ್ನು ಸ್ವತಃ ಬರೆದು ಪತ್ರಿಕೆ ಯನ್ನು ಬೆಳೆಸಿದರು.'ಗೀತಾಧ್ಯಾಯ ಭಾವ ಪರಿಚಯ' ಎಂಬ ಇವರ ಲೇಖನ ಮಾಲೆ ನಂತರ ಕೃತಿಯಾಗಿ ಸಾವಿರಾರು ಪ್ರತಿಗಳು ಮಾರಾಟಗೊಂಡಿದೆ. ಪ್ರವಚನ ಆಧಾರಿತ ರಾಮಾಯಣ ರಸಾಯನ, ರಾಮಾಯಣ ರಹಸ್ಯ ಸ್ವಾರಸ್ಯ,ತುಳಸಿ,ಹಿಂದೂಧರ್ಮ ಎಂದ ರೇನು? ದೇಹಪ್ರೇಮ-ದೇಶಪ್ರೇಮ-ದೇವಪ್ರೇಮ ಮುಂತಾದ ಗ್ರಂಥಗಳು ಪ್ರಸಿದ್ಧಿ ಹೊಂದಿತ್ತು.

ಆಚಾರ್ಯಮಧ್ವರು,ಶ್ರೀವಿದ್ಯಾಮಾನ್ಯರು, ರಾಘ ವೇಂದ್ರ ಗುರುಗಳ ಬಗ್ಗೆ ಕೂಡಾ ಚಿಕ್ಕ ಚಿಕ್ಕ ಗ್ರಂಥ ಗಳನ್ನು ಬರೆದಿದ್ದಾರೆ.

ಇವರ ಪ್ರವಚನ ಆಧಾರಿತ "ಸುಗುಣೇಂದ್ರ ವಾಣಿ" "ಧಾರ್ಮಿಕ ಪ್ರಶ್ನೆ-ಮಾರ್ಮಿಕ ಉತ್ತರ," "ಗೀತಾ ಅಕ್ಕಿಮುಡಿ" ಮುಂತಾದ ಕೃತಿಗಳು ಶ್ರೀಪಾದರ ಅಪೂರ್ವ ಪ್ರವಚನ ಶೈಲಿಯನ್ನು ಹಿಡಿದಿಟ್ಟಿದೆ.

ಶ್ರೀಪಾದರ ಜೀವನಚರಿತ್ರೆ,ಸಂದೇಶಗಳ ಸಂಗ್ರಹ, ಸುಧಾಚಿಂತನೆ,ಭಾಗವತ ಚಿಂತನೆ,ಉಪನಿ ಷತ್ ಚಿಂತನೆ ಮುಂತಾದ ಕೃತಿಗಳು ಪರ್ಯಾಯ ಸಮಯದಲ್ಲಿ ಬಿಡುಗಡೆಗೊಳ್ಳಲಿದೆ.

ಈ ಸಮಯಕ್ಕಾಗಿ, ಜ್ಞಾನಕ್ಕಾಗಿ ಕಾಯೋಣ.

ಪರ್ಯಾಯವು ಯಶಸ್ವಿಯಾಗಿ ನೆರವೇರ ಲೆಂದು ಭಗವಂತನಲ್ಲಿ ಪ್ರಾರ್ಥಿಸೋಣ.

# ಸಂಕ್ರಾಂತಿ

– ಬೆಳವಾಡಿ ಅಶ್ವತ್ಥನಾರಾಯಣ

81059 15747



ಸಂಕ್ರಾಂತಿ ಪುರುಷೋನಾಮ ಕಾಲಾತ್ಮಾ ಘೋರರೂಪಭೃತ್ ।
ಭಕ್ತ್ಯಾ ಸಂಪೂಜ್ಯತೇ ಯೈಸ್ತು ತೇಷಾಂ ಪಾಪಂ ವಿನಾಶಯೇತ್॥

ಹಬ್ಬಗಳು ಮಾನವನ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಆದುದರಿಂದ ಯಾವಾಗಿನಿಂದ ಹಬ್ಬಗಳು ಪ್ರಚಾರ ಪಡೆದವು ಅಥವಾ ಆಚರಣೆಯಲ್ಲಿ ಬಂದವು ಎಂಬುದನ್ನು ನಿರ್ಧರಿಸುವುದು ಕಷ್ಟಸಾಧ್ಯವು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ,"ಮಾನವನು ಸುಧಾರಿತ ರೀತಿಯಲ್ಲಿ ಬದುಕಲು ಪ್ರಾರಂಭಿಸಿದಾಗಲೇ ಹಬ್ಬಗಳು ಸಹ ಆಚರಣೆಯಲ್ಲಿ ಬಂದವು" ಎಂದು ತಿಳಿದು ಬರುತ್ತದೆ. ವ್ಯವಸ್ಥಿತವಾದ ಜೀವನ ಶೈಲಿಯನ್ನು ಮಾನವನು ರೂಪಿಸಿಕೊಂಡಾಗ ಹಬ್ಬಗಳನ್ನು ಪ್ರಮುಖಗೊಳಿಸಿಕೊಂಡನು.

ಹಬ್ಬಗಳ ಮುಖ್ಯ ಗುರಿಯು ಇಹಪರಗಳಲ್ಲಿ ಒಳ್ಳೆಯ ಫಲಗಳನ್ನು ದೊರಕಿಸಿಕೊಳ್ಳುವುದಾಗಿದೆ.ನಮ್ಮ ಬದುಕಿನಲ್ಲಿ ಬರುವ ನಾನಾ ಬೇಸರಗಳಿಂದ ದೂರವಿರಲು ಹಬ್ಬಗಳು ಸಹಾಯಕವಾಗಿವೆ. ಹಬ್ಬಗಳ ಹೆಸರಿನಲ್ಲಿಲ್ಲಾದರೂ ಜನರು ತಮ್ಮ ಪರಿತಾಪಗಳಿಂದ ದೂರ ಸರಿದಿರುತ್ತಾರೆ.

ಈ ಉದ್ದೇಶವನ್ನು ಈಡೇರಿಸುವುದಕ್ಕಾಗಿಯೇ ಸಾರ್ವಜನಿಕವಾಗಿ ಉತ್ಸವ, ಜಾತ್ರೆ ಮುಂತಾದವನ್ನು ಆಚರಿಸಿಕೊಂಡು ಬರಲಾಗಿದೆ.

ಈ ರೀತಿಯಲ್ಲಿ ಹಬ್ಬಗಳು ಜೀವನದ ಎಲ್ಲ ಘಟನೆಗಳ ಮೇಲೂ ಪ್ರಭಾವ ಬೀರುವಂತಹವಾಗಿವೆ.

ಹಬ್ಬಗಳಿಗೆ ಧಾರ್ಮಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕವಾದ ಫಲಗಳಿರುವುದರಿಂದ ಎಲ್ಲ ರೀತಿಯ ಜನರಿಗೂ ಹಬ್ಬಗಳು ಮನೋರಂಜನೆ, ಆನಂದ ಮತ್ತು ಬದಲಾವಣೆ ತರುವ ಸಂಗತಿಗಳೆನಿಸಿವೆ.

ವೈಯುಕ್ತಿಕವಾಗಿ ಮತ್ತು ಸಮಗ್ರವಾಗಿ ಹಬ್ಬಗಳು, ಸಾಮರಸ್ಯವನ್ನು,ಸೌಹಾರ್ದತೆಯನ್ನು,ರಾಷ್ಟ್ರೀಯತೆಯನ್ನು ತಿಳಿಸುವಂತಹವಾಗಿವೆ.

ಭಾರತ ದೇಶವು ಅನೇಕ ಧರ್ಮದ ಜನರಿರುವ ದೇಶವಾಗಿರುವುದು.ಭಾರತೀಯ ಸಂಸ್ಕೃತಿಯು ಒಂದು ಸಮ್ಮಿಶ್ರ ಜೀವನ ಪದ್ಧತಿಯಾಗಿರುವುದು.ಅನೇಕತೆಯಲ್ಲಿ ಏಕತೆ, ವೈವಿಧ್ಯತೆಯಲ್ಲಿ ಏಕತೆ ಇಲ್ಲಿನ ವಿಶೇಷವಾಗಿರುವುದು.ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅನೇಕ ಹಬ್ಬಗಳನ್ನು ಆಚರಿಸುತ್ತಾ ಬಂದಿದ್ದಾರೆ.

ಇಂತಹ ಹಬ್ಬಗಳಲ್ಲಿ ಸಂಕ್ರಾಂತಿ ಹಬ್ಬ ಸಹ ಒಂದು. ಸಂಕ್ರಾಂತಿ , ಮಕರಸಂಕ್ರಾಂತಿ, ಮಕರ ಸಂಕ್ರಮಣ, ಪೊಂಗಲ್ ಎಂದು ನಾನಾ ನಾಮಗಳಿಂದ ಕರೆಯಲ್ಪಡುವ ಹಬ್ಬವು ಜನವರೀ ತಿಂಗಳಿನಲ್ಲಿ ಬರುವುದು.

ಸಕಲ ಜಗತ್ತಿಗೆ ಆಧಾರನಾದ ಸೂರ್ಯ ನಾರಾಯಣನ ಆರಾಧನೆಯೇ ಸಂಕ್ರಾಂತಿಹಬ್ಬ. ನಮ್ಮ ಸಕಲ ಚರಾಚರಗಳಿಗೆ, ಬೆಳವಣಿಗೆ ಸಮೃದ್ಧಿ, ಸಂತಸ, ಚೇತನ ಶಕ್ತಿಯಾಗಿರುವ ಪ್ರತ್ಯಕ್ಷ ದೇವರೆನಿಸಿದ ಸೂರ್ಯನು ಅಮೋಘ ಶಕ್ತಿಯ ಭಂಡಾರ. ಪ್ರಾಚೀನ ಕಾಲದಿಂದಲೂ ಸೂರ್ಯನಾರಾಧನೆಯು ನಡೆದು ಬಂದಿದೆ.

ಮಕರ ಸಂಕ್ರಮಣ ಹಬ್ಬಕ್ಕೆ ಪ್ರಕೃತಿಯು ಮತ್ತು ಸೂರ್ಯ ಇವೆರಡು ಕಾರಣವಾಗಿವೆ. ಭಾರತೀಯ ಖಗೋಳಜ್ಞರ ಅಭಿಪ್ರಾಯದಂತೆ ಭೂಮಿಯು ಸ್ಥಿರವಾಗಿದ್ದು, ಸೂರ್ಯನು ಚಲಿಸುತ್ತಾನೆ. ಹನ್ನೆರಡು ತಿಂಗಳಲ್ಲಿ, ಹನ್ನೆರಡು ರಾಶಿಗಳಲ್ಲಿರುತ್ತಾನೆ. ಅಂದರೆ ಸೂರ್ಯನ ಗತಿಯು ಬದಲಾವಣೆಯಾಗುವುದನ್ನು ಸಂಕ್ರಾಂತಿ ಎಂದು ಕರೆದಿದ್ದಾರೆ.

ಭಾರತೀಯರೂ ಸಹ ಸೂರ್ಯಮಂಡಲದಲ್ಲಿರುವ ಗ್ರಹಗಳಲ್ಲಿ ಭೂಮಿಯೂ ಒಂದು, ಸೂರ್ಯನನ್ನು ಭೂಮಿ ಸುತ್ತುವುದು ಎಂದು ತಿಳಿದಿದ್ದಾರೆ. ಆದರೆ ದೃಕ್‌ಗಣಿತದಂತೆ ಕಣ್ಣಿಗೆ ಕಾಣುವ ರೀತಿಯಲ್ಲಿಯೇ ಸೂರ್ಯನೇ ಚಲಿಸುತ್ತಾನೆ ಎಂದು ಹೇಳಿದ್ದಾರೆ.

ಪ್ರತಿ ತಿಂಗಳೂ ಸಹ ಸೂರ್ಯನ ಚಲನೆಯಲ್ಲಿ ಬದಲಾವಣೆ ಆಗುವುದು. ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಪ್ರವೇಶಿಸುವುದನ್ನು ಪರ್ವದಿನವೆಂದೇ ಕರೆದಿದ್ದಾರೆ. ಆದರೆ ಮಕರರಾಶಿಗೆ ಪ್ರವೇಶ ಮಾಡಿದಾಗ ಸೂರ್ಯನು ಭೂಮಧ್ಯವೃತ್ತದ ದಕ್ಷಿಣದಿಂದ, ಉತ್ತರದ ಕಡೆಗೆ ಸರಿದು ಹೆಚ್ಚು ಬಿಸಿಲು ಬರಲಾರಂಭಿಸುವುದು.

ಚೈತ್ರ ಮಾಸದಿಂದಾರಂಭಿಸಿ ಹನ್ನೆರಡು ಮಾಸಗಳಿರುವಾಗ ಮೇಷ ಮುಂತಾದ ರಾಶಿಗಳಿರುತ್ತವೆ. ಸೂರ್ಯನ ಚಲನೆಯ ಪರಿಣಾಮವಾಗಿ ಚಳಿಕಡಿಮೆಯಾಗಿ ಹಗಲಿನ ಅವಧಿಯು ಹೆಚ್ಚಾಗುತ್ತಾ ಹೋಗುವುದು.

ಈ ಕಾಲವನ್ನು ಉತ್ತರಾಯಣ ಪುಣ್ಯ ಕಾಲವೆಂದು ಕರೆದಿದ್ದಾರೆ. ಉತ್ತರಾಯಣದಲ್ಲಿ ಸ್ವರ್ಗದ ಬಾಗಿಲು ತೆರೆದಿರುವುದೆಂದು ನಂಬಿದ್ದಾರೆ. ಇದಕ್ಕೆ ಮಹಾಭಾರತದಲ್ಲಿ ಭೀಷ್ಮರು ಇಚ್ಛಾ ಮರಣಿಗಳಾದರೂ ಉತ್ತರಾಯಣ ಬರುವವರೆಗೆ ಕಾದಿದ್ದನ್ನು ಆಧಾರವಾಗಿ ತಿಳಿಯಬಹುದಾಗಿದೆ. ಮಕರಸಂಕ್ರಾಂತಿಯಿಂದ ದೇವತೆಗಳ ಹಗಲು ಆರಂಭವಾಗಿ, ರಾಕ್ಷಸರಿಗೆ ರಾತ್ರಿ ಶುರುವಾಗುವುದು ಎಂದು ಪುರಾಣಗಳಿಂದ ತಿಳಿದು ಬರುತ್ತದೆ. ಈ ಸುಸಮಯದಲ್ಲಿ ''ಎಳ್ಳು ಬೆಲ್ಲ ಸ್ವೀಕರಿಸಿ ಒಳ್ಳೆ ಮಾತನಾಡಿ'' ಶುಭವನ್ನು ಹಾರೈಸುವುದು ಸಂಪ್ರದಾಯವೆನಿಸಿದೆ.

ಮಕರ ಸಂಕ್ರಮಣ ಹಬ್ಬವನ್ನು ಎರಡು ದಿನಗಳಲ್ಲಿ ಆಚರಿಸುತ್ತಾರೆ. ಮೊದಲನೇ ದಿನವನ್ನು ಭೋಗಿ ಎಂದು ಆಚರಿಸುವರು. ಆ ದಿನದಂದು, ಜೋಳ, ಸಜ್ಜೆ ಮುಂತಾದವುಗಳ ರೊಟ್ಟಿ, ಎಳ್ಳಿನ ಪದಾರ್ಥಗಳು ಆಹಾರವಾಗಿರುತ್ತವೆ. ಮಕರ ಸಂಕ್ರಾಂತಿಯಂದು ಅಭ್ಯಂಜನ, ನದಿ-ಸಮುದ್ರಸ್ನಾನ, ಪಿತೃತರ್ಪಣ ಎಳ್ಳು ಬೆಲ್ಲ ದಾನ, ಸಂಕ್ರಾಂತಿ ಫಲಶ್ರವಣ ಮುಂತಾದ ಕಾರ್ಯಗಳನ್ನು ಮಾಡುತ್ತಾರೆ.

ಗಂಗಾ, ಕಾವೇರಿ ಮುಂತಾದ ನದಿಗಳಲ್ಲಿ ಕೋಟ್ಯಾಂತರ ಜನರು ಪವಿತ್ರಸ್ನಾನ ಮಾಡುತ್ತಾರೆ.

ಸಂಕ್ರಮಣದ ಹಬ್ಬಕ್ಕಾಗಿಯೇ ಸಕ್ಕರೆ, ಎಳ್ಳು ಮುಂತಾದವುಗಳಿಂದ ಮಾಡಿದ ವಿಶೇಷ ಸಿಹಿ, ಕುಸುರೆಳ್ಳುಸಿಗುವುದು. ಸಂಕ್ರಾಂತಿಯ ದಿನವಲ್ಲದೇ ಮರುದಿವಸ ಸಹ ಎಳ್ಳು ಬೆಲ್ಲ ವಿನಿಮಯ ಮಾಡಿ ಶುಭ ಹಾರೈಸುತ್ತಾರೆ. ಈ ದಿನ ಮಧ್ಯಾಹ್ನದವರೆಗೆ ದೇವಾಲಯಗಳಲ್ಲಿ ಪೂಜೆ ನಡೆದರೆ, ಸಾಯಂಕಾಲ ಪಂಚಾಂಗ ಶ್ರವಣ, ಫಲಶ್ರವಣ ಕಾರ್ಯಗಳು ನಡೆಯುವವು.

ಸೂರ್ಯನು ಸಂಕ್ರಾಂತಿ ಪುರುಷನೆಂದು ತಿಳಿದು ಮುಂದಿನ ಜೀವನದ ಬಗ್ಗೆ ಕಾಲಮಾನ ಮಳೆ ಬೆಳೆಗಳ ಬಗ್ಗೆ ಭವಿಷ್ಯ ತಿಳಿಯುತ್ತಾರೆ.

ತಮಿಳುನಾಡಿನಲ್ಲಿ ವಿಶೇಷವಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬವನ್ನು ಪೊಂಗಲ್ ಎಂದು ಕರೆಯುತ್ತಾರೆ. ಮೊದಲ ದಿನವನ್ನು ಭೋಗಿ ಪೊಂಗಲ್ ಎನ್ನುತ್ತಾರೆ. ಪರಿವಾರದವರೆಲ್ಲರೂ ಸೇರಿ ಅಂದು ಆಪ್ತೇಷ್ಟರೊಂದಿಗೆ ಉತ್ತಮ ಭೋಜನ ಮಾಡುತ್ತಾರೆ. ಈ ದಿನವು ಸಂಕ್ರಾಂತಿಯ ಹಿಂದಿನ ದಿನವಾಗಿರುವುದು.


ಸಂಕ್ರಾಂತಿಯ ದಿನದ ವಿಶೇಷವೆಂದರೆ ಸೂರ್ಯಪೂಜೆ ಆ ದಿನವನ್ನು ಸೂರ್ಯಪೊಂಗಲ್ ಎಂದು ಕರೆಯುತ್ತಾರೆ. ಹಾಲು ಬೆಲ್ಲ ಅಕ್ಕಿಯ ಪಾಯಸವನ್ನು ನೈವೇದ್ಯ ಮಾಡುತ್ತಾರೆ. ಬಂಧು ಮಿತ್ರರನ್ನು ಸಹ ಮನೆಗೆ ಆಹ್ವಾನಿಸುತ್ತಾರೆ. ಮೂರನೇ ದಿನ ಪಶುಗಳಿಗೆ ಪೂಜೆ ಗೌರವ ಸಲ್ಲಿಸುತ್ತಾರೆ. ದೇವರಿಗೆ ಕೊಡುವ ನೈವೇದ್ಯಗಳನ್ನು ಪಶುಗಳಿಗೆ ತಿನ್ನಿಸುತ್ತಾರೆ. ದನಗಳನ್ನು ಹೂಮಾಲೆಗಳಿಂದ ಸಿಂಗರಿಸುತ್ತಾರೆ. ಅವುಗಳ ಕೋಡುಗಳಿಗೆ ಆಭರಣಗಳನ್ನು ಕಟ್ಟಿರುತ್ತಾರೆ. ಕೆಲವು ಕಡೆ ಎತ್ತು ಕೋಣಗಳ ಕಾಳಗಳ ಸಹ ನಡೆಯುತ್ತದೆ ಗೂಳಿಗಳನ್ನು ಬಿಟ್ಟು ಓಡಿಸುತ್ತಾರೆ.

ಅವುಗಳನ್ನು ಶಕ್ತಿಯುಳ್ಳವರು ಹಿಡಿದು ಅವುಗಳಿಗೆ ಕಟ್ಟಿದ ಹಣ, ಮಾಲೆ, ಆಭರಣ ತೆಗೆದುಕೊಳ್ಳುತ್ತಾರೆ. ರಾತ್ರಿಯಲ್ಲಿ ಹೊಸದಾಗಿ ಬಂದ ಧಾನ್ಯವನ್ನು ಅಡುಗೆ ಮಾಡುತ್ತಾರೆ. ಸಾಮೂಹಿಕ ಭೋಜನ ಸಮಾರಂಭದಲ್ಲಿ ಎಲ್ಲರೂ ಭಾಗವಹಿಸುತ್ತಾರೆ.

ಆಂಧ್ರಪ್ರದೇಶದಲ್ಲಿ ಶ್ರಿರಾಮನು, ರಾವಣನನ್ನು ಕೊಂದು ಸೀತೆಯನ್ನು ತಂದ ದಿನವಿದೆಂದು ರಾವಣದಹನ ನಡೆಸುತ್ತಾರೆ. ಇದನ್ನು ''ಭೋಗಿಮಂಟ'' ಎನ್ನುತ್ತಾರೆ. ಅಂದು ಪಿತೃಗಳು ಅದೃಶ್ಯ ರೂಪದಿಂದ ಮನೆಗಳಿಗೆ ಆಗಮಿಸುತ್ತಾರೆಂದು ನಂಬಿದ್ದಾರೆ.

ಉತ್ತರ ಭಾರತದ ಅಲಹಾಬಾದ್ (ಪ್ರಯಾಗ)ದಲ್ಲಿ ಕುಂಭಮೇಳ ನಡೆಯುವುದು ಕೇರಳದ ಶಬರೀಮಲೈಗೆ ಸಾವಿರಾರು ಅಯ್ಯಪ್ಪ ಭಕ್ತರು ಆಗಮಿಸುತ್ತಾರೆ. ಆಲ್ಲಿ ''ಮಕರ ಜ್ಯೋತಿ'' ಯನ್ನು ಕಾಣುತ್ತಾರೆ.

ಅಯ್ಯಪ್ಪ ವ್ರತದಲ್ಲಿದ್ದು ಒಂದು ತಿಂಗಳವರೆಗೆ ತೀರ್ಥಯಾತ್ರೆ ಮಾಡಿ, ಭಕ್ತಿಯಿಂದ ಸೇವೆ ಕೈಗೊಳ್ಳುವರು. ಇದು ಸಂಕ್ರಾಂತಿ ಹಬ್ಬದವರೆಗೆ ನಡೆಯುವುದು.





ತಸ್ಮಾತ್ತದೇವ ವಕ್ತವ್ಯಂ
ವಚನೇ ಕಾ ದರಿದ್ರತಾ॥

ಮಾತಿನ ಮಹಿಮೆಯನ್ನು ಇಲ್ಲಿ ವರ್ಣಿಸಿದ್ದಾರೆ. ಯಾರೇ ಆಗಲಿ ಪ್ರಿಯವಾದ ಮಾತು ಕೇಳಿ ಸಂತಸ ಪಡುತ್ತಾರೆ. ಆದ್ದರಿಂದ ಅದನೇ ಹೇಳ ಬೇಕು. ಹೇಳುವುದರಲ್ಲಿ ದರಿದ್ರತನ ತೋರಬಾರದು. ಇದು ಸುಭಾಷಿತದ ಹಿತ ನುಡಿ.

ನಿನ್ನ ನಾಲಿಗೆ ಸರಸ್ವತಿಯ ಜ್ಞಾನ ಪೀಠವಲ್ಲವೇನು? ಅವಳ ಆ ಪವಿತ್ರ ಪೀಠವನ್ನು ಅಲ್ಲ ಸಲ್ಲದ್ದನು ಆಡಿ ಮಲಿನ ಮಾಡಿ ಬ್ರಹ್ಮನ ಕೋಪಕ್ಕೆ ಗುರಿಯಾಗಬೇಡ , ಗುರಿಯಾದೆಯೋ ನಿನ್ನ ಸೃಜನ ಶಕ್ತಿ ಸ್ರೋತ ನಿನ್ನ ನಾಲಿಗೆಯಲ್ಲಿ ಪುಟಿಯದೆ ಇಮರಿ ಹೋಗುತ್ತದೆ ಎಂದಿದ್ದಾರೆ ಮಹಾತ್ಮರು.

"ಮಾತು ಮತ್ತು ಕೃತಿ'', ಇವೆರಡರಲ್ಲಿ ಪ್ರಾಮಾಣಿಕತೆ ಇದ್ದು ಬದುಕ ಸಾಗಿಸಿದರೆ ಪರಮಾತ್ಮ ನನ್ನು ಕಂಡಂತೆಯೇ ಎಂದಿದ್ದಾನೆ ಪ್ಲೇಟೋ. ಇಂತಹ ಒಳ್ಳೆಯ ಸಂಸ್ಕಾರಕ್ಕೆ ಕ್ರಾಂತಿ ಆಗಬೇಕು ಅಲ್ಲವೇ?

ಸಂಕ್ರಾಂತಿ ಎಂಬ ಶಬ್ದಕ್ಕೆ ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಹೆಜ್ಜೆ ಇಡುವಂತೆ ದರ್ಶನವಾಗುವುದು ಎಂದು ಅರ್ಥ.

ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಯಲ್ಲಿ ಪ್ರವೇಶ ಮಾಡುವುದಲ್ಲದೇ ಗ್ರಹಗಳು, ನಕ್ಷತ್ರ ಮತ್ತು ರಾಶಿಗಳಲ್ಲಿ ಪ್ರವೇಶ ಮಾಡುವುದು ಕೂಡ ಸಂಕ್ರಾಂತಿ ಪುಣ್ಯ ಕಾಲ ದಲ್ಲಿಯೇ ಆದರೂ ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶ ಮಾಡು ವುದನ್ನೇ ವಿಶೇಷವಾಗಿ ಸಂಕ್ರಾಂತಿಯೆಂದು ಕರೆಯುವುದು ರೂಢಿಯಾಗಿದೆ. ಸಂಕ್ರಾಂತಿ, ಮಕರ ಸಂಕ್ರಾಂತಿ, ಮಕರಸಂಕ್ರಮಣ, ಮಕರ ಸಂಕ್ರಮಾಯನ, ಉತ್ತರಾಯಣ ಪುಣ್ಯಕಾಲ ಎಂದು ಶಾಸ್ತ್ರ ಗಳು ಇದನ್ನು ಕರೆಯುತ್ತವೆ.

ತಮಿಳುನಾಡಿನಲ್ಲಿ ಪೊಂಗಲ್ ಎಂಬ ಹೆಸರಿನಿಂದ ಈ ಹಬ್ಬವನ್ನು ಕರೆಯುತ್ತಾರೆ. ಜನ ಸಾಮಾನ್ಯರು "ಎಳ್ಳಿನ ಹಬ್ಬ'' ಎಂದು ಇದನ್ನು ಕರೆಯುತ್ತಾರೆ. ಇಡೀ ಉತ್ತರಾಯಣವೇ ದೇವತೆಗಳಿಗೆ ಪ್ರಿಯವಾಗಿದ್ದು, ದೇವಕಾರ್ಯ ಶುಭಕಾರ್ಯಗಳಿಗೆ ಪ್ರಶಸ್ತವಾದುದು. ಇಂಥ ಉತ್ತರಾಯಣವನ್ನು ಪ್ರಾರಂಭಿಸುವ ದಿನವಾದ ಮಕರಸಂಕ್ರಾಂತಿಗೆ ವಿಶೇಷವಾದ ಮಾನ್ಯತೆಯು ಶಾಸ್ತ್ರ ಸಂಪ್ರದಾಯ ಗಳಲ್ಲಿ ಕಂಡು ಬರುವುದು ಸಹಜವೇ ಆಗಿದೆ. ಸಂಕ್ರಾಂತಿ ಹಬ್ಬವು ಜನವರಿ ತಿಂಗಳ 14 ಅಥವಾ 15 ನೇ ದಿನಾಂಕದಂದು ಬರುವುದು. ಸಕಲ ಜಗತ್ತಿಗೆ ಆಧಾರನಾದ ಸೂರ್ಯನಾರಾಯಣನ ಆರಾಧನೆ ಇದು. ನಮ್ಮ ಸಕಲ ಚರಾಚರಗಳಿಗೆ ಬೆಳವಣಿಗೆ ಸಮೃದ್ಧಿ ಸಂತಸ, ಚೇತನ ಶಕ್ತಿಯಾಗಿರುವ ಪ್ರತ್ಯಕ್ಷ ದೇವರೆನಿಸಿದ ಸೂರ್ಯನು ಅಮೋಘ ಶಕ್ತಿಯ ಭಂಡಾರ ಪ್ರಾಚೀನ ಕಾಲದಿಂದಲೂ ಸೂರ್ಯನಾರಾಧನೆಯು ನಡೆದು ಬಂದಿದೆ. ಮಕರಸಂಕ್ರಮಣ ಹಬ್ಬಕ್ಕೆ ಪ್ರಕೃತಿಯು ಮತ್ತು ಸೂರ್ಯ ಇವೆರಡು ಕಾರಣವಾಗಿವೆ.

## "ಎಳ್ಳುಬೆಲ್ಲ ತಿಂದು ಒಳ್ಳೆಯ ಮಾತನಾಡಿ"

"'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತ ನಾಡಿ'' ಎಂಬ ಕನ್ನಡ ಗಾದೆಗೆ ಮೂಲ ಕಾರಣ ವಾಗಿರುವುದು ಸಂಕ್ರಾಂತಿ ಹಬ್ಬ. ಸಾಂಪ್ರ ದಾಯಿಕವಾಗಿ ಎಳ್ಳಿಗೂ ಸಂಕ್ರಾಂತಿಗೂ ಒಂದು ನಿಕಟ ಸಂಬಂಧದ ಕಲ್ಪನೆ ಶತಮಾನ ಗಳಿಂದ ಇದೆ. ಎಳ್ಳು ನೆಲಗಡಲೆ, ಹುರಿಗಡಲೆ, ಕೊಬ್ಬರಿ ಮತ್ತು ಬೆಲ್ಲ ಇವೆಲ್ಲವುಗಳ ಮಿಶ್ರಣ "ಸಂಕ್ರಾಂತಿ ಎಳ್ಳು'' ಇಲ್ಲಿ "ಸಂ'' - ಎಂದರೆ ವಿಷ್ಣು / ಶಿವ. "ಕ್ರಾಂತಿ'' ಎಂದರೆ ಸಂಸ್ಕಾರ ಈ ಪರ್ವದಲ್ಲಿ ವ್ಯಕ್ತಿಯ ಸಂಸ್ಕಾರದ ಕ್ರಾಂತಿಯೂ ಆಗಬೇಕು. ಏಕೆಂದರೆ ಆತ್ಮಾವ ಲೋಕನಕ್ಕೆ ಪ್ರಶಸ್ತವಾದದ್ದು ಹಬ್ಬ ಹರಿದಿನ ಗಳು ಇಂತಹ ದಿನಗಳಲ್ಲಿ ಒಳ್ಳೆಯ ಸಂಸ್ಕಾರ ರೂಢಿಸಿಕೊಳ್ಳಬೇಕು. ಅದಕ್ಕೆ ಎಳ್ಳು ತಿಂದು ಒಳ್ಳೆಯ ಮಾತನಾಡಿ ಎನ್ನುವುದು. ನಿಜ ಮಾತೇ ಮುತ್ತು ಮಾತೇ ಮೃತ್ಯು .

ಭಗವದ್ಗೀತೆ, ಉಪನಿಷತ್ತು, ಶರಣ ಸಾಹಿತ್ಯ-ದಾಸ ಸಾಹಿತ್ಯ, ಮಾತಿನ ಬಗ್ಗೆ ಬೆಳಕು ಚೆಲ್ಲಿವೆ. ಸಂಸ್ಕೃತ ಸುಭಾಷಿತವೂ ಸಹ ಹೀಗೆ ಹೇಳುತ್ತದೆ.

ಪ್ರಿಯ ವಾಕ್ಯಪ್ರದಾನೇನ
ಸರ್ವೇ ತುಷ್ಯಂತಿ ಜಂತವಃ।

## ಸಂಕ್ರಾಂತಿ ಲಕ್ಷ್ಮೀ ಸ್ತೋತ್ರ:

ಧನಲಕ್ಷ್ಮೀ ದಯಾರೂಪಾಂ । ಧಾನ್ಯಲಕ್ಷ್ಮೀಂ ಹರಿಪ್ರಿಯಾಂ।
ವಿದ್ಯಾಲಕ್ಷ್ಮೀಂ ಜಗದ್ಧಾತ್ರೀಂ । ಅಷ್ಟ ಲಕ್ಷ್ಮೀಂ ಸದಾ ಭಜೆ।
ಪದ್ಮಹಸ್ತಾಂ ಪದ್ಮನೇತ್ರೀಂ ಪದ್ಮಪೀಠನಿವಾಸಿನೀಂ।
ಸರ್ವಮಾಣಿಕ್ಯ ಭೂಷಾಢ್ಯಾಂ । ಸ್ವರ್ಣದಾಂತ್ವಾಂ ನಮಾಮ್ಯಹಂ॥

ಸಂಪತ್ ಸ್ವರೂಪಿಣಿಯಾದ ಲಕ್ಷ್ಮಿಯನ್ನು ಸಂಕ್ರಾಂತಿಯ ದಿನ ಪೂಜಿಸುವುದು ಸಕಲ ಶುಭಪ್ರದ ಅಷ್ಟ ಲಕ್ಷ್ಮೀ ಸ್ವರೂಪಿಣಿಯಾಗಿ ಧನ, ಧಾನ್ಯಾದಿ ಐಶ್ವರ್ಯಪ್ರದಾಯಿನಿಯಾಗಿ ಬಂಗಾರದ ಆಭರಣಗಳಿಂದ ಅಲಂಕೃತಳಾಗಿ ಸ್ವರ್ಗಾದಿ ಸಂಪತ್ತುಗಳನ್ನು ಪ್ರಸಾದಿಸುವ ಲಕ್ಷ್ಮೀ ದೇವಿಗೆ ನಮಸ್ಕಾರ. ಸಂಕ್ರಾಂತಿ ಶುಭಘಳಿಗೆಯಲ್ಲಿ ಲಕ್ಷ್ಮೀಪೂಜೆ ಮಾಡಿ ಮೇಲಿನ ಸ್ತೋತ್ರ ಭಕ್ತಿಯಿಂದ ಧ್ಯಾನಿಸಿದರೆ ಆ ತಾಯಿ ಕೃಪೆ ದೊರೆಯುತ್ತದೆ. ಇದನ್ನು ಮಹಾಮಂತ್ರದಂತೆ ಜಪಿಸಿದರೆ ಸಕಲ ಇಷ್ಟಾರ್ಥಗಳೂ ಈಡೇರುತ್ತವೆ.

## ಸಂಕ್ರಾಂತಿಯ ಮತ್ತೊಂದು ವಿಶೇಷ "ಗೋಪೂಜೆ"

ಸಂಕ್ರಾಂತಿಯ ದಿನ ಪಶು ಸಮೂಹವನ್ನು ಅಲಂಕರಿಸಿ ಮೆರವಣಿಗೆ ಮಾಡುವುದು ದೇವಾಲಯಗಳಲ್ಲಿ ಪೂಜೆ ಮಾಡಿಸುವುದು ಹಲವೆಡೆ ಇರುವ ಸಂಪ್ರದಾಯ ಏಕೆಂದರೆ ಗೋಮಾತೆಯ ಅವಯವಗಳಲ್ಲಿ ಹದಿನಾಲ್ಕು ಲೋಕಗಳೂ ಅಡಗಿವೆ.

ಸಮಸ್ತ ದೇವತೆಗಳೂ ಅದರ ಶರೀರದ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿದ್ದಾರೆ ಎಂದು ಶಾಸ್ತ್ರಗಳು ಸಾರುತ್ತವೆ.

ಗೋವುಗಳು ಪವಿತ್ರ ಮಂಗಳಕರ ಮತ್ತು ದೇವತೆಗಳಿಗೂ ದೇವತೆಗಳಂತೆ ಪೂಜ್ಯವಾಗಿದೆ.ಅವುಗಳನ್ನು ಭಕ್ತಿಯಿಂದ ಶುಶ್ರೂಷೆ ಮಾಡುವವನು ಎಲ್ಲಾ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ ಎಂದು ವರಾಹಪುರಾಣ ಹೇಳುತ್ತದೆ. ಇಂತಹ ಪವಿತ್ರವೂ ಮಂಗಳಕರವೂ ಆದ ಗೋಮಾತೆಯನ್ನು ಪ್ರತಿದಿನವೂ ಪೂಜಿಸಬೇಕು.

ಶುಭಕರ್ಮ, ಅಪರಕರ್ಮ, ಶ್ರಾದ್ಧಕರ್ಮ ಎಲ್ಲದರಲ್ಲಿಯೂ ಗೋಮಾತೆಯ ಆರಾಧನೆ ಶ್ರೇಷ್ಠವಾದುದು."ಪ್ರತಿದಿನವೂ ಪೂಜನೀಯವಾದ ಗೋಮಾತೆಯನ್ನು ವಿಶೇಷ ಪರ್ವವಾದ ಸಂಕ್ರಾಂತಿಯ ದಿವಸದಲ್ಲಾದರೂ ವಿಶೇಷವಾಗಿ ಪೂಜಿಸುವುದು ಉಚಿತವೇ ಆಗಿದೆ''.

## ಉಪಸಂಹಾರ:

ಸನಾತನಾರ್ಯ ಭಾರತೀಯರು ಇಡೀ ಜೀವನದಲ್ಲಿ ಅಳವಡಿಸಿಕೊಂಡ ಸರ್ವಕರ್ಮಗಳೂ ಜ್ಞಾನದಲ್ಲೇ ಪರಿಸಮಾಪ್ತಿ ಹೊಂದುವ ವಿಷಯವನ್ನು ಅರಿತು ಆಚರಿಸುವುದರಲ್ಲಿ ಸಹಜತೆ ಇದೆ.

ಸನಾತನಿಗಳು ಆಚರಿಸುವ ಹಬ್ಬ ಹರಿದಿನಗಳಲ್ಲಿ ಮತ್ತು ಪರ್ವಗಳಲ್ಲಿ ಸಂಕ್ರಾಂತಿಯ ಹಬ್ಬವು ಒಂದಾಗಿದೆ. ಈ ಹಬ್ಬವು ಸುಖಕ್ಕೂ,ಪರಾಗತಿಗೂ ಸಹ ಅನುಗುಣವಾಗಿದೆ. ಭೋಗಿಗಳಿಗೂ, ಯೋಗಿಗಳಿಗೂ ಸಂತೋಷ ಪ್ರದವಾದ ಹಬ್ಬವಾಗಿದೆ.

ಕಾಲಶರೀರಿಯಾದ ಪರಮಾತ್ಮನ ಬಲಭಾಗದ ಅಂಗವಾಗಿ, ನಾರಾಯಣನ ಆಯನಕ್ಕೆ ಅನುಗುಣವಾದ ಉತ್ತರಾಯಣವಾಗಿ, ವರ್ಷವೆಂಬ ಮನೆಯ ಉತ್ತರಾಯಣವಾಗಿ, ವರ್ಷವೆಂಬ ಮನೆಯ ಉತ್ತರ ಬಾಗಿಲಾಗಿದೆ. ಈ ಬಾಗಿಲನ್ನು ತೆರೆಯುವ ದಿನವಿದಾಗಿದೆ.

ಈ ದಿನದಿಂದಲೇ ಭಗವಂತನ ಮನೋರಥವನ್ನು ಭಕ್ತರು ಎಳೆಯುವ ರಥೋತ್ಸವಗಳು ಆರಂಭವಾಗುತ್ತವೆ. ಪ್ರತಿಯೊಂದು ಕ್ಷೇತ್ರ. ದೇವಾಲಯಗಳಲ್ಲಿಯೂ ಎಲ್ಲರೂಡನೆ ಸಹಕರಿಸಿ, ಭಗವಂತನ ಉತ್ಸವದಲ್ಲಿ ಭಾಗ ವಹಿಸುವುದಕ್ಕೆ ಆರಂಭವಾಗುವ ಹಬ್ಬವಿದಾಗಿದೆ.

ಇದೊಂದು ಪುಣ್ಯಕಾಲ ಅಂತೆಯೇ ಪರ್ವಕಾಲ ಜೀವನದ ಪರ್ವಗಳನ್ನು ಪ್ರತಿನಿಧಿಸುವ ಇಕ್ಷುಪರ್ವಗಳನ್ನು ಹಂಚುವ ಕಾಲ ಮತ್ತು ಶಾಂತಿ ರೂಪವಾದ ಎಳ್ಳು ಬೆಲ್ಲವನ್ನು ಹಂಚುವ ಕಾಲ.ಇದು ಭೋಗಕ್ಕಾದರೆ ಯೋಗದೃಷ್ಟಿಯಿಂದ"ಅಸ್ಮಾಕಮೇಕೀ ಭೂತಾನಾಂ ನಿಷ್ಕಲಂ ಪರಮಂ ಪದಮ್'' ಎನ್ನುವಂತೆ ತ್ರಿಮೂರ್ತಿಗಳು ಒಂದಾಗಿ ಸೇರುವ ಸುಸಮಯವಿದು.

## "ಫಲಶ್ರುತಿ"

"ಸಂಕ್ರಾಂತಿಯು ತನ್ನನ್ನು ಯಾರು ಪೂಜಿಸುವರೋ ಅವರಿಗೆ ಪಾಪ ಪರಿಹಾರವನ್ನು ಇಷ್ಟಪ್ರಾಪ್ತಿಯನ್ನು ಅನಿಷ್ಟನಿವಾರಣೆಯನ್ನು ಮಾಡುತ್ತದೆ.

ವ್ಯವಸಾಯಗಾರರು, ಪಶುಕ್ಷೇಮಕ್ಕಾಗಿ ಗ್ರಾಮದ ಹೊರ ಭಾಗದಲ್ಲಿ ಅನ್ನವನ್ನು ಪಾಯಸವನ್ನು ದೇವತಾ ಪ್ರೀತ್ಯರ್ಥವಾಗಿ ಹಾಕಿ, ಮನೆಗೆ ಬಂದ ಬ್ರಾಹ್ಮಣರಿಗೆ ದಾನಾದಿಗಳನ್ನು ಕೊಡಬೇಕು ಇದರಿಂದ ದೇಶಕ್ಷೇಮವು, ಪ್ರಜಾಕ್ಷೇಮವು, ಪಶುಕ್ಷೇಮವು ಉಂಟಾಗುತ್ತದೆ.

ಇದು ದೇವರ್ಷಿ ನಾರದರ ಮಾತು ವ್ರತಕಲ್ಪದಲ್ಲಿ ಮಕರ ಸಂಕ್ರಾಂತಿ ವ್ರತಾಚರಣೆಯ ಬಗ್ಗೆ ವಿವರಗಳು ಹೇಳಲ್ಪಟ್ಟಿದೆ.

ದೋಷನಿವಾರಣೆಗಾಗಿ, ವಿಶೇಷವಾಗಿ ಸ್ತ್ರೀಯರು ದಾಮೋದರ ನಾಮಕ ಮಹಾವಿಷ್ಣುವನ್ನು ದೀಪಾರಾಧನೆಯ ಮೂಲಕ ಪೂಜಿಸುವುದೇ ಈ ವ್ರತದ ಅಂಶ ದಾಮೋದರಂ ಮಹಾದೇವಂ ಭಗವಾನ್ ಭಕ್ತವತ್ಸಲ ದೀಪವ್ರತೇನ ದೇವೇಶ ಮಹಾಪಾಪಂ ವ್ಯಪೋಹತು॥

ಸಂಗ್ರಹ.



# ರಾಮ ರಾಜ್ಯದ ದ್ವಾರ ಅಯೋಧ್ಯಾ

- ವೇ.ವಿ. ಶಿವರಾಮ ಜೋಗಳೇಕರ
8275180641



ಅತ್ಯಂತ ಪ್ರಾಚೀನ ಕಾಲದಿಂದಲೂ ಅಯೋಧ್ಯಾ ಭಾರತದಲ್ಲಿ ಒಂದು ಐತಿಹಾಸಿಕ ಸಾಂಸ್ಕೃತಿಕ ಮತ್ತು ಪುಣ್ಯಶೀಲ ತೀರ್ಥನಗರವೆಂದು ಪ್ರಸಿದ್ಧಿಯಿದೆ. ಶ್ರೀರಾಮನ ಜನ್ಮದಿಂದಾಗಿ ಅಯೋಧ್ಯೆಯು ದೇವಭೂಮಿ ಎನಿಸಿದೆ.ಅಯುದ್ಧ ಶಬ್ದದಿಂದ ಅಯೋಧ್ಯಾ ಶಬ್ದವು ಉದಯಿಸಿದೆ ಎಂಬುದು ಒಂದು ಮತವಿದೆ. ಅಯೋಧ್ಯಾ ಪ್ರಥಮವಾಗಿ ಉಲ್ಲೇಖ ಅಥರ್ವವೇದದಲ್ಲಿ ಕಾಣಸಿಗುತ್ತದೆ.

ಅಷ್ಟಾಚಕ್ರಾನವದ್ವಾರಾ ದೇವಾನಾಂ ಪುರಯೋಧ್ಯಾ
ತಸ್ಯಾಂ ಹಿರಣ್ಯಃ ಕೋಶಃ ಸ್ವರ್ಗೋ ಜ್ಯೋತಿಷಾವೃತಃ
(ಅಥರ್ವವೇದ - 19,2,31 )

ದೇವನಿರ್ಮಿತ, ಪುರುಷದೇಹರೂಪ, ಅಷ್ಟಾಚಕ್ರ ಮತ್ತು ನವದ್ವಾರಾ ಯುಕ್ತ ಅಯೋಧ್ಯಾ (ಅಜಿಂಶ್ಯ)ನಗರದಲ್ಲಿ ಸುವರ್ಣನಿಧಿ ಮತ್ತು ಜ್ಞಾನಪೂರ್ಣ ಸ್ವರ್ಗ ನಿರ್ಮಾಣವಾಗಿದೆ. ತೇಜಸ್ವಿ,ಸುಖಮಯ-ಯಶಪ್ರೂರ್ಣ "ಅಪರಾಜಿತ" ನಗರದಲ್ಲಿ ಬ್ರಹ್ಮನಿವಾಸವಿದೆ. ಇಲ್ಲಿ ಅಯೋಧ್ಯೆಯನ್ನು ಒಂದು ಶರೀರದಂತೆ ವರ್ಣಿಸಲಾಗಿದೆ. ಅಯೋಧ್ಯೆಗೆ ಇನ್ನು ಇತರ ಹೆಸರುಗಳಿದ್ದು ಅದು ಶಿವ ಸಂಹಿತೆ ಯಲ್ಲಿ ಉಲ್ಲೇಖವಾಗಿದೆ. ಅವುಗಳು ಅಯೋಧ್ಯಾ, ನಂದಿನೀ, ಸತ್ಯ ನಾಮಾ (ಸತ್ಯಾ) ಸಾಕೇತ, ಕೊಸಲ ರಾಜಧಾನಿ, ಬ್ರಾಹ್ಮ ಪುರಿ ಅಪರಾಜಿತಾ ಇತ್ಯಾದಿ ಹೆಸರುಗಳ ಉಲ್ಲೇಖವಿದೆ.ವಾಲ್ಮೀಕಿ ರಾಮಾಯಣದ ಬಾಲಕಾಂಡದಲ್ಲಿ ಶರಯೂ ನದೀ ತೀರದಲ್ಲಿ ಧನಧಾನ್ಯದಿಂದ ಸಮೃದ್ಧ ಹೊಂದಿದ. ಲೋಕ ಪ್ರಸಿದ್ಧ ಅಯೋಧ್ಯಾನಗರದ ಉಲ್ಲೇಖವಿದೆ.ಭಾರತ ವರ್ಷದಲ್ಲಿ ಆರು ಪರಮ ಪವಿತ್ರ ಕ್ಷೇತ್ರದ ಗಣನೇಯಲ್ಲಿ ಅಯೋಧ್ಯೆಯು ಪ್ರಥಮವೆಂಬುದು ಗಮನಾರ್ಹ.

ಅಯೋಧ್ಯಾ ಮಥುರಾಮಾಯಾ ಕಾಶೀ ಕಾಂಚೀ ಹ್ಯವಂತಿಕಾ।
ಏತಾಃ ಪುಣ್ಯತಮಾಃ ಪ್ರೋಕ್ತಾಃ ಪುರೀಣಾಮುತ್ತ ಮೊತ್ತಮಾಃ
(ಬ್ರ.ಪು.4,49,91)

ಅಯೋಧ್ಯಾ, ಮಥುರಾ, ಮಾಯಾ, ಕಾಶಿ, ಕಾಂಚೀ, ಅವಂತಿಕಾ ಹೀಗೆ ಉತ್ತಮೋತ್ತಮ ಪುಣ್ಯ ದಾಯಕನಗರವಿದ್ದು ಅವುಗಳಲ್ಲಿ ಅಯೋಧ್ಯಾ ಪ್ರಥಮದ್ದು,ಇಕ್ಷ್ವಾಕುವಂಶಸ್ಥರು ಅಯೋಧ್ಯೆಯನ್ನು ತಮ್ಮ ರಾಜಧಾನಿಯನ್ನಾಗಿ ನಿರ್ಮಿಸಿದರು. ಈ ವಂಶದಲ್ಲಿ ಮಾಂಧಾತೃ, ಅಂಬರೀಶ, ಭಗೀರಥ ಇತ್ಯಾದಿಗಳಿಂದ ಪ್ರಭು ಶ್ರೀರಾಮಚಂದ್ರನವರೆಗೆ ಪರಾಕ್ರಮಿ ಮತ್ತು ನೀತಿವಂತ ಸಾಮ್ರಾಟರು ಆಗಿ ಹೋದರು. ಇಕ್ಷ್ವಾಕುವಂಶ ಮತ್ತು ಅಯೋಧ್ಯಾ ಒಂದೇ ಬಾಣದ ಎರಡು ತುದಿಗಳಿದ್ದವು ಅವು ಒಂದ ಕ್ಕೊಂದು ಬೆಸೆದಿದ್ದುವು.

ರಾಮಾಯಣದಲ್ಲಿ ಸರಯೂ ನದಿಯ ಉಗಮ ಮಾನಸ ಸರೋವರದಿಂದ ಆಗಿದೆ ಎಂಬ ಉಲ್ಲೇಖವಿದೆ. ಅದರ ಕಾವ್ಯ ಕಥನ-ಒಂದೊಮ್ಮೆ ಬ್ರಹ್ಮನು ಕೈಲಾಸ ಪರ್ವತದಿಂದ ಮನಸ್ಸಿನ ಯೋಗ ದಿಂದ ಒಂದು ಉತ್ಕೃಷ್ಟ ಸರೋವರ ನಿರ್ಮಿಸಿದ. ಅದು ಮನಃ ಸಂಕಲ್ಪದ ಸಾಕ್ಷಿಯಾಗಿ "ಮಾನಸ" ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಆ ಮಾನಸ ಸರೋವರದಿಂದ ಉಗಮವಾಗಿ ಅಲ್ಲಿಂದ ಬೇರ್ಪಟ್ಟು ಅಯೋಧ್ಯೆಯ ಸಮೀಪ ಪ್ರವಹಿಸಿದೆ.

ಅದು ಕಾಲಾಂತರದಲ್ಲಿ "ಸರಯೂ" ಎಂಬ ಹೆಸರು ಬಂತು (ರಾಮಾಯಣ ಬಾಲಕಾಂಡ 24/819) ಸರಯೂ, ಶರಯೂ ರೂಪಾಂತರವಾಗಿದೆ.

ಸರಯೂ ನದಿಯ ಉಲ್ಲೇಖ ಪ್ರಥಮವಾಗಿ ಋಗ್ವೇದದಲ್ಲಿ ಕಾಣಸಿಗುತ್ತದೆ. ಸರಸ್ವತೀ ಸರಯೂ ಸಿಂಧು ರುರ್ಮಿ ಭಿರ್ಮಹೋ ಮಹಿರವಸಾಯಂತು ವಕ್ಷಣೀಃ (ಋಗ್ವೇದ 10/649)ಸರಸ್ವತೀ ಸರಯೂ ಮತ್ತು ಸಿಂಧೂ, ಇವು ಭಕ್ತರಕ್ಷಕ ನದಿ ಎನಿಸಿದ್ದು. ಮಾತೃವತ್ ಉದಕದೇವತೆಗಳೇ ನಮಗೆ ಮಧುರವಾದ ಜಲನೀಡು. ಜಲವನ್ನು ದೇವತಾಸ್ವರೂಪವಾಗಿ ಪ್ರಥಮವಾಗಿ ಕಂಡಿದ್ದು ವೇದಗಳೇ.

ವಾಲ್ಮೀಕಿ ರಾಮಾಯಣದಿಂದ ಹಿಡಿದು ಹಿಂದೂ ಸರ್ವಧರ್ಮಗ್ರಂಥಗಳಲ್ಲಿ ಅಯೋಧ್ಯಾನಗರೀಯ ಉಲ್ಲೇಖ ಕಾಣಬಹುದು.ಮಹಾಭಾರತದ "ವನಪರ್ವದಲ್ಲಿ ರಾಮೋಪಾಖ್ಯಾನ"ಎಂಬ ಹೆಸರಿನ ಪ್ರಕರಣವಿದ್ದು ಆದರೊಳಗೆ ರಾಮಕಥೆ ಸಂಕ್ಷಿಪ್ತದಿಂದ ಹೇಳಲ್ಪಟ್ಟಿವೆ. ನಮ್ಮ ಎಲ್ಲಾ ಪುರಾಣಗಳಲ್ಲಿ ವಿಷ್ಣುವಿನ ಅವತಾರ ರಾಮ ಎನ್ನಲಾಗಿದೆ. ಇನ್ನು ಕಾಳಿದಾಸ ಕೃತ ರಘುವಂಶ ಮಹಾಕಾವ್ಯದಲ್ಲಿ ರಾಮ ಮತ್ತು ಸೀತಾ ಪುಷ್ಪಕ ವಿಮಾನದಿಂದ ಅಯೋಧ್ಯೆಗೆ ಆಗಮಿಸುತ್ತಿರುವ ವರ್ಣನೆ ಇದೆ.

ರತ್ನಾಕರ ವೀಕ್ಷ್ಯಮಿಥಃ ಸಜಾಯಾಂ।
ರಾಮಾಭಿಧಾನೋ ಹರಿರಿತ್ಯುವಾಚ।
ರಘುವಂಶ ಸರ್ಗ 13/1

ಈತ ರಚಿಸಿದ ಸಾಹಿತ್ಯದಲ್ಲಿ ಅಲ್ಲಲ್ಲಿ ರಾಮನನ್ನುಶ್ರದ್ಧಾ ಪೂರ್ವಕವಾಗಿ ಉಲ್ಲೇಖಿಸಿದ್ದಾನೆ ಎಂಬುದು ಗಮನಾರ್ಹ.


**ಶ್ರೀರಾಮಮಂದಿರ ಪ್ರಾಚೀನತೆ ಮತ್ತು ಪೂಜೆಯ ಪರಂಪರೆ :**

ಹನ್ನೊಂದನೇಯ ಶತಕದ 'ಅಮಿತಗತೀ' ಎಂಬ ಜೈನಗ್ರಂಥದಲ್ಲಿ ರಾಮ ವಿಷ್ಣುವಿನ ಸರ್ವಜ್ಞ ಮತ್ತು ಸರ್ವವ್ಯಾಪಿ ಅವತಾರ ಎನ್ನಲಾಗಿದೆ. ಅಯೋಧ್ಯೆಯಲ್ಲಿಯ ರಾಮಮಂದಿರ ಅಸ್ಥಿತ್ವವನ್ನು ಗಮನಿಸಿದರೆ ರಾಮನ ಪೂಜೆ ಪರಂಪರೆ ನಾಲ್ಕನೇ ಶತಮಾನದಿಂದ ನಡೆದು ಬಂದಿದೆ ಎಂಬುದು ಊಹಿಸಬಹುದಾಗಿದೆ. ತೀರಾ ಪ್ರಾಚೀನ ರಾಮ ಮಂದಿರ ಎನಿಸಿದ ರಾಮಟೇಕ್ ಎಂಬಲ್ಲಿ 'ವಾಕಾಟಕ' ರಾಣಿ ಪ್ರಭಾವತಿಯು ನಿರ್ಮಿಸಿದ ದೇವಸ್ಥಾನ ಈಗಣ ಜೋಧಪುರಬಳಿಯ ಓಸಿಯಾ ಎಂಬಲ್ಲಿಯ ರಾಮ, ಸೀತಾ ಆಂಜನೇಯ ಮೂರ್ತಿ ಇದ್ದ (ಇ.ಸ.11ನೇ ಶತಮಾನ) ರಾಜಾಪ್ರೀತೀದೇವ (ದ್ವಿತೀಯ) ಇವನ ಮಂತ್ರಿ ಜಗಮಾಲ ಈತ ಇ.ಸನ್. 1145 ರ ಸುಮಾರಲ್ಲಿ ಮಧ್ಯ ಪ್ರದೇಶ ರಾಯಪುರ ಜಿಲ್ಲೆಯ ರಾಜೀಮ ಎಂಬಲ್ಲಿ ರಾಜೀವಲೋಚನೆ ಮಂದಿರ.

ಮಲಯಸಿಂಹ ಎಂಬಾತ 12 ನೇ ಶತಮಾನದಲ್ಲಿ ಇದೇ ರಾಜ್ಯದ ರೀವಾ ಜಿಲ್ಲೆಯ ಮುಕುಂದಪುರ ಎಂಬಲ್ಲಿ ಕಟ್ಟಿಸಿದ ರಾಮಮಂದಿರವು ಇವೆಲ್ಲವೂ ಬಹು ಪ್ರಾಚೀನ ಮಂದಿರ ಎನ್ನಲಾಗಿದೆ. ಹೀಗೆ ಅನೇಕ ಧರ್ಮಗ್ರಂಥ, ಸಾಹಿತ್ಯ ಕೃತಿ, ಮಹಾಕಾವ್ಯ ನಾಟಕಗಳ ಮೂಲಕ ಇತ್ಯಾದಿ ವಿವಿಧ ಮೂಲಕ ಸಿಗುವ ಶ್ರೀರಾಮ ಪೂಜೆಯ ಪರಂಪರೆಯ ಪರಿಪಕ್ವ ಎಂದರೆ 12 ನೇ ಶತಮಾನದಲ್ಲಿ ಬರೆಯಲ್ಪಟ್ಟ ಸ್ಕಂದ ಪುರಾಣದಲ್ಲಿ ಅಯೋಧ್ಯಾಮಹಾತ್ಮೆ ಎಂದು ಒಂದು ಸ್ವತಂತ್ರ ಭಾಗವೇ ಇದೆ.

ನಿತ್ಯ ಸಾವಿರಾರು ಹಸುಗಳನ್ನು ಕೊಟ್ಟ ದಾನಕ್ಕಿಂತ ಅಯೋಧ್ಯೆಯ ಶ್ರೀರಾಮಜನ್ಮ ಭೂಮಿಯ ದರ್ಶನದ ಫಲವು ನೂರು ಪಟ್ಟು ಹೆಚ್ಚಿನದ್ದು ಎನ್ನಲಾಗಿದೆ.

ಮೋಕ್ಷಾರ್ಥೀ ಮೋಕ್ಷಮಾಪ್ನೋತಿ ಜನ್ಮಭೂಮೇಃ ಪ್ರದರ್ಶನಾತ್
ಯಂ ದೃಷ್ಟ್ವಾ ಶ್ಚ ಮನುಷ್ಯಸ್ಯ ಗರ್ಭವಾಸಕ್ಷಯಂ ಭವೇತ್



ಮುಮುಕ್ಷುಗಳಿಗೆ ಜನ್ಮ ಭೂಮಿಯ ದರ್ಶನದಿಂದ ಮೋಕ್ಷ ಪ್ರಾಪ್ತಿಸುವುದು ಮತ್ತು ಮಾನವನಿಗೆ ಪುರ್ನಜನ್ಮವಿಲ್ಲಾ, ಅದರಂತೆ ಶರಯೂ ನದಿಯ ಸ್ನಾನದ ಮಹಿಮೆಯನ್ನು ಅಪಾರವಾಗಿ ಕೊಂಡಾಡಿದ್ದಾರೆ.

**ಅಯೋಧ್ಯೆಯ ಪುರ್ನನಿರ್ಮಿತಿ :**

ವಾಲ್ಮೀಕಿ ರಾಮಾಯಣದ ಅಂತಿಮ ಕತೆಯಂತೆ ಶ್ರೀ ರಾಮನು ಸ್ವರ್ಗಾರೋಹಣ ಪೂರ್ವದಲ್ಲಿ ಕೌಶಲ ರಾಜ್ಯವನ್ನು ವಿಭಜಿಸಿ ಉತ್ತರ ಕೌಶಲವನ್ನು ಲವನಿಗೆ ಕೊಟ್ಟಿದ್ದ ಆತ ಅದನ್ನು ಶ್ರಾವಸ್ತಿ ಎಂಬ ರಾಜಧಾನಿಯಾನ್ನಾಗಿಸಿದ. ಕುಶನು ದಕ್ಷಿಣ ಕೌಶಲವನ್ನು ಕುಶಾವತೀ ರಾಜಧಾನಿಯನ್ನಾಗಿಸಿದ. ಭರತ, ಶತ್ರುಘ್ನ,ಲಕ್ಷ್ಮಣ ಇವರುಗಳ

ಮಕ್ಕಳಿಗೂ ಬೇರೆ ಬೇರೆ ಪ್ರದೇಶಗಳನ್ನು ಕೊಟ್ಟ ಇದರಿಂದ ಮೂಲ ಆಯೋಧ್ಯೆ ಎನ್ನುವುದು ಬರಿದಾಗಿತ್ತು ಇಲ್ಲಿಗೆ ವಾಲ್ಮೀಕಿ ರಾಮಾಯಣದ ಬಹುತೇಶ ಕತೆ ಸಮಾಪ್ತಿಯಾಗುತ್ತದೆ. ಮುಂದಿನ ಘಟನೇ (ಕತೆ) ಕಾಳಿದಾಸ ಅಚಿತ ರಘುವಂಶದ ಕತೆಯಿಂದ ತಿಳಿಯುತ್ತದೆ. ಒಂದು ಆಶ್ಚರ್ಯಕರ ಘಟನೆಯಂತೆ ವಿಜನ (ನಿರ್ಜನ ಪ್ರದೇಶವಾದ)ಐಶ್ವರ್ಯ ಹೀನ ಅಯೋಧ್ಯಾ ಭೂಮಿ ರಾತ್ರಿ ನಿದ್ದೆಯಲ್ಲಿ ಕುಶನ ಸ್ವಪ್ನದಲ್ಲಿ ಕಾಣಿಸಿಕೊಂಡು ತನ್ನ ವ್ಯಥಿತ ಕತೆ ಅಂತರಾಳದಿಂದ ನುಡಿದಳು. ಸ್ವಪ್ನದಲ್ಲಿ ಕಂಡ ಈ ಘಟನೆ ಕುಶನ ಅಂತಃಕರಣ ಕರಗಿ ಆತ ಎಲ್ಲಾ ಭೂಮಿಯನ್ನು ಸೇರಿಸಿ-ಅಯೋಧ್ಯೆಯನ್ನು ಪುನಃ ನಿರ್ಮಿಸಿದ.

ವಾಲ್ಮೀಕಿ ಮತದಂತೆ ಅಯೋಧ್ಯೆಯ ಪುನರ್ನಿರ್ಮಿತಿ ಸೂರ್ಯವಂಶಿ ಋಭವ ದೇವರಾಜನು ಮಾಡಿದ ಎಂಬ ಅಭಿಪ್ರಾಯವಿದೆ.

5 ತೀರ್ಥಂಕರರ ಜನ್ಮ ಅಯೋಧ್ಯೆಯಲ್ಲಿಯೇ. ಅದರೊಳಗೆ ಋಷಭದೇವ ಎನ್ನುವವ ರಾಮನ ಇಕ್ಷ್ವಾಕುವಂಶದವ ಎನ್ನುವ ಒಂದು ವಾದವಿದೆ. ಪುರುಷರಿಗೆ 72 ವಿದ್ಯೆ ಸ್ತ್ರೀಯರಿಗೆ 64 ವಿದ್ಯೆ ಕಲಿಸುವ ವ್ಯವಸ್ಥೆ ಇರುವ ಜೈನವಿದ್ಯಾಪೀಠವೊಂದು ಅಯೋಧ್ಯೆಯಲ್ಲಿ ಇಸ್ವಿ.ಸನ್ ಪೂರ್ವ 699ರಲ್ಲಿ ಇತ್ತು ಎಂಬ ಉಲ್ಲೇಖ ಆಚಾರ್ಯ ಹೇಮಚಂದ್ರಸೂರಿ ಅಚಿತ "ತ್ರಿಷಷ್ಠಿ ಶಲಾಕಾ ಪುರುಷಚರಿತ" ಎಂಬ ಗ್ರಂಥದಲ್ಲಿ ಕಾಣಸಿಗುತ್ತದೆ. ಪ್ರಸೇನಜಿತ ಎಂಬ ರಾಜ ಬಹುಶಃ ಶ್ರೀರಾಮನ ಸೂರ್ಯವಂಶದ ಕೊನೆಯ ಕುಡಿ ಎನ್ನಲಾಗಿದೆ.

ಅದಕ್ಕೆ ಪುಷ್ಠಿ ಎಂಬಂತೆ ಕೋಶಲದ ಮೇಲೆ ಮಗಧ ರಾಜ್ಯ ಬಂದು ಮುಂದೆ ನಂದ ಮತ್ತು ಮೌರ್ಯ ರಾಜ್ಯದ ಇತಿಹಾಸದಲ್ಲಿ ಕೋಶದಲ್ಲಿ ಉಲ್ಲೇಖ ಕಂಡು ಬರುವುದಿಲ್ಲ. ಕುಶ ಇರಲಿ ಋಷಭ ಇರಲಿ ಇವರ ಮೂಲಕ ಅಯೋಧ್ಯೆಯಲ್ಲಿ ರಾಮನ ಅತಿಭವ್ಯ ಮಂದಿರ ಕಲ್ಲಿನಲ್ಲಿ ಕೆತ್ತನೆ ಇದ್ದ 84 ಕಂಬಗಳು ಇದ್ದವು ಹೀಗೆ ಪುನಃ ಕಾಲಕಳೆದಂತೆ ವಿಕ್ರಮಾದಿತ್ಯನು ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ಜೀರ್ಣೋದ್ಧಾರವಾಗಿದೆ.

ಸ್ಕಾಂದಪುರಾಣದ ಅಯೋಧ್ಯೆ ಮಹಾತ್ಮೆಯ 18-19 ನೇ ಶ್ಲೋಕದಲ್ಲಿ ಭೌಗೋಳಿಕ ಸ್ಥಾನ ದರ್ಶನದ ಮಹತ್ವವನ್ನು ತಿಳಿಸಿದೆ. ಸಂತಕವಿ ತುಳಸೀದಾಸರಿಗೆ ಚಿತ್ರಕೂಟದಲ್ಲಿ ಶ್ರೀರಾಮನ ಸಾಕ್ಷಾತ್ಕಾರವಾಯಿತು. ಅಯೋಧ್ಯೆಯಲ್ಲಿ ನಿಂತು "ರಾಮಚರಿತ ಮಾನಸ" ಕೃತಿ ರಚಿಸಿದ್ದು ಇಲ್ಲಿ ಅಯೋಧ್ಯೆಯ ಮಹಿಮೆಯನ್ನು ಊಹಿಸಬಹುದಾಗಿದೆ.

**ಶೀಖ ಸಂಪ್ರದಾಯದ ಗ್ರಂಥದಲ್ಲಿ ಅಯೋಧ್ಯೆ:**

ಇವರ ಅನೇಕ ಗ್ರಂಥಗಳಲ್ಲಿ ಅಯೋಧ್ಯೆ ಶ್ರೀರಾಮ ಜನ್ಮ ಭೂಮಿಯ ವರ್ಣನೆ ಇದೆ. ಪುರಾತನ "ಜನ್ಮ ಸಾಖೀ ಪೊಥೀ ಜನ್ಮಸಾಖೀ" ಇವು ಪ್ರಮುಖವಿದ್ದು ಗಮನಾರ್ಹಸಂಗತಿ ಎಂದರೆ-ಇವರ ಅನೇಕ ಸಂಪ್ರದಾಯ ಮತ್ತು ಧರ್ಮಗ್ರಂಥದ ಚರಿತ್ರೆಯನ್ನು ಸರ್ವೋಚ್ಚ ನ್ಯಾಯಾಲಯವು ಪರಿಗಣಿಸಿದೆ. ಈ ಶೀಖ ಸಂಪ್ರದಾಯದ ಎಲ್ಲಾ ಗ್ರಂಥಗಳ ಆಧಾರ "ಗುರುನಾನಕ ದೇವಜಿ"ಎನ್ನುವ. ಇಸ್ವಿಸನ್ 1510 ರಿಂದ 1511 ರ ಮಧ್ಯದಲ್ಲಿ ಅಯೋಧ್ಯೆಯ ರಾಮಜನ್ಮಭೂಮಿ ದರ್ಶನ ಪಡೆದಿದ್ದ ಎನ್ನಲಾಗಿದೆ. ದುಷ್ಟಬಾಬರನ್ನು ಹಿಂದುಸ್ಥಾನದ ಮೇಲೆ ಆಕ್ರಮಣದ ಭಯಾನಕತೆಯ ಕತೆ ಶೀಖರ ಗುರುಗ್ರಂಥ ಸಾಹೇಬದಲ್ಲೂ ವರ್ಣಿಸಲಾಗಿದೆ. ಇ.ಸ.1608 ರಿಂದ 1611 ರ ಮಧ್ಯದಲ್ಲಿ ಪರದೇಶಿ ಪ್ರವಾಸಿಗರು ಭೇಟಿ ನೀಡಿದ ದಾಖಲೆಗಳು ಇವೆ. ಅಯೋಧ್ಯಾ ಸಂಘರ್ಷ ಮುಂದೊರಿದು. ಇಂಗ್ಲೀಷರ ಕಾಲದವರೆಗೂ ನಡೆದು-ಬ್ರಿಟೀಷರು ನಂತರವು ಸಂಘರ್ಷ ನ್ಯಾಯದಲ್ಲಿಯೇ ಇತ್ತು. ಆನಂದ ಸಂಪ್ರದಾಯದ ಪ್ರಮುಖ ಸ್ವಾಮೀ ಮಹೇಶ್ವರಾನಂದ,ಬಾಬ ವೈಷ್ಣವದಾಸ, ಇತ್ಯಾದಿ ಪ್ರಭೃತಿಗಳು ರಾಮಜನ್ಮ ಭೂಮಿಯ ನ್ಯಾಯ ಹೋರಾಟದಲ್ಲಿ ಅಗ್ರಭಾಗದಲ್ಲಿದ್ದರು.

ಎಲ್ಲಾ ಹೋರಾಟದ ಸಾರ-ಅಂತಿಮವಾಗಿ 9 ನವೆಂಬರ-2019 ರ ದಿನದಂದು ಸರ್ವೋಚ್ಚನ್ಯಾಯಾಲಯವು ಅನೇಕ ವರ್ಷಗಳ ಹೋರಾಟದ ಅಭ್ಯಾಸದ ಮೂಲಕ ಸಾಧಕ ಬಾಧಕ-ಸಾಕ್ಷಾಧಾರ ವಿಷಯ ಗಮನಿಸಿ ಈ ಭೂಮಿಯೇ ರಾಮ ಜನ್ಮ ಭೂಮಿ ಎಂದು ನಿರ್ಣಯ ಕೊಟ್ಟಿದ್ದು ಇತಿಹಾಸ.

ಇದೇ ತಿಂಗಳು ಜನವರಿ 22-01-2024 ರಂದು ಉತ್ತರಾಯಣ ಶುಭಮುಹೂರ್ತದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಭವ್ಯದೇಗುಲದ ಲೋಕಾರ್ಪಣೆಯಾಗಲಿದೆ.




# ಹೆಲ್ಮೆಟ್ ತಪ್ಪದೇ ಧರಿಸಬೇಕು

**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**






# ಶ್ರೀ ವಿಶ್ವೇಶತೀರ್ಥರು ಶ್ರೀರಾಮ ಜನ್ಮಭೂಮಿ ನಂಟು

– ಡಾ॥ ಎ.ಬಿ. ಶ್ಯಾಮಾಚಾರ್ಯ
98867 64668

ಐತಿಹಾಸಿಕವಾಗಿ ಭಾರತ ಜಗತ್ತಿನಲ್ಲಿ ಸುಸಂಸ್ಕೃತಿ ಪರಂಪರೆಯನ್ನು ಹೊಂದಿರುವ ದೇಶ. ಇದನ್ನು ಕರ್ಮಭೂಮಿ ಎಂದು ಕರೆಯಲಾಗಿದೆ. ಭಗವಂತ ಅವತಾರಗಳನೆತ್ತಿ ಧರ್ಮಸಂಸ್ಥಾಪನೆ ಮಾಡಿದ ಭೂಮಿ.ಈ ಧರೆಯಲ್ಲಿ ಅನೇಕ ದಾರ್ಶನಿಕರು, ಸಾಧು-ಸಂತರು ಜನ್ಮತಾಳಿ ಪರಂಪರೆಯನ್ನು ಮುಂದುವರೆಸಿದರು. ಇಂದಿಗೂ ಸಾಗಿ ಬರುತ್ತಿರುವುದು ದೇಶದ ಸುದೈವ ಹೀಗೆ ಪರಂಪರೆಯಲ್ಲಿ ಈ ಶತಮಾನ ಕಂಡ ಅಪರೂಪದ ಸಾಧಕರು ಚಿಂತಕರು ನಮ್ಮ ಶ್ರೀ ಶ್ರೀವಿಶ್ವೇಶತೀರ್ಥ ಶ್ರೀಪಾದಂಗಳವರು. ಇವರು ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಪೇಜಾವರ ಮಠದಲ್ಲಿ ವಿರಾಜಮಾನರಾದ 33ನೇಯ ಯತಿವರೇಣ್ಯರು.

ಶ್ರೀವಿಶ್ವೇಶತೀರ್ಥರು ವಿಶ್ವಕಂಡ ವಿಶಿಷ್ಟ ವ್ಯಕ್ತಿತ್ವಾದ ಸಾಧಕರು. ತಮ್ಮ ಜೀವನದಲ್ಲಿ ಸಾಧಿಸಿದ ಕಾರ್ಯಗಳು ಅಗಣಿತ, ಆಧ್ಯಾತ್ಮಿಕ ಹಾಗೂ ಸಾಮಾಜಿಕವಾಗಿ ಮಾಡಿದ ಕಾರ್ಯಗಳು ಅಭೂತಪೂರ್ವ. ಅತಿ ಚಿಕ್ಕವಯಸ್ಸಿನಲ್ಲಿ ಉನ್ನತವಾದ ಸನ್ಯಾಸವನ್ನು ಸ್ವೀಕರಿಸಿ ಗುರುಗಳಲ್ಲಿ ವಿದ್ಯಾಭ್ಯಾಸ ಮಾಡಿ ವಿದ್ಯಾಂಸರಾದರು. 1953ರಲ್ಲಿ ಅಖಿಲಭಾರತ ಮಧ್ವಮಹಾಮಂಡಲಿಯನ್ನು ಸ್ಥಾಪಿಸಿ ದೇಶಾದ್ಯಾಂತ ನೂರಾರು ಶಾಖೆಗಳ ಮೂಲಕ ಧಾರ್ಮಿಕ ಸಾಮಾಜಿಕ ಕಾರ್ಯಗಳು ನಿರಂತರ ನಡೆಯುವಂತಾಗಿಸಿದರು.1956ರಲ್ಲಿ ಬೆಂಗಳೂರಿನಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠವನ್ನು ಸ್ಥಾಪಿಸಿ ಈಗಾಗಲೇ ಐನೂರಕ್ಕೂ ಹೆಚ್ಚಿನ ವಿದ್ವಾಂಸರು, ಪುರೋಹಿತರನ್ನು ಸಮಾಜಕ್ಕೆ ನೀಡಿದರು.1965ರಲ್ಲಿ ಸ್ಥಾಪಿತಗೊಂಡ ವಿಶ್ವಹಿಂದೂ ಪರಿಷತ್‌ನ ಪ್ರಾರಂಭದಿಂದಲೂ ಸ್ಥಾಪಕ ಸದಸ್ಯರಾಗಿ ಮಾಡಿದ ಕಾರ್ಯಗಳನ್ನು ಯಾರೂ ಮರೆಯುವಂತಿಲ್ಲ. ಅದರ ಎಲ್ಲ ಸಮ್ಮೇಳನಗಳಲ್ಲೂ,ಸಕ್ರಿಯವಾಗಿ ಭಾಗವಹಿಸಿ ಮಾರ್ಗದರ್ಶಕರಾದರು. ಇದರಂತೆ ರಾ.ಸ್ವಾ.ಸಂಘದ ಸಂಬಂಧವಿದ್ದು ಹಿಂದೂಗಳ ಪರವಾಗಿ ಅನೇಕ ಸಲ ಹೋರಾಡಿ ಚಳುವಳಿಗಳಲ್ಲಿ ಭಾಗವಹಿಸಿದ್ದು ಅವಿಸ್ಮರಣೀಯ.ಎಲ್ಲಕ್ಕೂ ಮಿಗಿಲಾಗಿ ಉಡುಪಿಯ ಶ್ರೀಕೃಷ್ಣಮಠದಲ್ಲಿ ಐದು ಪರ್ಯಾಯಗಳನ್ನು ಪೂರೈಸಿದ್ದು ದಾಖಲೆಯಾಯಿತು. ಆ ಸಂದರ್ಭದಲ್ಲಿ ಕೈಗೊಂಡ ಆಧ್ಯಾತ್ಮಿಕ, ಧಾರ್ಮಿಕ,ಸಾಂಸ್ಕೃತಿಕ,ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಾಡಿದ ಶ್ರೀಗಳವರ ಕೊಡುಗೆ ಅಪಾರ.

ಶ್ರೀ ವಿಶ್ವೇಶತೀರ್ಥರಿಗೂ ವಿಶ್ವಹಿಂದೂ ಪರಿಷತ್‌ಗಳಿಗೆ ಇದ್ದದ್ದು ಅವಿನಾಭಾವ ಸಂಬಂಧ. ಹಿಂದುತ್ವದ ದೊಡ್ಡದನಿಯಾಗಿ ವಿರೋಧ-ವಿವಾದಗಳು ಬಂದಾಗ ಸ್ಪಂದಿಸಿ ಹೋರಾಡಿದರು. ವಿಶೇಷವಾಗಿ ಹಿಂದುತ್ವ ವಿಚಾರಗಳಲ್ಲಿ ವಿವಾದಗಳಿಗೆ ಇವರಬಳಿ ಮುಕ್ತಚರ್ಚೆಗೆ ಅವಕಾಶವಿತ್ತು. ಅಯೋಧ್ಯೆಯ ಶ್ರೀರಾಮಜನ್ಮಭೂಮಿ ವಿಷಯವಾಗಿ ಅನೇಕ ಸಲ ಸಂಘಟನೆಗಳಲ್ಲಿ ಭಾಗವಹಿಸಿದರು. ಹೋರಾಟದ ಸಂದರ್ಭಗಳಲ್ಲೂ ಮುಂದಾಳುತ್ವವಹಿಸಿ ಭಾಗಿಯಾದರು. 1990 ರಲ್ಲಿ ಜನ್ಮಭೂಮಿ ವಿಮುಕ್ತಿಗಾಗಿ ಹೋರಾಟ ನಡೆದಾಗ ಇತರ ಸ್ವಾಮಿಗಳ ಗಣ್ಯರ ಸಮೇತವಾಗಿ ಕರಸೇವೆಯಲ್ಲಿ ಪಾಲ್ಗೊಂಡರು. 4.11.1990 ರಲ್ಲಿ ಕರಸೇವೇಗೆಂದು ತೆರಳುವಾಗ ಲಕ್ನೋ ಬಳಿ ಶ್ರೀಗಳವರನ್ನು ಪೋಲೀಸರು ಬಂಧಿಸಿದರು. ಬಿಡುಗಡೆ ಹೊಂದಿ ಮುಂದೆಸಾಗಲು ಮತ್ತೆ ಫರೂಕಾಬಾದ್‌ನಲ್ಲಿ ಬಂಧಿಸಿ ಸೆರೆಮನೆಗೆ ಕರೆದೊಯ್ದುರು.ಪೋಲೀಸರ ಅನುಮತಿ ಪಡೆದು ಸೆರೆಮನೆಯಲ್ಲಿಯೇ ದೇವರ ಮಂಟಪವನ್ನು ಹಾಗಾಗಿ ದೇವಮಂದಿರವನ್ನಾಗಿಸಿ ಯಥಾರೀತಿ ಪೂಜಾದಿಗಳನ್ನು ನೆರವೇರಿಸಿದರು. ನೆರೆದ ಪೋಲೀಸರು ಊರಿನ ಜನರು ದೇವರ ದರುಶನ ಪಡೆದು ಪುನೀತರಾದರು.

1992ರಲ್ಲಿ ಅಯೋಧ್ಯೆಯಲ್ಲಿ ಪರಿಷತ್‌ನ ನೇತೃತ್ವದಲ್ಲಿ ಸಂಘ ಪರಿವಾರದಿಂದ ಕರಸೇವೆ ನಿರ್ಧರಿಸಲಾಯಿತು. ಶ್ರೀಗಳವರು ಇತರ ಶ್ರೀಗಳು ಹಾಗೂ ವಿದ್ಯಾರ್ಥಿಗಳೊಂದಿಗೆ ಹೊರಟರು. 5.12.1992 ರಂದು ಶ್ರೀಗಳವರ ಅಧ್ಯಕ್ಷ



ತೆಯಲ್ಲಿ ಧರ್ಮಸಂಸತ್ ಸಭೆ ನಡೆಯಿತು. ಅಯೋಧ್ಯೆಯಲ್ಲಿ ಸುಮಾರು ಐದು ಲಕ್ಷ ಕರಸೇವಕರು ಸೇರಿದ್ದರು. ತಿಳಿದಂತೆ 6ನೇ ತಾರೀಖು ಕರ ಸೇವಕರಿಂದ ಬಾಬರಿ ಮಸೀದು ಶ್ರೀಗಳವರು ನೋಡುತ್ತಿದ್ದಂತೆ ಧ್ವಂಸಗೊಂಡಿತು. ಅದೇ ಸಂದರ್ಭದಲ್ಲಿ ಕರಸೇವಕ ಗುಂಪೊಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಸ್ಥಾಪಿಸಿದ್ದ ಶ್ರೀರಾಮ,ಸೀತಾ,ಲಕ್ಷ್ಮಣ ಹಾಗೂ ಹನುಮಂತನ ಪ್ರತಿಮೆಗಳನ್ನು ಶ್ರೀಗಳವರಿಗೆ ತಂದು ಒಪ್ಪಿಸಿದರು.ಅಂದಿನ ಕೇಂದ್ರ ಸರ್ಕಾರ ನಿಷೇಧ ಘೋಷಿಸಿ ಸೈನ್ಯದ ಬಿಗಿ ಭದ್ರ ಮಾಡಿತು.

ಲಕ್ಷಾಂತರ ಕರ ಸೇವಕರು ಹಿಂತಿರುಗಿದರೂ ಶ್ರೀಗಳವರು ಅಲ್ಲೇ ಕುಳಿತರು. ಡಿ.7 ರಂದು ಎಷ್ಟೇ ಪ್ರಯತ್ನಿಸಿದರೂ ಆ ಸ್ಥಳಕ್ಕೆ ಹೋಗಲಾಗಲಿಲ್ಲ. ರಸ್ತೆಯಲ್ಲೇ ಶಿಷ್ಯರೊಂದಿಗೆ ಧರಣಿಗೆ ಕೂತರು. ಮುಖ್ಯ ಸೈನ್ಯಾಧಿಕಾರಿ 8ನೇ ತಾ. ಶ್ರೀಗಳವರೊಂದಿಗೆ ಒಬ್ಬ ಶಿಷ್ಯನನ್ನು ಹೋಗಲು ಅನುಮತಿ ನೀಡಿದರು. ಅಂದು ಬೆಳಿಗ್ಗೆ ಮಿಲಿಟರಿ ಹಾಗೂ ಪೋಲಿಸರ ನಿರ್ಭಂಧದಲ್ಲಿ ಪ್ರತಿಮೆಗಳಿದ್ದ ಆ ಪೆಟ್ಟಿಗೆಯೊಂದಿಗೆ ಹೋಗಿ ಅದೇ ಸ್ಥಳದಲ್ಲಿ ಶ್ರೀರಾಮರ ಮೂರ್ತಿಗಳ ಪ್ರತಿಷ್ಠೆ ಮಾಡಿದರು. ಇದು ನಿಜಕ್ಕೂ ದೇಶವು ಎಂದೂ ಮರೆಯಲಾಗದ ವಿಶೇಷ ರೋಮಾಂಚಕಾರಿಯಾದ ಘಟನೆ. ಮುಂದೆ ಅದೇ ಸ್ಥಳದಲ್ಲಿ ಶ್ರೀರಾಮಮಂದಿರ ನಿರ್ಮಾಣಕ್ಕೆ ನಾಂದಿಯಾಯಿತು. ಶ್ರೀಪೇಜಾವರ ಶ್ರೀಪಾದಂಗಳವರ ಜೀವಿತಕಾಲದ ಕಾರ್ಯ-ಆಚರಣೆಗಳ ವಿವರಣೆ ಯಾರಿಂದಲೂ ಕೊಡಲಾಗದ್ದು. ಬಹುಮುಖವಾಗಿ ಬಹು ವಿಧದಿ ಅವರು ಮಾಡಿರುವ ಕೈಂಕರ್ಯಗಳು ಸಮಾಜದ ನಾನಾ ವರ್ಗದವರಿಗೆ ಪ್ರೇರಣೆ-ಪ್ರಯೋಜನ-ಪ್ರಚೋದನೆ-ಪ್ರಾಪ್ತಿದಾಯಕವಾಗಿದೆ. ಇಂತಹ ಮಹಾತ್ಮರನ್ನು ಆದರಿಸುವುದು-ಅನುಕರಿಸುವುದು ನಮ್ಮದಾಗಬೇಕು.





**ಓದುಗರಿಗೂ, ಚಂದಾದಾರರಿಗೂ ಮತ್ತು ಏಜೆಂಟರಿಗೂ ನೂತನ ಆಂಗ್ಲ ಹೊಸವರ್ಷಾರಂಭದ ಶುಭಾಶಯಗಳು ಮತ್ತು ಮಕರ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು**

**– ಪ್ರಧಾನ ಸಂಪಾದಕರು**



# ನೋಡ ಬನ್ನಿ ಬನದ ಹುಣ್ಣಿಮೆಯ ವೈಭವ



-ಕು॥ ದೀಪಶ್ರೀ ಎಸ್. ಕೂಡ್ಲಿಗಿ
82963 22664

ಭಾರತ ದೇಶ ಸಂಸ್ಕೃತಿಗಳ ತವರೂರು. ಹಬ್ಬಗಳ ನೆಲೆಬೀಡು. ಹಿಂದೂ ಸಂಪ್ರದಾಯದಲ್ಲಿ ಪ್ರತಿಯೊಂದು ಹಬ್ಬ, ಹುಣ್ಣಿಮೆ, ಅಮಾ ವಾಸ್ಯೆಗಳಿಗೆ ತನ್ನದೇ ಆದ ವಿಶೇಷತೆ ಇರುತ್ತದೆ. ವರ್ಷದಲ್ಲಿ ಬರುವ 12 ಹುಣ್ಣಿಮೆಗಳಿಗಿಂತ ಜನವರಿ 25 ರಂದು ಬರುವ ಹುಣ್ಣಿಮೆ ತುಂಬಾ ಪ್ರಾಶಸ್ತ್ಯವಾಗಿದೆ. ಪುಷ್ಯ ಮಾಸದಲ್ಲಿ ಬರುವ ಈ ಹುಣ್ಣಿಮೆಯನ್ನು ಬನದ ಹುಣ್ಣಿಮೆ ಹಾಗೂ ಬನಶಂಕರಿ ಹುಣ್ಣಿಮೆ ಎಂತಲೂ ಕರೆಯುವ ಪ್ರತೀತಿ ಇದೆ.

**ಸಂಸ್ಕೃತ ಪದ :**

ಬನಶಂಕರಿ ದೇವಸ್ಥಾನ ಬಾಗಲಕೋಟೆ ಜಿಲ್ಲೆ ಬಾದಾಮಿ ಬಳಿಯ ಚೋಳಚಗುಡ್ಡದ ತಿಲಕಾರಣ್ಯ ಕಾಡಿನಲ್ಲಿದೆ. ಬನಶಂಕರಿ ಪಾರ್ವತಿ ದೇವಿಯ ಸ್ವರೂಪ. ಈ ದೇಗುಲಕ್ಕೆ ದಿನಂಪ್ರತಿ ಕರ್ನಾಟಕ ಹಾಗೂ ಮಹಾರಾಷ್ಟ್ರದಿಂದ ಅಪಾರ ಸಂಖ್ಯೆಯ ಭಕ್ತರು ಆಗಮಿಸುತ್ತಾರೆ. ಈ ದೇವಿಗೆ ಇರುವ ಮತ್ತೊಂದು ಹೆಸರು ವನಶಂಕರಿ. ಈ ಪದವು ಸಂಸ್ಕೃತ ಪದಗಳಿಂದ ಬಂದಿದೆ. ವನ ಎಂದರೆ ಕಾಡು ಶಂಕರಿ ಎಂದರೆ ಪಾರ್ವತಿ. (ಶಿವನ ಪತ್ನಿ.)

**ದಂತಕಥೆ :**

ಹಲವು ವರ್ಷಗಳ ಹಿಂದೆ ದುರ್ಗಮಾಸುರ ಎಂಬ ರಕ್ಕಸನೊಬ್ಬನು ನಾಲ್ಕು ವೇದಗಳನ್ನು ವಶಪಡಿಸಿಕೊಳ್ಳಲು ಹಿಮಾಲಯಕ್ಕೆ ತೆರಳಿ ನಿರಾಹಾರಿಯಾಗಿ ಕೇವಲ ಗಾಳಿಯನ್ನು ಸೇವಿಸುತ್ತ ಬ್ರಹ್ಮನ ಕುರಿತು ಘನ ಘೋರವಾದ ತಪಸ್ಸು ಮಾಡುತ್ತಾನೆ. ಅವನ ತಪಸ್ಸಿಗೆ ಮೆಚ್ಚಿ ಬ್ರಹ್ಮದೇವರು ಪ್ರತ್ಯಕ್ಷನಾಗಿ ವೇದಗಳನ್ನು ವಶಪಡಿಸಿಕೊಳ್ಳುವ ವರವನ್ನು ಕೇಳುತ್ತಾನೆ, ಬ್ರಹ್ಮ ತಥಾಸ್ತು ಎಂದಾಗ ಭೂಲೋಕದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗುತ್ತದೆ.

ನಿತ್ಯ ನಡೆಯುತ್ತಿದ್ದ ದೇವತಾ ಕಾರ್ಯಗಳೆಲ್ಲವೂ ನಿಂತು, ಎಲ್ಲಾ ಋಷಿ ಮುನಿಗಳು, ಸಾಧು ಸಂತರು ಕಲಿತಿದ್ದ ವೇದ ಮಂತ್ರಗಳೆಲ್ಲವೂ ಮರೆತು ಹೋಗಿ ಯಜ್ಞ, ಯಾಗಾದಿ ಕಾರ್ಯಗಳು ನಿಂತು ಹೋಗುತ್ತವೆ. ಹೀಗೆ ಯಜ್ಞಯಾಗಾದಿಗಳು ನಿಂತ ಕಾರಣ, ದೇವತೆಗಳ ಶಕ್ತಿಯೂ ಕ್ರಮೇಣ ಕುಂದತೊಡಗುತ್ತದೆ. ಪರಿಣಾಮ ಭೂಲೋಕದಲ್ಲಿ ಅರಾಜಕತೆ ಉಂಟಾಗಿ, ಮಳೆ ಬೆಳೆ ಇಲ್ಲದೇ ಕ್ಷಾಮ ತಲೆದೋರಿ ತುತ್ತು ಅನ್ನಕ್ಕೂ ಪರದಾಡಬೇಕಾದ ಸ್ಥಿತಿ ಬರುತ್ತದೆ. ಭೂಲೋಕದ ಮನುಷ್ಯರು ಪ್ರಾಣಿ, ಪಕ್ಷಿಗಳು ಹಸಿವು ಹಾಗೂ ಬಾಯಾರಿಕೆಯಿಂದ ತತ್ತರಿಸಿ ಪ್ರಾಣ ಬಿಟ್ಟವು. ಆ ರಾಕ್ಷಸನ ವಿರುದ್ಧ ಹೋರಾಡಲೂ ಅಸಾಧ್ಯವಾದ ದೇವಾನುದೇವತೆಗಳೂ ದಿಕ್ಕೇ ತೋಚದೇ ಅಡಗಿ ಕುಳಿತು ಕೊಳ್ಳುತ್ತಾರೆ. ಇವೆಲ್ಲವನ್ನೂ ಗಮನಿಸಿದ ಋಷಿ ಮುನಿಗಳು ತಮ್ಮೆಲ್ಲಾ ಅಳಿದುಳಿದ ಶಕ್ತಿಗಳನ್ನು ಸೇರಿಸಿ ಹಿಮಾಲಯಕ್ಕೆ ತೆರಳಿ ಲೋಕಕಲ್ಯಾಣಕ್ಕಾಗಿ ಶಕ್ತಿ ದೇವಿಯನ್ನು ಕುರಿತು ನಿರಾಹಾರಿಗಳಾಗಿ ಕಠಿಣ ತಪಸ್ಸನ್ನು ಮಾಡುತ್ತಾರೆ.

ಅವರೆಲ್ಲರ ತಪಸ್ಸಿಗೆ ಮೆಚ್ಚಿ ಪಾರ್ವತಿಯು ಪ್ರತ್ಯಕ್ಷಳಾದಾಗ ಭೂಲೋಕದಲ್ಲಿ ಹಸಿವಿನಿಂದ ಹಲುಬಿ ನರಳುತ್ತಿದ್ದ ನರರು, ಪ್ರಾಣಿ, ಪಕ್ಷಿಗಳ ವೇದನೆಯನ್ನು ವಿವರಿಸಲಾಗಿ, ಪಾರ್ವತೀದೇವಿಯ ಮನ ಕಲಕುತ್ತದೆ. ಅವಳಿಗೇ ಅರಿವಿಲ್ಲದಂತೆ ಆಕೆಯ ಕಣ್ಣಿನಿಂದ ಅಗಾಧವಾಗಿ ಕಣ್ಣೀರು ಹರಿದು, ಅದೇ ಭೋರ್ಗರೆವ ಮಳೆ ರೂಪದಲ್ಲಿ ಭೂಲೋಕದಲ್ಲಿ ಸುರಿದ ಪರಿಣಾಮ ಎಲ್ಲಾ ಕೆರೆ,ನದಿಗಳು ಮತ್ತೆ ಮೈದುಂಬಿ ಹರಿಯ ತೊಡಗುತ್ತವೆ. ಪಾರ್ವತಿ ದೇವಿಯು ಪ್ರಕೃತಿಯ ರೂಪ ಧರಿಸಿ ಸಸ್ಯ ಹಾಗೂ ಹಣ್ಣುಗಳನ್ನು ಚಿಗುರಿಸಿ ಎಲ್ಲರಿಗೂ ಆಹಾರ ನೀಡಿದಳು. ಹೀಗೆ ಪ್ರತಿಯೊಬ್ಬರ ಹಸಿವನ್ನು ನೀಗಿಸಲು

ಶಾಖಾಹಾರದ ಆಹಾರವನ್ನು ನೀಡಿದ್ದ ಕಾರಣ ಆ ದೇವಿಗೆ ಶಾಕಾಂಬರಿ ಎಂಬ ಹೆಸರು ಬಂದಿತು ಎನ್ನಲಾಗುತ್ತದೆ. ಶಾಕಾಂಬರಿ ಎಂದರೆ ತರಕಾರಿ ದೇವತೆ.

ಮತ್ತೊಂದು ಪುರಾಣದ ಪ್ರಕಾರ, ಬಾದಾಮಿ ಪ್ರದೇಶವು ಭಯಂಕರ ಕ್ಷಾಮದಿಂದ ತತ್ತರಿಸಿತ್ತು,ಪ್ರಾಣಿ,ಪಕ್ಷಿ ಪ್ರಜೆಗಳಾದಿಗಳೆಲ್ಲರೂ ಬಾಯಾರಿಕೆಯಿಂದ ಪರದಾಡುತ್ತಿದ್ದಾಗ,ದೇವಾನುದೇವತೆಗಳೆಲ್ಲರೂ ಸೇರಿ, ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರರನ್ನು ಕಂಡು ಈ ತೊಂದರೆಯಿಂದ ಪಾರು ಮಾಡುವಂತೆ ಪ್ರಾರ್ಥಿಸಿದರಂತೆ. ಅದಕ್ಕೆ ತ್ರಿಮೂರ್ತಿಗಳು ಈ ಸಮಸ್ಯೆಗೆ ಬನಶಂಕರಿ ದೇವಿ ಮಾತ್ರಾ ಪರಿಹರವನ್ನು ನೀಡಬಲ್ಲಳು ಎಂದು ಎಲ್ಲರೂ ಸೇರಿ ತಿಲಕಾರಣ್ಯ ಪ್ರದೇಶಕ್ಕೆ ಬಂದು ತಾಯಿ ಬನಶಂಕರಿಯನ್ನು ಕುರಿತು ತಾಯಿ ಈ ಪ್ರದೇಶದಲ್ಲಿ ಮಳೆ ಬೆಳೆಯಿಲ್ಲದೇ ಯಜ್ಞಯಾಗಾದಿಗಳು ನಡೆಯದೆ, ಬದುಕಲು ಬಹಳ ಕಷ್ಟವಾಗಿದೆ. ಈ ಸಮಸ್ಯೆಯಿಂದ ಪಾರು ಮಾಡು ಎಂದು ಬೇಡಿಕೊಂಡರು. ಅವರೆಲ್ಲರ ಪ್ರಾರ್ಥನೆಯಿಂದ ಪ್ರಸನ್ನಳಾದ ಬನಶಂಕರಿ ದೇವಿ ಪ್ರತ್ಯಕ್ಷಳಾಗಿ ಜನರ ದಾಹವನ್ನು ತೀರಿಸಿದ್ದಲ್ಲದೇ, ತನ್ನ ತನುವಿನ ಶಾಖದಿಂದ ತರಕಾರಿಗಳನ್ನು ಸೃಷ್ಟಿಸಿ ಜನರ ಸಂಕಷ್ಟಗಳನ್ನು ನೀಗಿಸಿದಳಂತೆ. ಹಾಗಾಗಿ ಈ ದೇವಿಗೆ ಶಾಕಾಂಬರಿ ಎಂದೂ ಕರೆಯಲಾಗುತ್ತದೆ. ಮುಂದೆಂದೂ ಈ ಪ್ರದೇಶ ನೀರಿಲ್ಲದೇ ಕ್ಷಾಮಕ್ಕೆ ಈಡಾಗಬಾರದೆಂದು ಈ ಪ್ರದೇಶದಲ್ಲಿ ಹರಿದ್ರಾತೀರ್ಥ, ತೈಲತೀರ್ಥ, ಪದ್ಮತೀರ್ಥ, ಕ್ಷಮಾತೀರ್ಥ ಮುಂತಾದ ಅನೇಕ ತೀರ್ಥ ಕೊಳಗಳನ್ನು ಸೃಷ್ಟಿಸಿದ ಕಾರಣ ಈ ಪ್ರದೇಶ ಸದಾ ನಂದನವನವಾಗಿ ನಿತ್ಯ ಹರಿದ್ವರ್ಣಗಳಿಂದ ಕಂಗೊಳಿಸುವಂತಾಗಿದೆ.

**ನಿರ್ಮಾಣ :**

ದೇವಾಲಯ ಕ್ರಿಸ್ತಶಕ 7 ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಜಗದೇಕಮಲ್ಲ ದೇವಿಯ ಚಿತ್ರವನ್ನು ಸ್ಥಾಪಿಸಿದ. ದೇವಾಲಯವನ್ನು 1750 ಮರಾಠ ಮುಖ್ಯಸ್ಥ ಪರಶುರಾಮ ನಿರ್ಮಿಸಿದ. 1019 ದೇವಾಲಯದ ಉತ್ತರ ಭಾಗದ ಕಂಬದ ಮೇಲೆ ಕನ್ನಡ ಭಾಷೆಯ ಶಾಸನ ರಾಷ್ಟ್ರಕೂಟ ರಾಜ ಭೀಮಾ ದೇವನ ಶೌರ್ಯ ತಿಳಿಸುತ್ತದೆ. ಪ್ರವೇಶ ದ್ವಾರದಲ್ಲಿ ದೀಪ ಸ್ತಂಭ ಇದ್ದು ಇದನ್ನು ಯೋಧ ಕೇತಿಮಯ್ಯ ನಿರ್ಮಿಸಿದ ಕಾರ್ತಿಕ ಮಾಸದಲ್ಲಿ ಈ ದೀಪ ಸ್ತಂಭಗಳಲ್ಲಿ ಭಕ್ತರು ದೀಪವನ್ನು ಬೆಳಗಿಸುತ್ತಾರೆ. ಚಾಲುಕ್ಯರ ವಾಸ್ತುಶಿಲ್ಪ ಶೈಲಿಯಲ್ಲಿದ್ದ ಈ ದೇವಸ್ಥಾನವನ್ನು ಮುಂದೆ 18 ನೇ ಶತಮಾನದಲ್ಲಿ ಮರಾಠರ ದಳವಾಯಿಗಳು ಜೀರ್ಣೋದ್ಧಾರ ಮಾಡಿದ್ದಾರೆ.

ಪ್ರತೀ ದಿನವೂ ನೂರಾರು ಭಕ್ತಾದಿಗಳು ಆಕೆಯ ದರ್ಶನ ಪಡೆದು ಪುನೀತರಾಗುತ್ತಾರೆ. ಆರಂಭಿಕ ದೇವಾಲಯ ದ್ರಾವಿಡ ಶೈಲಿಯಲ್ಲಿ ಪ್ರಸ್ತುತ ವಿಜಯನಗರ ಶೈಲಿಯಲ್ಲಿದೆ. ನಾಲ್ಕು ಕಡೆ ಎತ್ತರವಾದ ಗೋಡೆ ಆವೃತ್ತವಾಗಿದೆ. ಮುಖ್ಯ ರಚನೆ ಮುಖಮಂಟಪ,ಅರ್ಧಮಂಟಪ, ವಿಮಾನಗೋಪುರವಿದೆ. ಚಾಲುಕ್ಯ ರಾಜಧಾನಿ ಬಾದಾಮಿಯಾಗಿದ್ದು.ಇವರ ಕುಲದೇವತೆ ಬನಶಂಕರಿ ಬಗ್ಗೆ ಸ್ಕಂದ ಪುರಾಣದಲ್ಲಿ ವಿವರಣೆ ನೋಡಬಹುದು.




**ಆಚರಣೆ :**

ಕರ್ನಾಟಕ, ಮಹಾರಾಷ್ಟ್ರ, ಉತ್ತರ ಪ್ರದೇಶ, ರಾಜಸ್ಥಾನದಲ್ಲಿ ಬನದ ಹುಣ್ಣಿಮೆಯನ್ನು ಹೆಚ್ಚಾಗಿ ಆಚರಣೆ ಮಾಡಲಾಗುತ್ತದೆ.


**ಪ್ರಾಚೀನ ಬನಶಂಕರಿ ದೇವಸ್ಥಾನ :**

ಕರ್ನಾಟಕದ ಬಾದಾಮಿ, ಬೆಂಗಳೂರು, ಮಹಾರಾಷ್ಟ್ರ, ನಾಗೇವಾಡಿ ಪುಣೆ, ಉತ್ತರ ಪ್ರದೇಶದ ಶಹ್ರಾನ್ಪುರ ರಾಜಸ್ಥಾನದ ಸಾಂಬಾರ, ಜಾರ್ಖಂಡಿನಲ್ಲಿ ಪ್ರಾಚೀನ ಬನಶಂಕರಿ ದೇವಸ್ಥಾನ ಇವೆ.

**ಪೂಜಾ ಸ್ವರೂಪ :**

ಅಷ್ಟಮಿ ದಿನದಂದು ಅಷ್ಟಭುಜಳಾದ ಅಷ್ಟಸಿದ್ಧಿಯನ್ನು ಕೊಡುವ ಬನಶಂಕರಿ ದೇವಿಯನ್ನು ಭಕ್ತಿಯಿಂದ ವೈದಿಕ ಮಂತ್ರಗಳಿಂದ ಪೂಜಿಸುವರು.ಆ ದಿನ ಘಟ ಸ್ಥಾಪನೆಯನ್ನು ಮಾಡುವರು. ನವಮಿಯ ದಿನದಂದು 9 ಕೋಟಿ ಸಖಿಯರಿಂದ ಕೂಡಿದ ನವದುರ್ಗೆ ಸ್ವರೂಪಳಾದ ನವರತ್ನ ಭರಿತಭೂಷಿತಳಾದ ದೇವಿಯನ್ನು ಪೂಜಿಸುವರು. ದೇವಿಗೆ ಪ್ರತಿನಿತ್ಯ ವಿಶೇಷ ಪೂಜೆ ಅಭಿಷೇಕಗಳು ನಡೆಯುತ್ತಲೇ ಇರುತ್ತದೆ. ಭಕ್ತರು ತಮ್ಮ ಹರಕೆಯಂತೆ ವಿವಿಧ ಪೂಜೆ ಪುನಸ್ಕಾರ ಅಭಿಷೇಕ ಮಾಡಿ ದೇವಿ ಕೃಪೆಗೆ ಪಾತ್ರರಾಗುತ್ತಾರೆ.ನವರಾತ್ರಿ ಹಬ್ಬದ ದಸರೆಯಲ್ಲಿ ಮಾತ್ರವಲ್ಲದೆ ಕೆಲವೆಡೆ ಅಷ್ಟಮಿಯಿಂದ ಹುಣ್ಣಿಮೆಯವರೆಗೂ ದುರ್ಗೆಯ ವಿವಿಧ ಅವತಾರಗಳನ್ನು ಪೂಜಿಸಲಾಗುತ್ತದೆ. ಬನಶಂಕರಿ ಹುಣ್ಣಿಮೆಯಂದು ರಾಜ್ಯದ ಎಲ್ಲಾ ಬನಶಂಕರಿ ದೇವಸ್ಥಾನಗಳಲ್ಲಿ ಪೂಜೆ ಕೈಗೊಳ್ಳಲಾಗುತ್ತದೆ. ಬನದ ಹುಣ್ಣಿಮೆ ದಿನ ಬನಶಂಕರಿ ರಥೋತ್ಸವ ಜರಗುತ್ತದೆ. ಈ ವೇಳೆ ರಥಕ್ಕೆ ಬಾಳೆಹಣ್ಣಿ ಬದಲಾಗಿ ಉತ್ತುತ್ತಿ, ದವನ ಎಸೆಯುವುದು ಸಂಪ್ರದಾಯ ಜೊತೆಗೆ ಬನಶಂಕರಿ ನಿನ್ನ ಪಾದಕ ಶಂಬುಕೊ ಎಂಬುದು ಪ್ರಮುಖ ಘೋಷಣೆ, ಇದಕ್ಕೆ ವಿಶೇಷ ಅರ್ಥವಿದೆ. "ಹೀಗೆಂದರೆ ಹೇ ಬನಶಂಕರಿಯೇ ನಾನು ನಿನಗೆ ಎಂದು ಸರಿಸಾಟಿ ಆಗಲಾರೆ. ನಾನು ಯಾವಾಗಲೂ ನಿನ್ನ ಪಾದಯಲ್ಲೇ ಇರುವವರು" ಎಂದರ್ಥ. ಈ ವೇಳೆಯಲ್ಲಿ ದೋಣಿ ಉತ್ಸವ ನಡೆಯುತ್ತದೆ. ಹುಣ್ಣಿಮೆಯೆಂದು ಮಾಘಸ್ನಾನ ಮಾಡುತ್ತಾರೆ.

ಸರ್ವಾಲಂಕೃತಳಾದ ಬನಶಂಕರಿ ದೇವಿಯ ರಥೋತ್ಸವ ದಿನ ಬಾದಾಮಿ ಪಟ್ಟಣ ವನ್ನು ಬಗೆ ಬಗೆಯ ಎಲೆಗಳು ಹಾಗೂ ಹೂವುಗಳಿಂದ ಅಲಂಕರಿಸುವುದು ಇಲ್ಲಿನ ವಿಶೇಷವಾಗಿದೆ. ಈ ರಥೋತ್ಸವದ ಹಿಂದಿನ ದಿನ



ಪಲ್ಯದ ಹಬ್ಬ(ಪಲ್ಲೇದ ಹಬ್ಬ)ಅರ್ಥಾತ್ ತರಕಾರಿ ಉತ್ಸವ ವನ್ನು ಆಚರಿಸುತ್ತಾರೆ. ಅಂದು ತಾಯಿ ಬನಶಂಕರಿಗೆ 108 ಬಗೆಯ ತರಕಾರಿಗಳಿಂದ ತಯಾರಿಸಿದ ಖಾದ್ಯಗಳನ್ನು ನೈವೇದ್ಯವಾಗಿ ಅರ್ಪಿಸುವುದು ಇಲ್ಲಿನ ಸಂಪ್ರದಾಯ ವಾಗಿದೆ. ಬಾದಾಮಿಯಲ್ಲಿ ಭಕ್ತರಿಗೆ ಪ್ರಸಾದ ವ್ಯವಸ್ಥೆ ಸಹ ಮಾಡಲಾಗುತ್ತದೆ. ಅಗಸ್ತ್ಯ ಮಹರ್ಷಿಗಳು ಬನಶಂಕರಿ ದೇವಿಯನ್ನು ಬನಸಿರಿದೇವಿ ಎಂದು ಕರೆದಿದ್ದಾರೆ. ಕಾರಣ "ಬನ" ಎಂದರೆ ಅರಣ್ಯ "ಸಿರಿ" ಎಂದರೆ ಸಂಪತ್ತು ಎಂದು. ಬನದ ಹುಣ್ಣಿಮೆಯ ನವರಾತ್ರಿಯು ಪ್ರತಿವರ್ಷ ಪುಷ್ಯ ಮಾಸದ ಶುಕ್ಲ ಪಕ್ಷದ ಅಷ್ಟಮಿ ದಿನದಿಂದ ಪ್ರಾರಂಭ ವಾಗುವುದು. ಆ ದಿನದಂದು ಅಷ್ಟಭುಜಗಳಾದ ಅಷ್ಟ ಸಿದ್ಧಿಯನ್ನು ಕೊಡುವ ಸರ್ವಮಂಗಳಾದೇವಿಯನ್ನು ಪೂಜಿ ಸಬೇಕು.

ನವಮಿ ದಿನದಂದು ಒಂಬತ್ತು ಕೋಟಿ ಸಖಿಯ ರಿಂದೊಡಗೂಡಿದ ನವದುರ್ಗೆ ದೇವಿಯನ್ನು ಪೂಜಿಸ ಬೇಕು. ದಶಮಿಯಂದು ದಶ ದಿಕ್ಪಾಲಕ ಕಿರೀಟಗಳಿಂದ ಪೂಜಿತಳಾದ ಪಾದಪದ್ಮಗಳುಳ್ಳ, ರಾವಣನನ್ನು ವಧೆ ಮಾಡಲು ವಿದ್ಯುಕ್ತನಾದ ಶ್ರೀರಾಮನಿಗೆ ಸಂತೋಷ ಕೊಟ್ಟ ದೇವಿಯನ್ನು ಪೂಜಿಸಬೇಕು.ಏಕಾದಶಿ ದಿನದಂದು ಏಕಾ ದಶ ರುದ್ರರಿಂದ ಪೂಜಿತಳಾದ ಪರಮೇಶ್ವರಿಯನ್ನು ಪೂಜಿ ಸಬೇಕು. ದ್ವಾದಶಿಯಂದು ಆದಿತ್ಯ ಮಂಡಲ ಸ್ಥಳಾದ ಜಗ ನ್ಮಾತೆಯನ್ನು ಪೂಜಿಸಬೇಕು. ತ್ರಯೋದಶಿಯಂದು ಲೋಕದ ದುಃಖ ನಿವಾರಣೆ ಮಾಡುವ ಜಗದಂಬೆಯನ್ನು ಪೂಜಿಸಬೇಕು. ಚತುರ್ದಶಿ ದಿನದಂದು ಸಿದ್ಧಿ ಕೊಡುವ ಪ್ರಣವ ಸ್ವರೂಪಿಯನ್ನು ಪೂಜಿಸಬೇಕು ಹಾಗೂ 108 ತರಕಾರಿಗಳ ಪಲ್ಯವನ್ನು ಮಾಡಿ ಶಾಕಾಂಬರಿಗೆ ನೈವೇದ್ಯ ಮಾಡಬೇಕು, ಕೊನೆಯ ದಿನವೇ ಬನದ ಹುಣ್ಣಿಮೆ ಅಂದು ಪೂರ್ಣಾನಂದ ಪ್ರದಾಯಕಳಾದ ಮತ್ತು ಪೂರ್ಣಾನಂದ ಸ್ವರೂಪಳಾದ ಬನಶಂಕರಿ ದೇವಿಯನ್ನು ಪೂಜಿಸಬೇಕು. ಅಂದು ಬನಶಂಕರಿ ದೇವಿಯ ರಥೋತ್ಸವ ನಡೆಯುವುದು. ಅಂದು ಬಾದಾಮಿ ಬನಶಂಕರಿ ದೇವಾಲಯ ಮತ್ತು ಕರ್ನಾಟಕದ ಎಲ್ಲಾ ಬನಶಂಕರಿ ದೇವಾಲಯಗಳಲ್ಲಿ ಜಾತಿ ಮತ ಭೇದವಿಲ್ಲದೆ ಎಲ್ಲಾ ಭಕ್ತರು ಸೇರಿ ಬನಶಂಕರಿ ರಥ ಎಳೆ ಯುವರು. ನಿನಗೆ ಸರಿಸಾಟಿ ಎಂದೂ ಆಗಲಾರೆ, ನಾನು ನಿನ್ನ ಪಾದದಡಿಯಲ್ಲಿಯೇ ಇರ ತಕ್ಕವರು ಎಂದು ಘೋಷಣೆ ಕೂಗುತ್ತಾರೆ. ದೀಡ್ ನಮಸ್ಕಾರ ಹಾಕುತ್ತಾರೆ. ತಾಯಿಗೆ ನಿಂಬೆ ಹಣ್ಣಿನ ದೀಪ ಬೆಳಗುತ್ತಾರೆ.

**ಕಲಾಪೋಷಕಿ :**

ದೇವಿ ಕೇವಲ ಭಕ್ತರಿಗೆ ವರ ಕೊಡುವುದಷ್ಟೇ ಅಲ್ಲ, ನೂರಾರು ಜನರು ಕಲಾವಿದ ರನ್ನು ಸಲಹುತ್ತಾಳೆ. ನಾಟಕ ಕಲೆಯನ್ನು ರಕ್ಷಿಸುತ್ತಾಳೆ ಎಂಬ ನಂಬಿಕೆಯಿದೆ. ಏಕೆಂದರೆ ಬನಶಂಕರಿ ದೇವಿ ಜಾತ್ರೆ ವೇಳೆ ತಿಂಗಳುಗಳ ಕಾಲ ಹದಿನೈದಕ್ಕೂ ಹೆಚ್ಚು ನಾಟಕ ಕಂಪನಿಗಳು ಬೀಡು ಬಿಟ್ಟು, ನಾಟಕಗಳು ನಡೆಯುತ್ತವೆ. ಅಲ್ಲದೆ ಸಾವಿರಾರು ವ್ಯಾಪಾರಸ್ಥರು ದೇವಿ ನಂಬಿ ಬದುಕುತ್ತಾರೆ. ಉತ್ತರ ಕರ್ನಾಟಕದ ಅತಿ ದೊಡ್ಡ ಜಾತ್ರೆ ಬನಶಂಕರಿ ಜಾತ್ರೆಯಾಗಿದೆ. ದೀರ್ಘ ಒಂದು ತಿಂಗಳ ಕಾಲ ನಡೆಯುತ್ತದೆ.

**ರೊಟ್ಟಿ ರುಚಿ :**

ದೇವಸ್ಥಾನದ ಎದುರಿಗಿನ ಕಲ್ಯಾಣಿಯ ತಟದಲ್ಲಿರುವ ಅರವಟ್ಟಿಕೆ ಗಲ್ಲಿ ಕುಳಿತು ಭಕ್ತರ ಹಸಿವನ್ನು ನಿವಾರಿಸಲು ಮಮತೆಯನ್ನು ಹೊತ್ತು ಅನ್ನಪೂರ್ಣೆಯಂತಹ ತಾಯಂದಿರ ಪ್ರೀತಿಯ ಕೈ ಅಡುಗೆಯ ಜೋಳದ, ಸಜ್ಜೆಯ ರೊಟ್ಟಿ, ಕಾಯಿಪಲ್ಲೇ, ಕಾಳು ಪಲ್ಲೇ ಪಲ್ಲೆ ಅನ್ನಾ ಸಾಂಬಾರ್ ಕುಡಿಕೆ ಮೊಸರು ಶೇಂಗ ಪುಡಿ ತರುತ್ತಾರೆ. ಊಟ ಅನುಭವಿಸಿ ದವರಿಗೇ ಗೊತ್ತು ಅದರ ರುಚಿ.

**ತನು ಮನ ರಕ್ಷಕಿ :**


ಬನಶಂಕರಿ ದೇವಿಯ ಮೂರ್ತಿ ಐದು ಅಡಿ ಎತ್ತರವಿದೆ. ಕಪ್ಪು ಶಿಲೆಯಲ್ಲಿ ಸಿಂಹ ರೂಪಿಣಿಯಾಗಿ ತಾಯಿ ಮೂಡಿದ್ದಾಳೆ. ದೇವಿಗೆ ಅಷ್ಟ ಭುಜ ಅರ್ಥಾತ್ ಕೈಗಳಿಗೆ. ಬಲ ಗೈಯಲ್ಲಿ ಖಡ್ಗ, ಗಂಟೆ, ತ್ರಿಶೂಲ ಮತ್ತು ಲಿಪಿ ಹಾಗೂ ಎಡಗೈಯಲ್ಲಿ ಡಮರು, ಡಾಲು, ರುಂಡ ಮತ್ತು ಅಮೃತ ಪಾತ್ರಗಳಿವೆ. ಈ ದೇವಿ ತ್ರಿನೇತ್ರೆ, ಬನಶಂಕರಿಯನ್ನು ಮಹಾಕಾಳಿ, ಮಹಾಲಕ್ಷ್ಮೀ ಹಾಗೂ ಮಹಾಸರಸ್ವತಿ ಎಂತಲೂ ಕರೆಯುತ್ತಾರೆ. ಬನಶಂಕರಿ ಹಲವಾರು ರೂಪಗಳಲ್ಲಿ ಅವತರಿಸಿ ನಮ್ಮ ದೇಹದ ನಾನಾ ಭಾಗಗಳನ್ನು ರಕ್ಷಿಸುವಳು ಎಂಬ ನಂಬಿಕೆಯಿದೆ. ರಕ್ತದಂತಿಕೆ ದೇವಿಯ ನಮ್ಮ ಕಣ್ಣುಗಳನ್ನು ಕಾಪಾಡುವಳು, ನಂದದೇವಿಯು ಕಿವಿಗಳನ್ನು, ಪಾರ್ವತಿಯು ನಾಸಿಕವನ್ನು, ಮಹಾಕಾಳಿಯು ತುಟಿಗಳನ್ನೂ, ಮಹಾ ಲಕ್ಷ್ಮಿಯು ಮುಖವನ್ನು, ಮಹಾಸರಸ್ವತಿಯು ನಾಲಿಗೆಯನ್ನು, ಚಾಮುಂಡಿಯು ಹಲ್ಲು ಗಳನ್ನು, ಭದ್ರಕಾಳಿ ಕೈಗಳನ್ನು, ಕೌಮಾರಿದೇವಿಯು ಹೃದಯವನ್ನೂ, ವೈಷ್ಣವ ದೇವಿಯು ಉದರವನ್ನು, ಸುಂದರಿದೇವಿಯು ತೊಡೆಗಳನ್ನು, ಶಾಂಭವಿ ಪಾದಗಳನ್ನು ರಕ್ಷಿಸುವಳು ಎಂಬ ನಂಬಿಕೆಯಿದೆ.

ತಾಯಿಯ ಬಲಗೈಯು ಸುಜ್ಞಾನದ ಸಂಕೇತವಾದರೆ ಎಡಗೈಯು ಶೌರ್ಯದ ಸಂಕೇತವಾಗಿದೆ.




# ಗೋದೆ ಹಾಡಿರುವ ಗೀತೆ "ತಿರುಪ್ಪಾವೈ"

– ಡಾ|| ಎನ್.ಕೆ. ರಾಮಶೇಷನ್
8277146110



ಜಗತ್ತಿನಲ್ಲಿ ನಮ್ಮ ಭಾರತದಲ್ಲಿಯಷ್ಟೆ ಆರು ಋತುಗಳು ಎಂದು ಅವುಗಳ ವೈಯಕ್ತಿಕ ವೈಭವ - ಬೆಳಕು ಬೆಳಗುತ್ತದೆ. ವಸಂತ, ಗ್ರೀಷ್ಮ, ವರ್ಷ, ಶರದೃತು, ಹೇಮಂತ, ಶಿಶಿರ-ಹೀಗೆ (ಈಗೀಗ ನಾವು, ಮನುಷ್ಯರೆನಿಸಿಕೊಳ್ಳುವವರು ಪ್ರಕೃತಿಯನ್ನು ವಿಕೃತಿ ಮಾಡುತ್ತಿರುವುದರಿಂದ ಋತುಗಳ ನೈಜಸ್ವಭಾವ ವಿಶಿಷ್ಟಸ್ವರೂಪಗಳೂ ಕಾಲದಲ್ಲಿ ಇಲ್ಲವೆನಿಸುತ್ತಿರುವುದೇ ದುರದೃಷ್ಟ). ಈ ಆರು ಋತುಗಳಲ್ಲಿ ಹೇಮಂತ ಋತು ದಿನಗಳು ಮೂಡಿ ವಿಕಸಿಸುವುದೇ ಡಿಸೆಂಬರ್-ಜನವರಿ ಅವಧಿಯಲ್ಲಿ - ಸಾಮಾನ್ಯ ಪರಿಭಾಷೆಯಲ್ಲಿ ಮಾನಿ ಕಾಲ,ಚಳಿಯ ದಿನಗಳು,ಮೈಬಿಂದು, ಒಡೆಯುವ, ಜಿಡ್ಡನ್ನು ಕೊಬ್ಬರಿಯಂಥ, ಎಳ್ಳಿನಂಥ, ಬೆಲ್ಲದಂಥ ಪದಾರ್ಥ ಬಯಸುವ, ಬೆಚ್ಚಗೆ ಉಣ್ಣೆಯ ಶಾಲನ್ನು ಕಂಬಳಿಯನ್ನು ಶರೀರ ಬಯಸುವ ದಂಪತಿಗಳ ದಾಂಪತ್ಯದ ಅಪ್ಪುಗೆ ಮೃದುತ್ವ ಮಾದಕತೆಯನ್ನು ಉಂಟು ಮಾಡುವ ದಿನಗಳಿವು. ಇದನ್ನೇ ಮಾರ್ಗಶಿರ ಎನ್ನುವುದು. ತಮಿಳಿನಲ್ಲಿ ಮಾರ್ಗಳಿ ಎನ್ನುವುದು ರೂಢಿ (ಬಹು ವರ್ಷಗಳ ಹಿಂದೆ ಸುಪ್ರಸಿದ್ಧ ಹಾಡೊಂದಿತ್ತು,ಗೀತೆ ಆದರೆ,ಅರ್ಥಭರಿತ ಸಾಲುಗಳವು ಕಾಲಂಗಳಿಲ್ ಅವಲ್ ವಸಂತಂಮಲರ್‌ಗಳಿವೈ ಅವಳ್‌ಮಲ್ಲನೈ ಮಾಸಂಗಳಿರ್ ಅವಳ್ ಮಾರ್ಹಳಿ ಎಂಬುವ ಸುಶ್ರಾವ್ಯಗೀತ) ಮಾರ್ಗಶಿರವನ್ನು ಗೋಪಿಯು ಮಾಸವೆಂದೂ ಸನಾತನ ಸಂಸ್ಕೃತಿ ಸಾರುತ್ತದೆ.



ಯೋಗಕ್ಕೆ ಸರಿಯಾದ ಮಾಸವಿದು. "ನೋಂಪಿ" ಎಂದರೆ ವ್ರತವಾಚರಿಸುವ ತಿಂಗಳಿದು ಎಂದೂ ಅರ್ಥ. ಅರ್ಥವತ್ತಾದ ವ್ರತದ ಆಚರಣೆ-ಏಕೆಂದರೆ, ವ್ರತ ವಿರತ-ರತಿಯಿಂದ ಆ ಕಂತುಪಿತ ಶ್ರೀಹರಿಯನ್ನು ಧ್ಯಾನಿಸುವುದೋ ಅಥವಾ ಮಹಾಯೋಗಿ ಪರಮೇಶ್ವರರನ್ನು ಧ್ಯಾನಿಸುವುದೇ ಕೂಡ ಅದೀತು ಈ ಹರಿಸರ್ವೋತ್ತಮತ್ವ, ಶ್ರೀಹರಿಪಾರಮ್ಯ, ಶ್ರೀವೈಷ್ಣವ ಧರ್ಮ-ಮತ-ಸಂಸ್ಕೃತಿ ಅನುಭವಿಸುವ ಅನುಭಾವಿಸುವ ಮಾರ್ಗಶಿರ-ಹೇಮಂತ ಗೀತೆ-ತಮಿಳುನಾಡಿನ ಈ ಹರಿ ಕೃಷ್ಣನ ಅಂತರಂಗನೆ ಭಕ್ತೆ-ಪ್ರಪನ್ನಳಾದ ಆಂಡಾಳ್ ಗೋದಾದೇವಿ ಹಾಡಿರುವ ಈ ಕೃಷ್ಣನ ಪವಾಡ ವ್ರತಗೀತೆ ತಿರುಪ್ಪಾವೈ. ತಿರುಪ್ಪಾವೈ-ಎಂದರೆ ತಿರು ಶ್ರೇಷ್ಠವಾದ/ ಲಕ್ಷ್ಮಿಸಂಪನ್ನವೆನಿಸುವ,ಪ್ಪಾವೈ-ವ್ರತವನ್ನು ಕುರಿತಂತೆ ಯಾವುದೇ ಕಠಿಣ ವ್ರತದ ನಿಯಮದ ಕರ್ಮದ ಆಚರಣೆಯಿಂದ ಭಗವಂತನಲ್ಲಿ ಅತೀವ ಭಕ್ತಿ ಪ್ರಪತ್ತಿ / ಶರಣಾಗತಿ ಮಾಡುತ್ತ ಆತನನ್ನು "ಶ್ರೀ" ಸಹಿತ ಶ್ರೀಮನ್ನಾರಾಯಣನಾಗಿ ಪರಿಭಾವಿಸಿ ಹಾಡುವ ವಿಬಾಹ/ಪಾಶುರ/ಗೀತಗಳು "ತಿರುಪ್ಪಾವೈ" ಎಂಬುವ ಮುವತ್ತು ಪದ್ಯಮಾಲೆ ಪ್ರತಿನಿತ್ಯ ಒಂದೊಂದು ಗೀತ ಹಾಗೂ ಉಳಿದದ್ದನ್ನು ಮರುನೆನಪಿಸಿಕೊಳ್ಳುತ್ತ ತಿಂಗಳ ಕೊನೆವರೆಗೆ ಮುಂದುವರಿದ ಪದಗಳಿವು ಎಂದರೂ ತಪ್ಪಾಗದು. ಸಾಮಾನ್ಯವಾಗಿ ತಮಿಳುನಾಡು ಮಾತ್ರವಲ್ಲ ಕರ್ನಾಟಕ ದಾದ್ಯಂತವೇಕೆ, ಇಡೀ ಜಗತ್ತಿನಲ್ಲಿ ಎಲ್ಲೆಲ್ಲಿ ಭಕ್ತಿಯ ಸೊಬಗೂ ಇದೆಯೇ ಅಲ್ಲೆಲ್ಲ ನೆನಪಿಸಿಕೊಂಡು ಹಾಡುವ "ತಿರುಪ್ಪಾವೈ" ಪದ್ಯಗಳ ಕವಯಿತ್ರಿ ಆಂಡಾಳ್ ತಮಿಳುನಾಡಿನ ಶ್ರೀವಿಲ್ಲಿಪುತ್ತೂರು ಎಂಬ ಸ್ಥಳದಲ್ಲಿ ಅವತರಿಸಿದವಳು ಈಕೆಗೆ ಅನೇಕ ಹೆಸರುಗಳು, ಆಂಡಾಳ್ (ಭಗವಂತನ ಭಕ್ತಿ ಸಾಮ್ರಾಜ್ಯವನ್ನು ಆಳಿದವಳು) ಈ ವೈಷ್ಣವ ಹರಿದಾಸಿ ಹನ್ನೆರಡು ಆಳ್ವಾರರಲ್ಲಿ ಒಬ್ಬಳಾಗಿ ಪ್ರಸಿದ್ಧಳು.

ಆಳ್ವಾರ್ ತಿರುಮಹಳಾಯ್ (ಆಳ್ವಾರರ ಶ್ರೇಷ್ಠಪುತ್ರಿ) ತನ್ನನ್ನು ಸಲಹಿ,ಉತ್ತಮ ಮಾರ್ಗದಲ್ಲಿ ಬೆಳೆಸಿದ ಪೆರಿಯಾಳ್ವಾರರ ಮಗಳು, ಪೆರಿಯಾಳ್ವಾರ್ ಪೆಣ್‌ಪಿಳ್ಳೈ,ಶುರುಂಬಾರ್ ಕುಳಲ್ ಕೋದೈ (ತಮಿಳಿನ ಕೋದೆ-ಕನ್ನಡದ ಗೋದೆ)-ಅಂದರೆ,ಅಂದವಾದ,ನೀಳವಾದ,ಗುಂಗುರು ಕುರುಳನ್ನುಳ್ಳವಳು,ಪೂಂಗೋದೈ (ಹೂಕನ್ಯೆ) ಶೂಡಿಕುಡುತ್ತ ನಾಚ್ಚಿಯಾರ್ -ತಾನು ಮೊದಲು ಮುಡಿದ ಅನಂತರ ಆ ಹೂಗಳನ್ನು ತನ್ನೊಲವಿನ ವಟಪತ್ರಶಾಯಿಗೆ ನೀಡಿದವಳು,ತಿರುಪ್ಪಾವೈ ಪಾಡಿಯಶೆಲ್ವಿ (ಚೆಲುವೆ)ಯತಿರಾಜ ಸಹೋದರಿ (ಇದರಿಂದ ಆಚಾರ್ಯರಾಮಾನುಜರಿಗೆ “ಗೋದಾಗ್ರಜರ್” ಎಂದೇ ಹೆಸರು ಬಂದಿತು). ಯದುಗಿರಿ ನಾಯಕಿ (ಕರ್ನಾಟಕದ ಮೇಲುಕೋಟೆಯ ತಿರುನಾರಣನ ಒಲವಿನ ನಾಯಕಿ).ಒಟ್ಟಾರೆ ತಂದೆ ಪೆರಿಯಾಳ್ವಾರ್ ಎಂಬುವರ ಮಾನಸಪುತ್ರಿ,ಅಯೋನಿಜೆ ಆಂಡಾಳ್ ರಾಮಾಯಣದಲ್ಲಿ ಜನಕರಾಜನಿಗೆ ಯಾಗ ಭೂಮಿ ಉಳುವಾಗ ದೊರಕಿದ ಸೀತೆಯಂತೆ, ಪೆರಿಯಾಳ್ವಾರರಿಗೆ ಅವರ ಹೂತುಳಸೀ ತೋಟದಲ್ಲಿ ದೊರೆತ “ಅಯೋನಿಜೆ” ಎಂದೇ ಹೆಸರಾದ ಆಂಡಾಳ್, “ಗೋ”ಎಂದರೆ “ದಾ” ಭೂಮಿ ತಾಯಿ ಆಳ್ವಾರಿಗೆ ನೀಡಿದ “ಗೋದಾ” ಎನಿಸಿದಳು.

ಶ್ರೀ ವಿಲ್ಲಿಪುತ್ತೂರು ಈಗಲೂ ವಿಶೇಷತಃ ಈ ವೈಷ್ಣವರಿಗೆ ಯಾತ್ರಾಸ್ಥಳ ತುಲಸೀವನ, ಆಳ್ವಾರರು ತೋಡಿದ ಬಾವಿ,ಈಗಲ್ಲೂ ಶಾಂತ ಪರಿಸರ,ಶ್ರೀವಿಲ್ಲಿಪುತ್ತೂರು ರಥವೇ ಎತ್ತರದ್ದು-ದೇವಾಲಯದ ಗೋಪುರವೂ ಗಗನ ಚುಂಬಿಯೇ ಇಲ್ಲಿನ ಪ್ರಮುಖ ದೈವ “ವಟಪತ್ರ ಶಾಯಿ”ಎಂದರೆ ಆಲದೆಲೆಯ ಮೇಲೆ ಮಗುವಾಗಿ ಮಲಗಿರುವ ಶ್ರೀಕೃಷ್ಣ ಈ ಊರಿಗಿರುವ ಇನ್ನೊಂದು ಹೆಸರನ್ನು “ಪುದುವೈ” ಪೂರ್ವದಲ್ಲಿ ಪಾಂಡ್ಯ ದೇಶದ 18 ಕ್ಷೇತ್ರಗಳಲ್ಲಿ ಎಂಟನೆಯದೆಂದು ಶ್ರೀವಿಲ್ಲಿ ಪುತ್ತೂರು. ಇದಲ್ಲದೆ ಈ ಊರಿಗೆ “ವರಾಹ” ಕ್ಷೇತ್ರ “ಮಲ್ಲನಾಡು” ಎಂದೆಲ್ಲ ವಿಶೇಷಣಗಳಿದೇ ಇಲ್ಲಿ ಪೂರ್ವದಲ್ಲಿ “ಮಲ್ಲಿ” ಎಂಬುವ ರಾಣಿ ಆಳಿದಳು-ಆಕೆಗೆ ವಿಲ್ಲಿ ಕಂದನ್ ಎಂಬುವ ಇಬ್ಬರು ಮಕ್ಕಳು. ಮೊದಲನೆಯವ “ವಟೇಶ ಪುರಂ”ಎಂಬುವ ಪ್ರಾಚೀನ ನಗರವನ್ನು ಜೀರ್ಣೋದ್ಧಾರಗೈದ ಶ್ರೀವಿಲ್ಲಿಪುತ್ತೂರು ಎಂದು ನಾಮಕರಣ ಮಾಡಿದ. ಪುದುವೈ - ಹೊಸ ತಿದುವೇ ಸದಾ ಎಂಬುದು ಇನ್ನೊಂದು ಹೆಸರು. ಸ್ವಲ್ಪ ದೂರದಲ್ಲೆ ಶ್ರೀವೈಷ್ಣವರಿಗೆ ವಿಶೇಷತಃ “ಪೆರಿಯಕೋಯಿರ್” ಹಿರಿಯ ದೇವಾಲಯ-ಎಂದೇ ಪ್ರಸಿದ್ಧವಾಗಿರುವ “ಶ್ರೀರಂಗಂ” ರಾರಾಜಿಸುತ್ತಿದೆ. ಪೆರಿಯಾಳ್ವಾರರಿಗೆ ತುಲಸೀ ತೋಟದಲ್ಲಿ ದೊರೆತ ಹೆಣ್ಣು ಆದ್ದರಿಂದ ತುಲಸೀ ಕಾನನೋದ್ಭವೆ ಎಂದೂ ಕರೆಯಲ್ಪಟ್ಟಳು. ಈಕೆಯದ್ದು, ಸಂಪ್ರದಾಯ ರೀತ್ಯ 5000 ವರ್ಷ ಮಾಡಿದಷ್ಟು ಹಿಂದಿನ ಕಾಲಮಾನ ಹಾಗೆಯೇ ಅನೇಕ ಸಂಶೋಧಕರ ಅಭಿಮತ, ಕ್ರಿ.ಶ.7-9ರ ಅವಧಿಯಲ್ಲಿದ್ದ ಹೇಳಿಕೆ ಎಂಬುವ ಅಂಶ ಶ್ರೀವೈಷ್ಣವ ಸಂತರಾದ ಹನ್ನೆರಡು ಆಳ್ವಾರರೂ, ಇದೇ ಅವಧಿಯಲ್ಲಿ ಬಂದವರು ಅದರಲ್ಲಿ ಆಂಡಾಳ್ ದೇವಿ ಕೂಡ ಆಳ್ವಾರರ ಶ್ರೇಣಿಗೆ ಸೇರುವಂಥ ಉನ್ನತ ಭಕ್ತೆ.ಇದಾದ ಶತಮಾನಗಳ ನಂತರ ಬಂದ ಆಚಾರ್ಯರ ಪರಂಪರೆ,ತಮಿಳುನಾಡಿನ ವೀರನಾರಾಯಣಪುರವೆಂಬ ದಿವ್ಯಕ್ಷೇತ್ರದಲ್ಲಿದ್ದ ಮಹಾಯೋಗಿ ನಾಥಮುನಿಗಳಿಂದ ಆಚಾರ್ಯ ರಾಮಾನುಜರ ತನಕ (ಕ್ರಿ.ಶ. 1137-120 ವರ್ಷಗಳು ರಾಮಾನುಜರು ಇದ್ದುದು) ಇವರ ಮತ-ಧರ್ಮ- ವಿಶಿಷ್ಟಾದ್ವೈತ-ಶ್ರೀವೈಷ್ಣವ-ಎಂದೇ ಪ್ರಸಿದ್ಧವಿದ್ದು “ಶ್ರೀಮನ್ನಾರಾಯಣನೇ ನಮಕ್ಕೇ ಪರೈಶರುವಾನ್ ಎಂದರೆ, ಶ್ರೀಮನ್ನಾರಾಯಣನೊಬ್ಬನೇ ನಮಗೆ ವರವನ್ನು/ಮುಕ್ತಿ ಯನ್ನು ಕರುಣಿಸುವವನು”,ಹಾಗೂ ಶ್ರೀಹರಿಪಾರಮ್ಯ ಪ್ರತಿಪಾದಿಸು ವಂಥದು ಇದನ್ನು ‘‘ಮಾರ್ಹಳಿನೀರಾಟ್ಟಂ’’ಎಂದೂ ಕರೆಯುವುದಿದೆ.



“ನೀರಾಟ್ಟಂ”ಎಂದರೆ ಹೇಮಂತ ಋತುವಿನ ಮಾಗಿ- ಚಳಿವೆನ್ನಿಸಿದೆ. ಶುಭ್ರ ತನು-ಮನಗಳಿಂದೊಡ ಗೂಡಿಸ್ನಾನಗೈದು,ಭಗವಂತನ ಕಲ್ಯಾಣಗುಣ ಗಣ ಸಾಗರದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡು ಹಾಕುತ್ತ ಕೀರ್ತಿಸುತ್ತ ವಿಶೇಷನವುಭಾವ,ಪ್ರೇಮ ಅರ್ಪಣಾ ಭಾವದಿಂದೊಡಗೂಡಿ “ಶ್ರೀ ಕೃಷ್ಣನ ಕೈಂಕರ್ಯ” ನಡೆಸುವ ಮೂವತ್ತು ದಿನಗಳು ವ್ರತ. ಕೃಷ್ಣಾವತಾರ ಸಂದರ್ಭ


ದಲ್ಲಿ ಮಳೆಯು ಕಾಲ ಕಾಲಕ್ಕೆ ಬರುವಂತೆ ಪ್ರಾರ್ಥಿಸುವ ವ್ಯಾಜದಲ್ಲಿ (ನೆಪ,ಕಾರಣ),ಗೋಕುಲದ ಗೋಪಕನ್ಯೆಯರು, ಆಂಡಾಳ್,ನೀಳಾದೇವಿ (ನಪ್ಪಿನ್ನೈ ಎಲ್ಲರೂ ಒಟ್ಟು ಗೂಡಿ ಒಂದು ವ್ರತವನ್ನು ಆಚರಿಸಿದರೆಂದು ಕೊನೆಗೆ ಅವರೆಲ್ಲರು ಶ್ರೀಕೃಷ್ಣನನ್ನೇ ಪಡೆದರೆಂದೂ ಶ್ರೀಮದ್ಭಾಗವತದಲ್ಲಿ ಬಣ್ಣಿಸಲಾಗಿದೆ. (ಕಾತ್ಯಾಯನೀವ್ರತ-ಶ್ರೀಮದ್ಭಾವತ-10ನೆಯ ಸ್ಕಂಧ, ಅಧ್ಯಾಯ-22)ಹಾಗೂ ಆಂಡಾಳ್‌ದೇವಿಯನ್ನು ಭೂದೇವಿಯ ಅಂಶಜಳೆಂದು ಪರಿಭಾವಿಸಿರುವುದು.

ಆಂಡಾಳ್ ಹಾಡಿರುವ "ತಿರುಪ್ಪಾವೈ" ಭಕ್ತಿ ಗೀತ-ಮೂವತ್ತು ಪದ್ಯಗಳ ಕಾವ್ಯ ಅದೇ ರೀತಿಯಲ್ಲಿ ಆಕೆಯು ತನ್ನ ಪ್ರಾಣೇಶ್ವರನ ಪ್ರಾಪ್ತಿಗಾಗಿ ಹಾಡಿರುವುದು. ವಾರಣಮಾಯಿರಮ್ /ಯಾ/ ನಾಚ್ಚಿಯಾರ್ ತಿರುಮೊಳಿ ಅಥವಾ ನಾಯಕೀ ಗೀತೆ 143 ಪದ್ಯಗಳು ಇದು ಧನುರ್ಮಾಸದ ಆರಂಭದಿಂದ ಪ್ರತಿ ಮುಂಜಾನೆಯೇ ಮನೆ-ದೇವಳ-ಮಠಗಳಲ್ಲಿ ಪಠಿಸುವುದು ಪದ್ಧತಿ ಅನೂಚಾನವಾಗಿ ನಡೆದು ಬಂದಿದೆ, ಹಾಗೂ ವಿಶೇಷತಃ ಪ್ರತಿನಿತ್ಯ ಪೊಂಗಲ್ (ಹುಗ್ಗಿ) ನೈವೇದ್ಯ ಅರ್ಪಿಸುವ ಪದ್ಧತಿ.

ಇದನ್ನು "ಶ್ರೀವ್ರತ" (ತಿರು) ಎಂದು ಕರೆಯುವುದುಂಟು. ವ್ರತ ಅವಧಿ ಸಮಾರೋಪ ಆದ ನಂತರ (30ದಿನಗಳ ನಂತರ)ಆ ವೇಳೆಗೆ ಮಕರಸಂಕ್ರಾಂತಿ (ಸಾಮಾನ್ಯವಾಗಿ ಜನವರಿ 14 ರ ದಿನಾಂಕದ) ಮರುದಿನ, ಬೆಳಗ್ಗೆ ಶ್ರೀವೈಷ್ಣವರು "ಕನು" ಹಬ್ಬ ಆಚರಿಸುವ,ರೂಢಿ ಬೆಳೆದು ಬಂದಿದೆ.

ಶುಚಿಭೂತರಾಗಿ, ದೇವರಪೂಜೆ ನೆರವೇರಿಸಿ, ತಯಾರಿಸಿದ ಹುಗ್ಗಿ (ಹೆಸರು ಬೇಳೆ ಪೊಂಗಲ್) "ಕನ್‌ಪಿಡಿ" ಇಡುವುದು.

ತುಳಸೀ ಕಟ್ಟೆಯ ಸನಿಹ ಬಾಳೆ ಎಲೆ ಅಥವಾ ಅರಿಶಿನದೆಲೆಗಳ ಮೇಲೆ ನಾಲ್ಕು ಕಡೆ ವೀಳ್ಯದೆಲೆ, ಬಾಳೆಹಣ್ಣು ಪೂಜಾ ದ್ರವ್ಯಗಳಿರಿಸಿ,ಕೆಂಪು/ಯಾ/ಹಳದಿ ಬಣ್ಣದ ಅನ್ನದ ಮತ್ತು ಸಂಕ್ರಾಂತಿಯಂದು ಮಾಡಿದ ಸಕ್ಕರೆ ಪೊಂಗಲ್ (ಸಿಹಿಹುಗ್ಗಿ) ನಿವೇದಿಸಿ,ಮುಷ್ಟಿ ಗಾತ್ರದ ಉಂಡೆಗಳನ್ನು ಕನ್ಯೆಯರು, ಮಹಿಳೆ



ಯರು "ಕನ್‌ಪಿಡಿ ಕಾಪ್ಟ್ (ರಕ್ಷೆ)ಪಿಡಿ" ಎನ್ನುತ್ತ ಇಟ್ಟು "ಕನು ವಚ್ಚೇನ್, ಕಾಪ್ಪಿಡಿ ವಚ್ಚೇನ್ (ಕನು ಇರಿಸುತ್ತಿದ್ದೇನೆ ರಕ್ಷ ಇರಿಸುತ್ತಿದ್ದೇನೆ)

ಪಿರಿಂದಹಾಮ್ ಪುಕ್ಕಿನ್ರೇಹ ಕಾಬ್ರ್-ಪಿರಿಂದ್ ವಾಳ್ಗೆ, (ಹಿರಿದಾಗಿ ಬಾಳಲಿ)(ಹುಟ್ಟಿದಮನೆ/ಯಾ/ತವರು,ಹಾಗೂ ಗಂಡನ ಮನೆ ಹೊಕ್ಕಾಮನೆಗಳು) ಎಂದು ಹಾರೈಸುತ್ತಾರೆ. ಹಾಗೆಯೇ ಈ ಕನು ಹಬ್ಬದ ಶ್ರದ್ಧಾಯುತ ಆಚರಣೆಯಿಂದ, "ಕಾಕಾಯಕ್ಕು ಕಲ್ಯಾಣಂ, ಕುರುವಿಕ್ಕು ಸೀಮಂತ" ಎಂದು ಹೇಳಿ ಸಂತೋಷಿಸುತ್ತಾರೆ.

ಅಂದರೆ ನಾನು ಇಡುತ್ತಿರುವ ಈ ಕನು (ಗ್ರಾಸ್) ಗೋಕರುಗಳಿಗಾಗಿ ತಿರುಪ್ಪಾವೈ ಹಾಗೂ ಈ ಕನು ಆಚರಣೆಯಿಂದ ಕನ್ಯೆಯರಿಗೆ ಆಗಬಹುದಾದ ದೃಷ್ಟಿ ದೋಷ ಪರಿಹಾರಕ್ಕೆ ರಕ್ಷೆ ಇಡುತ್ತಿದ್ದೇವೆ. ಈ ವ್ರತದಿಂದ ಕಾಗೆಗಳಷ್ಟು ಕೂಡ ಮದುವೆಯಾಗುತ್ತದೆ. ಗುಬ್ಬಚ್ಚಿಯಂತೆ ನೀಲವಾಗಿ ದೇಹ ದಾರ್ಢ್ಯ ಇಲ್ಲದವರಿಗೂ ಮದುವೆಯಾಗಿ ಸೀಮಂತ ಅಂದರೆ ಸಂತಾನವುಂಟಾಗುವ ಸಂತಸದ ಕ್ಷಣ ಒದಗುತ್ತವೆ.

ಇದು ತಿರುಪ್ಪಾವೈ, ಕನೂ ಹಬ್ಬದ ಜಾನಪದೀಯ ಆಚರಣೆ, ದೈವೀಕವಾಗಿ ಹಾರೈಕೆ ಪಡೆಯುವ ಕ್ಷಣಗಳು,

## ಜನವರಿ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ಫೆಬ್ರವರಿ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | | |

## ಮಾರ್ಚ್ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| 31 | | | | | | |



### ಜನವರಿ 2024

01 ಆಂಗ್ಲ ಹೊಸ ವರ್ಷಾರಂಭ

07 -13 ರ ವರೆಗೆ ಶ್ರೀ ಆಂಡಾಳ್ ನೀರಾಟೋತ್ಸವ

14 ಭೋಗಿ, ಭೋಗಿತೇರು

15 ಮಕರ ಸಂಕ್ರಾಂತಿ

16 ಕನುಮ, ಶ್ರೀ ಗೋದಾದೇವಿ ಪರಿಣಯೋತ್ಸವ

25 ಶ್ರೀ ರಾಮಕೃಷ್ಣತೀರ್ಥ ಮುಕ್ಕೋಟಿ

26 ಪ್ರಣಯ ಕಲಹ ಮಹೋತ್ಸವ (ತಿರುಮಲೆ)

26 ಗಣತಂತ್ರದಿನೋತ್ಸವ

30 ಶ್ರೀ ತ್ಯಾಗರಾಜರ ಆರಾಧನೆ

### ಫೆಬ್ರವರಿ 2024

09 ಶ್ರೀ ಪುರಂದರದಾಸರ ಆರಾಧನೆ

10-18 ದೇವುನಿ ಕಡಪ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

14 ವಸಂತ ಪಂಚಮಿ

16 ರಥಸಪ್ತಮಿ, ಭೀಷ್ಮಾಷ್ಟಮಿ

20 ಭೀಷ್ಮ ಏಕಾದಶಿ

24 ಕುಮಾರಧಾರತೀರ್ಥ ಮುಕ್ಕೋಟಿ

29-08 ಶ್ರೀನಿವಾಸಮಂಗಾಪುರಂ, ಶ್ರೀಕಲ್ಯಾಣವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

### ಮಾರ್ಚ್ 2024

1-10 ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

08 ಮಹಾಶಿವರಾತ್ರಿ


17-25 ತರಿಗೊಂಡ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯವರ ಬ್ರಹ್ಮೋತ್ಸವಗಳು

20-24 ತಿರುಮಲೆ, ಸ್ವಾಮಿಯವರ ತೆಪ್ಪೋತ್ಸವಗಳು

24 ಹೋಳಿಹಬ್ಬ

25 ಶ್ರೀ ಲಕ್ಷ್ಮಿ ಜಯಂತಿ, ತುಂಬುರು ತೀರ್ಥ ಮುಕ್ಕೋಟಿ

## ತಿರುಮಲೆ ತಿರುಪತಿ ದೇವಸ್ಥಾನಗಳು



### ಏಪ್ರಿಲ್ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

### ಮೇ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

### ಜೂನ್ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | | | | | | |

### ಏಪ್ರಿಲ್ 2024

05-13 ತಿರುಪತಿ ಶ್ರೀಕೋದಂಡರಾಮಸ್ವಾಮಿಯವರ ಬ್ರಹ್ಮೋತ್ಸವಗಳು
06 ಅನ್ನಮಾಚಾರ್ಯ ವರ್ಧಂತಿ
09 ಶ್ರೀ ಕ್ರೋಧಿನಾಮ ಸಂವತ್ಸರ ಯುಗಾದಿ
11 ಮತ್ಸ್ಯ ಜಯಂತಿ
12-20 ವಾಯಲ್ಪಾಡು ,ಶ್ರೀ ಪಟ್ಟಾಭಿರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
14 ತಮಿಳು ಹೊಸವರ್ಷಾರಂಭ, ಡಾ॥ ಅಂಬೇಡ್ಕರ್ ಜಯಂತಿ
17-25 ಒಂಟಿಮಿಟ್ಟ, ಶ್ರೀಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
17 ಶ್ರೀರಾಮನವಮಿ
21-23 ತಿರುಮಲೆ ಸ್ವಾಮಿಯವರ ವಸಂತೋತ್ಸವಗಳು
23- ಮೇ-1 ನಾಗುಲಾಪುರಂ, ಶ್ರೀವೇದನಾರಾಯಣಸ್ವಾಮಿಯವರ ಬ್ರಹ್ಮೋತ್ಸವಗಳು

### ಮೇ 2024

01 ಕಾರ್ಮಿಕರ ದಿನಾಚರಣೆ
10 ಅಕ್ಷಯ ತೃತೀಯ, ಶ್ರೀಪರಶುರಾಮ ಜಯಂತಿ
12 ಶ್ರೀರಾಮಾನುಜ ಜಯಂತಿ, ಶ್ರೀ ಶಂಕರಾಚಾರ್ಯ ಜಯಂತಿ
16-24 ತಿರುಪತಿ ಶ್ರೀಗೋವಿಂದರಾಜಸ್ವಾಮಿಯವರ ಬ್ರಹ್ಮೋತ್ಸವಗಳು
17-19 ತಿರುಮಲೆ, ಶ್ರೀಪದ್ಮಾವತಿ ಶ್ರೀನಿವಾಸರ ಪರಿಣಯೋತ್ಸವ
14 ತಿರುಪತಿ ಗಂಗಜಾತ್ರೆ
20-23 ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ವಸಂತೋತ್ಸವಗಳು
21-29 ಹೃಷಿಕೇಶ/ ನಾರಾಯಣವನಂ, ಶ್ರೀಕಲ್ಯಾಣ ವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು
22 ಶ್ರೀ ನೃಸಿಂಹ ಜಯಂತಿ, ಮಾತೃಶ್ರೀ ತರಿಗೊಂಡ ವೆಂಗಮಾಂಬ ಜಯಂತಿ
23 ಶ್ರೀಕೂರ್ಮ ಜಯಂತಿ, ಶ್ರೀ ಅನ್ನಮಾಚಾರ್ಯ ಜಯಂತಿ
29-ಜೂನ್ 06 ಕಾರ್ವೇಟಿನಗರಂ, ಶ್ರೀವೇಣು ಗೋಪಾಲ ಸ್ವಾಮಿಯವರ ಬ್ರಹ್ಮೋತ್ಸವಗಳು

### ಜೂನ್ 2024

01 ಶ್ರೀಹನುಮ ಜಯಂತಿ
17-25 ಅಪ್ಪಲಾಯಗುಂಟ, ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
17-21 ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳು
19-21 ತಿರುಮಲೆ ಸ್ವಾಮಿಯವರ ಜ್ಯೇಷ್ಠಾಭಿಷೇಕ
27- 29 ತಿರುಚಾನೂರು ಶ್ರೀ ಸುಂದರರಾಜ ಸ್ವಾಮಿ ಯವರ ಅವತಾರೋತ್ಸವಗಳು

## ಜುಲೈ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ಆಗಸ್ಟ್ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

## ಸೆಪ್ಟೆಂಬರ್ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |



### ಜುಲೈ 2024

10-12 ಶ್ರೀನಿವಾಸಮಂಗಾಪುರಂ, ಶ್ರೀಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಸಾಕ್ಷಾತ್ಕಾರ ವೈಭವೋತ್ಸವಗಳು
16-18 ತಿರುಪತಿ ಶ್ರೀಗೋವಿಂದರಾಜ ಸ್ವಾಮಿಯವರ ಜ್ಯೇಷ್ಠಾಭಿಷೇಕ
16 ತಿರುಮಲೆ ಸ್ವಾಮಿಯವರ ಆಣಿವರ ಆಸ್ಥಾನ
17-20 ತಿರುಪತಿ ಶ್ರೀಕಪಿಲೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು
21 ಗುರುಪೂರ್ಣಿಮೆ, ವ್ಯಾಸಪೂರ್ಣಿಮೆ
22 ಶ್ರೀ ವಿಖನಸಾಚಾರ್ಯರ ಶಾತ್ತುಮೋರೆ
30 ಆಡಿಕೃತ್ತಿಕ

### ಆಗಸ್ಟ್ 2024

04 ಶ್ರೀಚಕ್ರತ್ತಾಳ್ವಾರ್ ವರ್ಷ ತಿರುನಕ್ಷತ್ರ
08 ನಾಗಚತುರ್ಥಿ
09 ಗರುಡ ಪಂಚಮಿ
13 ಮಾತೃಶ್ರೀ ತರಿಗೊಂಡ ವೆಂಗಮಾಂಬ ವರ್ಧಂತಿ
16 ಶ್ರೀವರ ಮಹಾಲಕ್ಷ್ಮೀ ವ್ರತ
14-17 ತಿರುಮಲೆ ಸ್ವಾಮಿಯವರ ಪವಿತ್ರೋತ್ಸವಗಳು
15 ಸ್ವಾತಂತ್ರ್ಯ ದಿನಾಚರಣೆ
19 ಶ್ರೀ ವಿಖನಸ ಮಹಾಮುನಿ ಜಯಂತಿ, ಶ್ರೀ ಹಯಗ್ರೀವ ಜಯಂತಿ
20 ಗಾಯಿತ್ರಿ ಜಪ
26 ಶ್ರೀಕೃಷ್ಣಾಷ್ಟಮಿ
27 ಗೋಕುಲಾಷ್ಟಮಿ

### ಸೆಪ್ಟೆಂಬರ್ 2024

05 ಶ್ರೀ ಬಲರಾಮಜಯಂತಿ, ಶ್ರೀ ವರಾಹ ಜಯಂತಿ
07 ಗಣೇಶ ಚತುರ್ಥಿ
08 ಋಷಿ ಪಂಚಮಿ
15 ಶ್ರೀ ವಾಮನ ಜಯಂತಿ
15-18 ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪವಿತ್ರೋತ್ಸವಗಳು
17 ಅನಂತ ಪದ್ಮನಾಭವ್ರತ



## ಅಕ್ಟೋಬರ್ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

## ನವೆಂಬರ್ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## ಡಿಸೆಂಬರ್ 2024

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

### ಅಕ್ಟೋಬರ್ 2024

02 ಗಾಂಧಿ ಜಯಂತಿ, ಮಹಾಲಯ ಅಮಾವಾಸ್ಯೆ.

4-12 ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ನವರಾತ್ರಿ ಉತ್ಸವ

4-12 ತಿರುಮಲೆ, ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

08 ತಿರುಮಲೆ ಸ್ವಾಮಿಯವರ ಗರುಡಸೇವೆ

09 ಸರಸ್ವತಿ ಪೂಜೆ

11 ದುರ್ಗಾಷ್ಟಮಿ

12 ವಿಜಯದಶಮಿ

31 ನರಕಚತುರ್ದಶಿ

### ನವೆಂಬರ್ 2024

01 ದೀಪಾವಳಿ ಅಮಾವಾಸ್ಯೆ

02 ಶ್ರೀ ಕೇದಾರ ಗೌರಿ ವ್ರತ

05 ನಾಗರ ಪಂಚಮಿ

09 ತಿರುಮಲೆ ಸ್ವಾಮಿಯವರ ಪುಷ್ಪಯಾಗ

13 ಕೈಶಿಕ ದ್ವಾದಶಿ

14 ಮಕ್ಕಳ ದಿನಾಚರಣೆ

18 ಕನಕದಾಸ ಜಯಂತಿ

28-ಡಿಸೆಂಬರ್ 06 ತಿರುಚಾನೂರು ಶ್ರೀಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

28 ಶ್ರೀ ಧನ್ವಂತರಿ ಜಯಂತಿ

### ಡಿಸೆಂಬರ್ 2024

02 ತಿರುಚಾನೂರು, ಶ್ರೀಪದ್ಮಾವತಿ ಅಮ್ಮನವರ ಗಜವಾಹನ ಸೇವೆ

06 ಪಂಚಮೀ ತೀರ್ಥ

07 ತಿರುಚಾನೂರು, ಶ್ರೀಪದ್ಮಾವತಿ ಅಮ್ಮನವರ ಪುಷ್ಪಯಾಗ

11 ಗೀತಾ ಜಯಂತಿ

12 ಶ್ರೀ ಚಕ್ರತೀರ್ಥ ಮುಕ್ಕೋಟಿ

13 ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯದಲ್ಲಿ ಕೃತಿಕ ದೀಪೋತ್ಸವ.

16 ಧನುರ್ಮಾಸ ಪ್ರಾರಂಭ

# ಹರಿದಾಸ ಕುಲ ತಿಲಕ ಶ್ರೀ ಗುರುಗೋವಿಂದ ವಿಠ್ಠಲ ದಾಸರು

- ಡಾ|| ಎನ್.ಜಿ. ವಿಜಯಲಕ್ಷ್ಮೀ

90357 85102

ಸಕಲಶಾಸ್ತ್ರಾರ್ಥ ಸಾರ ಜ್ಞಾನಚಿತ್ರ ಲೇಖನ ತತ್ಪರಾನ್ ।
ಗುರುಗೋವಿಂದ ದಾಸಾರ್ಯಾನ್ ನಿತ್ಯ
ನೌಮಿ ಸತಾಂ ಮುದೇ॥

ಮೈಸೂರಿನವರಾದ ಕೋಡುಬಳೆ ವಂಶದ ರಂಗನಾಥರಾವ್ ಉದ್ಯೋಗ ನಿಮಿತ್ತ ಚಿಕ್ಕಮಗಳೂರಿನಲ್ಲಿ ನೆಲೆಸಿದ್ದರು.ಅವರ ಧರ್ಮಪತ್ನಿ ಲಕ್ಷ್ಮೀಬಾಯಿ.ಬಹುಕಾಲ ಮಕ್ಕಳಿರಲಿಲ್ಲ. ಮಕ್ಕಳಿಗಾಗಿ ಹಂಬಲಿಸುತ್ತಿದ್ದರು.ದೈವ ಪ್ರೇರಣೆಯಿಂದ ಒಮ್ಮೆ ಇಭರಾಮಪುರದ ಅಪ್ಪಾ ಅವರು ಇವರ ಮನೆಗೆ ಆಗಮಿಸಿದರು. ಈ ದಂಪತಿಗಳು ಮಾಡಿದ ಆದ ರಾತಿಥ್ಯದಿಂದ ಸುಪ್ರೀತರಾದ ಅಪ್ಪಾ ಅವರು ತುಂಬು ಹೃದಯದಿಂದ 'ವಂಶೋದ್ಧಾರಕನ ಜನನವಾಗಲಿ' ಎಂದು ಅವರಿಗೆ ಆಶೀರ್ವಾದ ಮಾಡಿದರು. ಆಶೀರ್ವಾದದ ಫಲ ಅದೇ ವರ್ಷ ಲಕ್ಷ್ಮಿಬಾಯಿಯವರಿಗೆ ಒಂದು ಗಂಡು ಮಗುವಿನ ಜನನವಾಯಿತು.ತಮ್ಮ ವಂಶದ ಮೂಲ ಪುರುಷರ ಹೆಸರು ಗೋವಿಂದ. ಹಾಗಾಗಿ 'ಗೋವಿಂದ' ಎಂಬ ಹೆಸರನ್ನು ತಮ್ಮ ಮಗುವಿಗೆ ಇಟ್ಟರು. ಮಗುವಿನ ಲಾಲನೆ-ಪಾಲನೆ ಹಾಗೂ ಪತಿ ಸೇವೆಯಲ್ಲಿ ಸಾಧ್ವಿ ಲಕ್ಷ್ಮಿಬಾಯಿ ಸ್ವರ್ಗ ಸುಖವನ್ನು ಕಾಣುತ್ತಿದ್ದರು.

ಆದರೆ ವಿಧಿ, ಗೋವಿಂದ ನಾಲ್ಕು ವರ್ಷದ ಬಾಲಕ. ತಂದೆ ರಂಗನಾಥ್ ಅವರು ಮಾರಿಕಾ ಬೇನೆಗೆ ತುತ್ತಾಗಿ ಹೆಂಡತಿ ಹಾಗೂ ಮಗನನ್ನು ಅನಾಥರನ್ನಾಗಿ ಮಾಡಿದರು. ಬೇರೆ ದಾರಿ ಕಾಣದೆ ಲಕ್ಷ್ಮೀದೇವಿಯವರು ತಮ್ಮ ಮಗನೊಂದಿಗೆ ತಮ್ಮ ದಾಯಾದಿಗಳ ಮನೆ ಸೇರಿದರು. ಅಲ್ಲಿ ಸರಿ ಹೋಗದಿರಲು ತಮ್ಮ ಬಾವ ರಾಘವೇಂದ್ರರಾಯರ ಮನೆ ಸೇರಿದರು. ರಾಘವೇಂದ್ರರಾಯರು ತನ್ನ ತಮ್ಮನ ಮಗ ಗೋವಿಂದನನ್ನು ತನ್ನ ಮಗನಂತೆಯೇ ನೋಡಿಕೊಂಡರು. ಸಮಾನ ವಯಸ್ಕನಾದ ತಮ್ಮ ಸ್ವಂತ ಮಗನೊಂದಿಗೆ ಉಪನಯನ ಮಾಡಿ ಶಾಲೆಗೆ ಕಳುಹಿಸಿದರು. ಆದರೆ ಗೋವಿಂದನ ದೊಡ್ಡಮ್ಮನಿಗೆ ಇದೊಂದೂ ಇಷ್ಟವಾಗುತ್ತಿರಲಿಲ್ಲ. ದುಡಿಯಲು ಇಬ್ಬರು ಆಳು ಸಿಕ್ಕಿದರೆಂಬುದೇ ಆಕೆಗೆ ಸಮಾಧಾನ. ಗೋವಿಂದನಿಂದ ಅವನ ವಯಸ್ಸಿಗೆ ಮೀರಿದ ಕೆಲಸಗಳನ್ನು ಮಾಡಿಸುತ್ತಿದ್ದರು.ಸರಿಯಾಗಿ ಅನ್ನ ಬಟ್ಟೆಗಳನ್ನು ಕೊಡುತ್ತಿರಲಿಲ್ಲ. ತನ್ನ ಮಗ ಉಪಯೋಗಿಸಿದ್ದ ಬಟ್ಟೆ ಹಾಗೂ ಪುಸ್ತಕ ಇತ್ಯಾದಿಗಳು ಗೋವಿಂದನಿಗೆ ಸಿಗುತ್ತಿದ್ದವು. ಇನ್ನು ಊಟ ಸಹ ಮಿಕ್ಕಿದ್ದು ಹಳಸಿದ್ದು ಅವನ ಪಾಲಾಗುತ್ತಿದ್ದವು. ಇದರಿಂದ ಬಹುನೊಂದ ಲಕ್ಷ್ಮೀದೇವಿ ಕೊನೆಗೊಂದು ದಿನ ಹೇಳದೇ ಕೇಳದೇ ಮನೆ ಬಿಟ್ಟು ಹೋದಳು.

ಅದೇ ಊರಿನಲ್ಲಿದ್ದ ನವರತ್ನ ರಾಮರಾಯರು ಮತ್ತು ಅವರ ಧರ್ಮಪತ್ನಿ ಈ ತಾಯಿ ಮಗನಿಗೆ ಆಶ್ರಯ ನೀಡಿದರು. ತಮ್ಮ ಮಕ್ಕಳೊಂದಿಗೆ ಗೋವಿಂದನನ್ನೂ ಚೆನ್ನಾಗಿ ಓದಿಸಿದರು. ಅವರ ಮನೆಯಲ್ಲಿ ಸದಾ ಧಾರ್ಮಿಕ ವಾತಾವರಣ ಇರುತ್ತಿತ್ತು. ಪುರಾಣ, ಹರಿಕಥೆ, ವಿದ್ವತ್ ಗೋಷ್ಠಿ ಇತ್ಯಾದಿಗಳು ನಡೆಯುತ್ತಿದ್ದವು. ಇವೆಲ್ಲದರಲ್ಲಿಯೂ ಗೋವಿಂದ ಸಕ್ರಿಯವಾಗಿ, ತುಂಬು ಉತ್ಸಾಹದಿಂದ ಭಾಗವಹಿಸುತ್ತಿದ್ದ. ಬಿಡುವಿದ್ದಾಗಲೆಲ್ಲಾ ಮಂತ್ರ ಸ್ತೋತ್ರಗಳನ್ನು ಕಲಿತು ಪುರಾಣ ಪುಣ್ಯ ಕಥೆಗಳನ್ನು ಓದುತ್ತಿದ್ದ. ಶಾಲಾ ಕಾಲೇಜುಗಳಲ್ಲಿ ಓದುವುದರಲ್ಲಿಯೂ ಚಾಣಾಕ್ಷನಾಗಿದ್ದ.

ಡಿಪ್ಲಮೋ ಇಂಜಿನಿಯರಿಂಗ್ ಮುಗಿಸಿದ ಗೋವಿಂದ ರಾಯರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಸಬ್ ಓವರ್ಸಿಯರ್ ನೌಕರಿ ದೊರೆಯಿತು. ಅವರು ತಮ್ಮ 33 ವರ್ಷಗಳ ಸೇವಾವಧಿಯಲ್ಲಿ ಸುಮಾರು 44 ಊರುಗಳನ್ನು ಸುತ್ತಿದರು. ಯಾವ ಊರಿಗೆ ಹೋದರೂ ತಮ್ಮ ತಾಯಿಯನ್ನು ಜೊತೆಗೇ ಕರೆದು ಕೊಂಡು ಹೋಗುತ್ತಿದ್ದರು. ಸೂಕ್ತ ವಯಸ್ಸಿನಲ್ಲಿ ತಾಯಿಯವರು ಮಗನಿಗೆ ಕೃಷ್ಣವೇಣಿ ಎಂಬ ಕನ್ಯೆಯೊಡನೆ ಮದುವೆ ಮಾಡಿದರು.ಸಂಸಾರ ಸಾಗಿತು. ವರ್ಷಗಳು ಉರುಳಿದಂತೆ ನಾಲ್ಕು ಹೆಣ್ಣು ಹಾಗೂ ನಾಲ್ಕು ಗಂಡು ಮಕ್ಕಳ ತಂದೆಯಾದರು. ತುಂಬಿದ ಸಂಸಾರ. ನಂದಗೋಕುಲದಂತಹ ಮನೆ.

ವರ್ಗವಾಗಿ ಗೋವಿಂದರಾಯರು ಬೇರೆ ಬೇರೆ ಊರುಗಳಿಗೆ ಹೋದಾಗ ಅಲ್ಲಿಯ ಸಜ್ಜನರನ್ನೆಲ್ಲಾ ಸೇರಿಸಿಕೊಂಡು ಮಧ್ವಜಯಂತಿ,ರಾಘವೇಂದ್ರ ಸ್ವಾಮಿಗಳ ಆರಾಧನೆ,ಪುರಂದರ ದಾಸರ ಆರಾಧನೆ ಇತ್ಯಾದಿಗಳನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಚಿತ್ರದುರ್ಗ ಜಿಲ್ಲೆಯ ಮೋಳ ಕಾಲ್ಮೂರಿನಲ್ಲಿ ಇದ್ದಾಗ ಚಿಕ್ಕೇರಹಳ್ಳಿ ಮಧ್ವೇಶದಾಸರ ಪರಿಚಯವಾಯಿತು. ಅವರಲ್ಲಿ ಶಾಂತಿ ಪಾಠ ಹಾಕಿ ಮಧ್ವಾ ಚಾರ್ಯರ 37 ಗ್ರಂಥಗಳ ಅಧ್ಯಯನ ಮಾಡಿದರು. ಹರಿಕಥಾಮೃತಸಾರದ 32 ಸಂಧಿಗಳನ್ನು ಕಂಠಪಾಠ ಮಾಡಿದರು.

ಹಾಸನಕ್ಕೆ ವರ್ಗವಾಗಿ ಹೋದಾಗ ವಿದ್ಯಾ ಇಲಾಖೆ ಯಲ್ಲಿ ನೌಕರಿ ಮಾಡುತ್ತಿದ್ದ ಶ್ರೀಯುತ ರಾಮಚಂದ್ರರಾಯರ ಸ್ನೇಹವಾಯಿತು. ಅವರು ತಂದೆ "ವೆಂಕಟೇಶ ವಿಟ್ಠಲ" ಅಂಕಿತದಿಂದ ಅನೇಕ ಕೃತಿಗಳನ್ನು ರಚಿಸಿ ಹರಿದಾಸರಾಗಿದ್ದರು.



ಅವರ ಸಂಗ ಸಹವಾಸದಿಂದ ಗೋವಿಂದರಾಯರಿಗೂ ಸಹ ತಾವು ಹರಿದಾಸರಾಗಬೇಕೆಂಬ ಇಚ್ಛೆ ಪ್ರಬಲವಾಯಿತು. ದೇವರಾಯನದುರ್ಗದ 'ತಂದೆಮುದ್ದು ಮೋಹನ ವಿಟ್ಠಲ' ದಾಸರಿಂದ ಅಂಕಿತ ಸ್ವೀಕರಿಸಿದರು. ಅವರ ಕೊನೆಯ ಶಿಷ್ಯ ರಾಗಿ ಗುರುಗೋವಿಂದವಿಠಲ ದಾಸರೆನಿಸಿದರು. ತಮ್ಮ ತಾಯಿ, ಪತ್ನಿ, ಮಕ್ಕಳು ಎಲ್ಲರನ್ನೂ ಹರಿದಾಸರನ್ನಾಗಿ ಮಾಡಿದರು. ಕೆಲವರಿಗೆ ತಮ್ಮ ಗುರುಗಳಿಂದ ಕೆಲವರಿಗೆ ಚಿತ್ರದುರ್ಗದ ಉರಗಾದ್ರಿವಾಸ ವಿಠಲ ದಾಸರಿಂದ ಅಂಕಿತ ಕೊಡಿಸಿದರು ಮತ್ತೇ ಕೆಲವರಿಗೇ ತಾವೇ ಅಂಕಿತ ಕೊಟ್ಟರು.

ಹರಿದಾಸರ ವೇಷದಲ್ಲಿ ಕಾಲಿಗೆ ಗೆಜ್ಜೆ ಕಟ್ಟಿ, ತಂಬೂರಿ ಮೀಟುತ್ತಾ, ಚಿಟಿಕೆ ಬಾರಿಸುತ್ತಾ, ಜೋಳಿಗೆ ಹೆಗಲಿಗೇರಿಸಿ ನೀಲ ವರ್ಣನ ಗಾನ ಮಾಡುತ್ತಾ ಚಿಪ್ಪಗಿರಿ,ಚೀಕಲಪರವಿ, ಮಾನವಿ, ಮಂತ್ರಾಲಯ ಮುಂತಾದ ಎಲ್ಲಾ ಕ್ಷೇತ್ರಗಳಿಗೂ ವಿಶೇಷವಾಗಿ ಆಯಾ ದಾಸರ.... ಆಯಾ ಯತಿಗಳ ಆರಾ ಧನೆ ಸಮಯಕ್ಕೆ ಹೋಗಿ ಬರುತ್ತಿದ್ದರು. ತಿರುಪತಿ ಬ್ರಹ್ಮೋತ್ಸವ ಉಡುಪಿ ಪರ್ಯಾಯಗಳಿಗೆ ಪ್ರತಿ ವರ್ಷ ತಪ್ಪದೇ ಹೋಗು ತ್ತಿದ್ದರು. ಎರಡೆರಡು ಬಾರಿ ಪತ್ನೀ ಸಮೇತ ಬದರೀ ಯಾತ್ರೆ ಯನ್ನೂ ಮಾಡಿರುವರು.

ಶ್ರೀವಾದಿರಾಜ ಗುರುಸಾರ್ವಭೌಮರ 'ತೀರ್ಥ ಪ್ರಬಂಧ' ಗ್ರಂಥವನ್ನು ಅನುಸರಿಸಿ 96 ನುಡಿಗಳಲ್ಲಿ 'ತೀರ್ಥ ಕ್ಷೇತ್ರಮಾಲ' ಎಂಬ ದೀರ್ಘ ಕೃತಿ ರಚಿಸಿರುವರು. 'ಶ್ರೀ ಗುರು ಕೃಪಾ ಗ್ರಂಥ ಮಾಲಾ' ಎಂಬ ಒಂದು ಪ್ರಕಟನಾಲಯ ಸ್ಥಾಪಿಸಿ ದರು. ಅದರ ಮೂಲಕ ಪುಸ್ತಕಗಳನ್ನು ಪ್ರಕಟಿಸಿದರು. ಏಳು ಭಾಗಗಳಲ್ಲಿ "ಶ್ರೀಹರಿ ಭಕ್ತ ವಿಜಯ" ಹೊರ ತಂದರು. ಇಪ್ಪತ್ತೆ ರಡು ಹರಿದಾಸರ ಜೀವನ ಸಾಧನ ಮತ್ತು ಬೋಧನೆಗಳನ್ನು ಬರೆದರು. ದಶೋಪನಿಷತ್‌ಗಳನ್ನು ಕನ್ನಡಕ್ಕೆ ಅನುವಾದಿಸಿದರು. ಅಪುರೂಪವಾದ ಸೌಪರ್ಣಿ,ವಾರುಣಿ ದೇವಿಯರ ಮೇಲೆ ಹಾಗೂ ಶ್ರೀಕೃಷ್ಣನ ಷಣ್ಮಹಿಷಿಣಿಯರ ಮೇಲೆ ಕೃತಿಗಳನ್ನು ರಚಿಸಿರುವರು. ಈ ಪ್ರಕಾರವಾಗಿ 510 ಕೃತಿಗಳನ್ನು ಹಾಗೂ ಹಲವಾರು ಉಗಾಭೋಗಗಳನ್ನು ರಚಿಸಿ ಗುರುಗೋವಿಂದ ವಿಟ್ಠಲ ನಿಗೆ ಸಮರ್ಪಣೆ ಮಾಡಿದರು. ವಿಶೇಷವೆಂದರೆ ತಾವು ವಾಸ ಮಾಡುತ್ತಿದ್ದ ಮನೆಯಲ್ಲಿ ವಿಟ್ಠಲ ದೇವರನ್ನು ಪ್ರತಿಷ್ಠಾಪಿಸಿ ಆ ಮನೆಯನ್ನು ವಿಟ್ಠಲನಿಗೆ ದಾನ ಮಾಡಿ ಆಧುನಿಕ ಪುರಂದರ ದಾಸರೆಂಬ ಹೆಗ್ಗಳಿಕೆಗೆ ಪಾತ್ರರಾದರು.

ತಮ್ಮ 84ನೇ ವಯಸ್ಸಿನಲ್ಲಿ ಪುತ್ತಿಗೆ ಮಠದ ಶತಾಯುಷಿ ಶ್ರೀಪಾದಂಗಳವರಿಂದ 'ಹರಿದಾಸಕುಲತಿಲಕ" ಎಂಬ ಪ್ರಶಸ್ತಿ ಪಡೆದರು.ತಮ್ಮ 86ನೇ ವಯಸ್ಸಿನಲ್ಲಿ "ದಾಸಧರ್ಮ ಪ್ರವರ್ಧಕ" ಎಂಬ ಪ್ರಶಸ್ತಿಯಿಂದ ಭೂಷಿತರಾದರು. ತಮ್ಮ ಆ ಇಳಿ ವಯಸ್ಸಿ ನಲ್ಲಿ 26 ರ ಹರೆಯದವರಂತೆ ದಾಸಸಾಹಿತ್ಯ ಪ್ರಚಾರ ಮಾಡು ತ್ತಿರುತ್ತಿದ್ದರು. ತೀರ್ಥಕ್ಷೇತ್ರ ಯಾತ್ರೆ. ಪುರಾಣ ಪ್ರವಚನ ಭಜನೆ.

ಪುಸ್ತಕಗಳನ್ನು ಬರೆಯುವುದು. ಅವುಗಳ ಪ್ರಕಟನೆ ಇವು ಮೂರು ಅವರ ಜೀವನದ ಧ್ಯೇಯವಾಗಿದ್ದವು. ಮಾರ್ಗಶೀರ್ಷ ಮಾಸ ಬಹುಳ ಏಕಾದಶಿ ದಿನವಿಡೀ ಭಜನೆ, ಪ್ರವಚನ ಇತ್ಯಾದಿ ಗಳನ್ನು ಬಿಡುವಿಲ್ಲದಂತೆ ವ್ಯವಸ್ಥೆ ಮಾಡಿದರು. ರಾತ್ರಿ ಅಖಂಡ ಭಜನೆ ಬೆಳಗ್ಗೆ ದ್ವಾದಶಿ ಗಂಗಾಜಲ. ಮೃತ್ತಿಕೆ ಜಲ ಸ್ವೀಕರಿಸಿ ಕೊನೆ ಉಸಿರು ಎಳೆದರು. ವಿಶೇಷವೆಂದರೆ ಗುರು ಗೋವಿಂದ ದಾಸರು ಶ್ರಾವಣಮಾಸ ಬಹುಳ ದ್ವಾದಶಿ ಈ ಭೂಮಿಗೆ ಬಂದರು, ಮತ್ತೆ ಮಾರ್ಗಶೀರ್ಷ ಬಹುಳ ದ್ವಾದಶಿ ಈ ಧರೆಯಿಂದ ಮರೆ ಯಾದರು.

ಗುರುಗೋವಿಂದದಾಸರ ಪ್ರಶಿಷ್ಯೆಯರಲ್ಲಿ ನಾನೂ ಒಬ್ಬಳೂ ಎಂದು ಹೇಳಿಕೊಳ್ಳುವುದಕ್ಕೆ ನನಗೆ ಬಹಳ ಹೆಮ್ಮೆ ಎನಿಸುತ್ತದೆ.

ನನ್ನ ಪರಮ ಗುರುಗಳು ಅವರು. ಇಂದಿಗೂ ಅವರ ಅನೇಕ ಶಿಷ್ಯರುಗಳು ನಾಡಿನಾದ್ಯಂತ ನಡೆದಾಡುತ್ತಾ ತಮ್ಮ ಗುರುಗಳ ಕೀರ್ತಿ ಗಾಥೆಯನ್ನು ನಾಡಿನಾದ್ಯಂತ ಹಾಡುತ್ತಿದ್ದಾರೆ. ಗುರುಗೋವಿಂದದಾಸರ ಶಿಷ್ಯರು, ಪ್ರಶಿಷ್ಯರು, ಅಖಿಲ ಭಾರತ ಹರಿದಾಸ ಸಾಹಿತ್ಯ ಸಮ್ಮೇಳನ,ದಾಸಸಾಹಿತ್ಯ ಪ್ರಾಜೆಕ್ಟ್ ಮತ್ತು ಸಾತ್ವಿಕ ಭಕ್ತರೆಲ್ಲಾ ಸೇರಿ ಮೂರು-ನಾಲ್ಕು ದಿನ ಗುರುಗಳ ಆರಾ ಧನೆಯನ್ನು ವೈಭವದಿಂದ ನಡೆಸುತ್ತಿರುತ್ತಾರೆ.





38

**ಕರ್ನಾಟಕದ ವೈಷ್ಣವ ಕ್ಷೇತ್ರಗಳು**

# ಚುಂಚನಕಟ್ಟೆ ಶ್ರೀ ಕೋದಂಡರಾಮ ದೇವಾಲಯ

-ಕೆಂಗೇರಿ ಚಕ್ರಪಾಣಿ
94483 86886

ಮೈಸೂರು ಜಿಲ್ಲೆಯ, ಕೃಷ್ಣರಾಜನಗರ ತಾಲ್ಲೂಕಿನ ಪ್ರಸಿದ್ಧ ಯಾತ್ರಾ ಸ್ಥಳ ಚುಂಚನಕಟ್ಟೆ. ಕಾವೇರಿ ನದಿಯ ಬಲ ದಂಡೆಯ ಮೇಲೆ ಪ್ರಸ್ತುತ ಗ್ರಾಮವಿದೆ. ಚುಂಚನಕಟ್ಟೆಯಲ್ಲಿ ಕಾವೇರಿಯು ಬಂಡೆಗಳ ಮೇಲಿಂದ ಬೀಳುತ್ತಿದ್ದು ಪ್ರಕೃತಿ ಪ್ರಿಯರಿಗೆ ಅತ್ಯಂತ ರಮಣೀಯ ಸ್ಥಳ. ಇಲ್ಲಿ ಕಾವೇರಿ ನದಿ ತೀರದಲ್ಲಿರುವ ಕೋದಂಡರಾಮ ದೇವಾಲಯವು ಇತಿಹಾಸ ಪ್ರಸಿದ್ಧ ಸುಂದರ ಆಲಯ.

ಶ್ರೀಕೋದಂಡರಾಮ ದೇವಾಲಯವು ಎತ್ತರವಾದ ಪ್ರದೇಶದಲ್ಲಿದ್ದು ಗರ್ಭಗೃಹ,ಅಂತರಾಳ,ನವರಂಗ,ಮುಖ ಮಂಟಪ ಹಾಗೂ ಎತ್ತರದ ರಾಜಗೋಪುರಗಳನ್ನು ಹೊಂದಿರುವ ರಚನೆಯಾಗಿದೆ. ದೇವಾಲಯಕ್ಕೆ ಸುತ್ತಲೂ ಕೋಟೆಯ ಮಾದರಿಯ ರಕ್ಷಣಾ ಗೋಡೆಯಿದೆ. ಕೋದಂಡರಾಮ ದೇವರ ಗರ್ಭಗುಡಿಯಲ್ಲಿ ಶ್ರೀರಾಮ, ಸೀತಾಲಕ್ಷ್ಮಣರ ಸುಂದರ ಮೂರ್ತಿಗಳಿವೆ. ಸೀತಾಮಾತೆಯು ಶ್ರೀರಾಮನ ಬಲಬದಿಯಲ್ಲಿರುವುದು ವಿಶೇಷ.ದೇವಾಲಯವು ವಿಜಯನಗರದರಸರ ಕಾಲಕ್ಕೆ ಸೇರುತ್ತದೆ. ಚುಂಚನಕಟ್ಟೆಯ ಸ್ಥಳಪುರಾಣದ ಪ್ರಕಾರ ಶ್ರೀರಾಮರು ವನವಾಸದ ಸಮಯದಲ್ಲಿ ಸೀತಾಮಾತೆ ಮತ್ತು ಲಕ್ಷ್ಮಣನ ಸಮೇತ ಇಲ್ಲಿ ತಂಗಿದ್ದರಂತೆ. ಆಗ ಅವರಿಗೆ ಇನ್ನೂ ಹನುಮನ ಭೇಟಿಯಾಗದಿದ್ದಲಿಂದ, ರಾಮಚಂದ್ರನ ಪರಿವಾರದ ಮೂರ್ತಿಯ ಜೊತೆ ಹನುಮಂತನ ಮೂರ್ತಿ ಕಂಡು ಬಂದಿಲ್ಲ. ಶ್ರೀರಾಮಚಂದ್ರನ ಭಕ್ತರಾದ ತೃಣಬಿಂದು ಆಶ್ರಮದಲ್ಲಿ ರಾಮನು ವಾಸಿಸುತ್ತಿರುತ್ತಾನೆ. ಅಲ್ಲಿ ಚುಂಚ ಮತ್ತು ಚುಂಚಿ ಎಂಬುವರು ಸಜ್ಜನರಿಗೆ ಕಿರುಕುಳ ಕೊಡುತ್ತಿರುತ್ತಾರೆ. ಶ್ರೀರಾಮ, ಲಕ್ಷ್ಮಣರು ಅವರನ್ನು ಸಂಹಾರ ಮಾಡಿ ಮೋಕ್ಷ ಕರುಣಿಸಿದ್ದರಿಂದ ಈ ಪ್ರದೇಶಕ್ಕೆ ಚುಂಚನಕಟ್ಟೆ ಎಂದಾಗಿದೆ.

ಒಮ್ಮೆ ಸೀತಾಮಾತೆಗೆ ಸ್ನಾನಕ್ಕೆ ತೊಂದರೆಯಾಗಿದ್ದರಿಂದ, ರಾಮನು ಗುಪ್ತಗಾಮಿನಿಯಾಗಿ ಹರಿಯುತ್ತಿದ್ದ ಕಾವೇರಿ ನದಿಗೆ ಬಾಣವನ್ನು ಬಿಟ್ಟನು. ಆಗ ನೀರು ಪ್ರವಾಹದಂತೆ ಉಕ್ಕಿ ಹರಿಯಿತು. ಶ್ರೀರಾಮ ಬಿಟ್ಟ ಬಾಣದಿಂದ ಸೃಷ್ಟಿಯಾದ ಸ್ಥಳಕ್ಕೆ ಧನುಷ್ಕೋಟಿ ತೀರ್ಥ ಎಂಬ ಹೆಸರಿದೆ ಮತ್ತು ಸೀತಾಮಾತೆಯು ಸ್ನಾನ ಮಾಡಿದ ಸ್ಥಳಕ್ಕೆ ಸೀತಾಮಡುವು ಎಂದು ಕರೆಯುವರು. ಚುಂಚನಕಟ್ಟೆಯ ಶ್ರೀಕೋದಂಡರಾಮ ದೇವಾಲಯವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ವಿಸ್ತರಿಸಲಾಗಿದೆ.

ಚುಂಚನಕಟ್ಟೆ ಶ್ರೀಕೋದಂಡರಾಮ ಸ್ವಾಮಿಯ ಬ್ರಹ್ಮರಥೋತ್ಸವು ಜನವರಿ ತಿಂಗಳಿನಲ್ಲಿ ಅದ್ದೂರಿಯಾಗಿ ನಡೆಯುತ್ತದೆ. ಆಗ ನಡೆಯುವ ದನಗಳ ಜಾತ್ರೆ "ಚುಂಚನ ಕಟ್ಟೆಯ ದನಗಳ ಜಾತ್ರೆ" ಎಂದು ಜಿಲ್ಲೆಯಲ್ಲಿಯೇ ಪ್ರಸಿದ್ಧಿ. ಜಾತ್ರೆಗೆ ಎರಡು ಲಕ್ಷ ಜನರು ಸೇರುತ್ತಾರೆ. ಪುಷ್ಯ ಮಾಸದ ಕೃಷ್ಣ ಪಕ್ಷದ ನವಮಿಯಲ್ಲಿ ಸ್ವಾತಿ ನಕ್ಷತ್ರದಲ್ಲಿ ಬೆಳಗ್ಗೆ ಸರಿಯಾಗಿ 11.00 ರಿಂದ 11.50 ಗಂಟೆಯೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಪಾಂಚರಾತ್ರಾಗಮರೀತ್ಯಾ ಬ್ರಹ್ಮರಥೋತ್ಸವವು ಬಹಳ ವಿಜೃಂಭಣೆಯಿಂದ ನೆರವೇರುತ್ತದೆ. ಒಂಬತ್ತು ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಮೊದಲನೆಯ ದಿನ ಸನ್ನಿಧಿ, ಅನುಜ್ಞೆ, ಅಭಿಷೇಕ, ಎರಡನೆಯ ದಿನ ಯಾಗಶಾಲ ಪ್ರವೇಶ,ವಿಶ್ವಕ್ಸೇನಾರಾಧನೆ, ಧ್ವಜಾರೋಹಣ ನೆರವೇರುತ್ತದೆ. ನಂತರದ ದಿನಗಳಲ್ಲಿ ಬಲಿಹರಣ, ನಿತ್ಯೋತ್ಸವಗಳು, ಶ್ರೀರಾಮ ಕಲ್ಯಾಣೋತ್ಸವಗಳು ಬ್ರಹ್ಮರಥೋತ್ಸವಕ್ಕೆ ಹಿಂದಿನ ದಿನಗಳಲ್ಲಿ ನಡೆದು ಎಂಟನೆಯ ದಿನ ಸ್ವಾಮಿಗೆ ಬ್ರಹ್ಮ ರಥೋತ್ಸವವು ಬಹಳ ವಿಜೃಂಭಣೆಯಿಂದ ಜರುಗುತ್ತದೆ.

ಬ್ರಹ್ಮರಥೋತ್ಸವದ ನಂತರದ ದಿನಗಳಲ್ಲಿ ಆರಾಧನೆ, ಬಲಿಹರಣ, ಆಂಜನೇಯ ಸಂದರ್ಶನ, ಅವಭೃತಸ್ನಾನ, ಮಹಾಭಿಷೇಕ,ಹನುಮಂತೋತ್ಸವಗಳು ನಡೆದು ಪುಷ್ಯ ಮಾಸದ ಕೃಷ್ಣ ಪಕ್ಷದ ತ್ರಯೋದಶಿಯ ದಿನ ಶ್ರೀಸೀತಾರಾಮರ ಪಟ್ಟಾಭಿಷೇಕ,ನಂತರ ಶಯನೋತ್ಸವ ಮತ್ತು ಧ್ವಜಾವರೋಹಣದೊಂದಿಗೆ ಅದ್ದೂರಿಯ ಬ್ರಹ್ಮರಥೋತ್ಸವವು ಮುಕ್ತಾಯವಾಗುತ್ತದೆ.






ಚುಂಚನಕಟ್ಟೆಯ ಸಮೀಪದಲ್ಲಿ ಶೀಗವಾಳು ಎಂಬ ಗ್ರಾಮವಿದ್ದು ಅಲ್ಲಿ ಶ್ರೀರಾಮ ಮಂದಿರವಿದೆ. ಶ್ರೀಶ್ಯಾಮ ಯ್ಯಂಗಾರ್ ಎಂಬ ಮಹನೀಯರು ಸುಮಾರು ಎಂಬತ್ತು ವರ್ಷಗಳ ಹಿಂದೆ ನಿರ್ಮಿಸಿರುವ ಶ್ರೀರಾಮ ಮಂದಿರದಲ್ಲಿ ಸುಮಾರು 150 ವರ್ಷಗಳಷ್ಟು ಹಿಂದಿನ ಅಪುರೂಪದ ತೈಲ ವರ್ಣ ಚಿತ್ರಗಳಿವೆ. ಶ್ರೀರಾಮ ಪಟ್ಟಾಭಿಷೇಕ, ದಶಾವತಾರದ ಚಿತ್ರಗಳು ಕೃಷ್ಣನ ಬಾಲಲೀಲೆಗಳು ಬಹಳ ಶ್ರೇಷ್ಠ ಮಟ್ಟದಲ್ಲಿವೆ. ಶಿಥಿಲ ಹಂತವನ್ನು ತಲುಪಿರುವ ಶ್ರೀರಾಮ ಮಂದಿರವನ್ನು ಪುನರ್ನಿರ್ಮಿಸಿ,ಇಲ್ಲಿರುವ ಅತ್ಯಂತ ಸುಂದರ ಚಿತ್ರಪಟ ಗಳನ್ನು ರಕ್ಷಿಸುವ ಕಾರ್ಯ ಇಲ್ಲಿಯ ಭಕ್ತರಿಂದ ನಡೆಯುತ್ತಿರು ವುದು ಅಭಿನಂದನೀಯ.

**ಹೀಗೆ ಬನ್ನಿ:** ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿನ ಚುಂಚನಕಟ್ಟೆಯು ಕೆ.ಆರ್.ನಗರದಿಂದ 14 ಕಿ.ಮೀ. ದೂರದಲ್ಲಿದೆ.ಕೃಷ್ಣರಾಜನಗರದಿಂದ ಹಾಸನದ ಕಡೆಗೆ ಸಾಗುವಾಗ ಒಂದು ಕಿ.ಮೀ. ದೂರದಲ್ಲಿ ಎಡಕ್ಕೆ ಸಿಗುವ ರಸ್ತೆಯಲ್ಲಿ ತಿರುಗಿ, ಹೆಬ್ಬಾಲೆ ಕೊಪ್ಪಲು, ಕಪ್ಪಡಿ ತಿರುವು, ಶ್ರೀರಾಂಪುರ ಮುಖಾಂತರ ಚುಂಚುನಕಟ್ಟೆಯನ್ನು ಸೇರಬಹುದು.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧ ವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳೆಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

# ಶ್ರೀ ರಘೋತ್ತಮ ತೀರ್ಥರು

- ಶ್ರೀಮತಿ. ಮಾಧುರಿ ದೇಶಪಾಂಡೆ

94810 70245



ಪ್ರಣವತ್ ಕಾಮಧೇನೂಂ ಚ ಭಜತ್ ಸುರತ ರೂಪಮಂ।
ಶ್ರೀಭಾವಬೋಧಕೃತ್ಪಾದ ಚಿಂತಾಮಣಿಂ ಉಪಾಸ್ಮಹೇ ॥

ಉತ್ತರಾಧಿಮಠದ ಪರಂಪರೆಯಲ್ಲಿ 14ನೇ ಪೀಠಾಧಿಪತಿಗಳಾದ ಶ್ರೀರಘೋತ್ತಮತೀರ್ಥರು ಭಾವಬೋಧರೆಂದೇ ಪ್ರಸಿದ್ಧರು. ಶ್ರೀರಘುನಾಥತೀರ್ಥರ ಶಿಷ್ಯರಾದ ಶ್ರೀರಘುವರ್ಯತೀರ್ಥರು ಆಗ ಪೀಠಾಧಿಪತಿಗಳಾಗಿದ್ದರು. ಅವರ ಪೂರ್ವಾಶ್ರಮದ ತಂಗಿ ಮತ್ತು ಭಾವಂದಿರಾದ ಸುಬ್ಬಾಭಟ್ಟರು ಜೊತೆಗೆ ಸಹೋದರಿ ಗಂಗಾಂಬೆ ಇದ್ದ ಸ್ವರ್ಣವಾಟ ಗ್ರಾಮಕ್ಕೆ ಬಂದರು ಅವರಿಗೆ ಸಂತಾನವಿರಲಿಲ್ಲ. ಸ್ವಾಮಿಗಳು ತಮಗೆ ಸಂತಾನ ಭಾಗ್ಯವಿರದ ಕಾರಣ ಆತಿಥ್ಯ ಸ್ವೀಕಾರ ಮಾಡದೇ ಗುಡಿಯಲ್ಲಿ ಬಿಡಾರ ಹೂಡಿದಾಗ ಗಂಗಾಂಬೆಗೆ ಬಹಳ ದುಃಖವಾಯಿತು. ದಂಪತಿಗಳ ಪ್ರಾರ್ಥನೆಯ ಮೇರೆಗೆ ಶ್ರೀರಘುವರ್ಯ ತೀರ್ಥರು ಮೊದಲ ಸಂತಾನವನ್ನು ಶ್ರೀಮಠಕ್ಕೆ ಕೊಡಬೇಕೆಂಬ ಷರತ್ತಿನೊಂದಿಗೆ ಅವರಿಗೆ ಸಂತಾನದ ಆಶೀರ್ವಾದ ಮಾಡುತ್ತಾರೆ. ನಂತರ ಕ್ರಿ.ಶ. 1548ರಲ್ಲಿ ರಾಮಚಂದ್ರ ಭಟ್ಟರಾಗಿ ಸ್ವರ್ಣವಾಟದಲ್ಲಿ ರಘೋತ್ತಮರು ಜನಿಸುತ್ತಾರೆ.

ಹುಟ್ಟಿದ ಮಗುವನ್ನು ಭೂ ಸ್ಪರ್ಶ ಮಾಡಿಸದೇ ಶ್ರೀಮಠಕ್ಕೆ ತಂದು ವ್ಯಾಸ ಕೂರ್ಮ ಸಾಲಿಗ್ರಾಮದ ಅಭಿಷೇಕದ ಹಾಲನ್ನು ಕುಡಿದು ಬೆಳೆದರು. ಅವರ ಮಹಿಮೆ ಸಣ್ಣ ವಯಸ್ಸಿನಿಂದಲೇ ಅಪಾರವಾದುದು ಆಗಿದೆ. ಅವರು 1 1/2ವಯಸ್ಸಿನವರಾಗಿದ್ದಾಗ ಚಕ್ಕಡಿಗಾಡಿಯಲ್ಲಿ ಸ್ವಾಮಿಗಳೊಂದಿಗೆ, ಶಿಷ್ಯರೊಂದಿಗೆ ಪ್ರಯಾಣ ಮಾಡಿ ಮಠಕ್ಕೆ ಬಂದ ಮೇಲೆ ಬಾಲಕರಾದ ರಾಮಚಂದ್ರರು ಮೊದಲಿಗೆ ಇಳಿಯುವುದಿಲ್ಲ. ಎಲ್ಲರೂ ಇಳಿದ ನಂತರ ಅವರು ಇಳಿದಾಗ ಚಕ್ಕಡಿಯ ಗಾಲಿ ಸಿಡಿದು ಗಾಡಿ ಒಗ್ಗಾಲಾಗಿ ಬೀಳುತ್ತದೆ. ಮಠದ ಸಿಬ್ಬಂದಿಗಳನ್ನು ಸ್ವಾಮಿಗಳನ್ನು ಹೊತ್ತು ತಂದ ಚಕ್ಕಡಿ ಬಂಡಿಯನ್ನು ರಾಮಚಂದ್ರರು ಮಗುವಾಗಿದ್ದಾಗಲೇ ಕಾಪಾಡಿದ್ದರು. ರಾಮಚಂದ್ರನಿಗೆ 5ನೇ ವರ್ಷದಲ್ಲಿ ಉಪನಯನವಾಯಿತು. 6ನೇ ವಯಸ್ಸಿನಲ್ಲಿ ವೇದಗಳನ್ನು ಕಾವ್ಯ ಮೀಮಾಂಸೆಗಳನ್ನು ಕಲಿತರು. ಆ ಸಮಯದಲ್ಲಿ ಶ್ರೀರಘುವರ್ಯ ತೀರ್ಥರ ಕಾಲವು ಮುಗಿದು ಬಂದ ಕಾರಣ ಅವರು ರಘೋತ್ತಮರಿಗೆ ಆಶ್ರಮವನ್ನು ನೀಡಿ ಪ್ರಾಯೋಪವೇಶ ಮಾಡಿದರು. ಅವರ ಬೃಂದಾವನವನ್ನು ಆನೆಗುಂದಿಯಲ್ಲಿ ಆಗ ಬಯಸಿದ್ದರಿಂದ ಅಲ್ಲಿಯೇ ಅವರ ವೃಂದಾವನವನ್ನು ಮಾಡಲಾಯಿತು. ಶ್ರೀರಘೋತ್ತಮರು ತಮ್ಮ ಗುರುಗಳ ಆಜ್ಞೆಯಂತೆ ಶ್ರೀಮಠದ ಪಂಡಿತರಾದ ಆದ್ಯ ವರದಾಚಾರ್ಯರ ಬಳಿ ತಮ್ಮ ಅಭ್ಯಾಸವನ್ನು ಮಣ್ಣೂರಿನಲ್ಲಿ ಮುಂದುವರೆಸಿದರು. ಒಂದು ದ್ವಾದಶಿಯ ದಿನ ಬಾಲ ಸನ್ಯಾಸಿಗಳು ತಡವಾಗಿ ನದಿಯಿಂದ ಬಂದ ಕಾರಣ ಅವರನ್ನು ಬಿಟ್ಟು ಪ್ರಸಾದವನ್ನು ಸ್ವೀಕರಿಸಿದ್ದರು. ಈ ಅಘಾತದಿಂದ ಬಾಲಸನ್ಯಾಸಿಗಳ ಮನ ಘಾಸಿಯಾಗಿತ್ತು. ಅವರು ತಮ್ಮ ಗುರುಗಳಲ್ಲಿ ಪ್ರಾರ್ಥಿಸಿದಾಗ ಅವರು ರಘೋತ್ತಮರಿಗೆ ತಮ್ಮ ಎಲ್ಲ ಜ್ಞಾನವನ್ನು ಧಾರೆ ಎರೆದರು. ಮಾರನೆಯ ದಿನದಿಂದ ರಘೋತ್ತಮರೇ ಪಾಠ ಪ್ರವಚನಗಳನ್ನು ಸ್ವತಃ ಮಾಡತೊಡಗಿದರು.

ಶ್ರೀರಘೋತ್ತಮರು 12 ವರ್ಷಗಳ ಕಾಲ ಮಣ್ಣೂರಿನಲ್ಲಿಯೇ ಇದ್ದು ಪಾಠ ಪ್ರವಚನಗಳನ್ನು ಮಾಡುತ್ತಾ ಅಲ್ಲಿ ಒಂದು ವಿದ್ಯಾಪೀಠವನ್ನು ಕಟ್ಟಿದರು. ಮುಂದೆ ದೇಶದಾದ್ಯಂತ ಸಂಚಾರವನ್ನು ಕೈಗೊಂಡರು.

ಶ್ರೀರಘೋತ್ತಮರು 10 ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಎಲ್ಲ ಗ್ರಂಥಗಳು ಕೂಡ ಜಯತೀರ್ಥರ ಗ್ರಂಥಗಳ ಭಾವವನ್ನು ಬೋಧಿಸುವ ಕೆಲಸವಾದ್ದರಿಂದ ಇವರನ್ನು ಭಾವಬೋಧರು ಎಂದು ಕರೆಯಲಾಗುತ್ತದೆ.



ರಘೋತ್ತಮರ ಪ್ರಮುಖ ಶಿಷ್ಯರಲ್ಲಿ ವೇದೇಶತೀರ್ಥರು ಮತ್ತು ವೇದವ್ಯಾಸತೀರ್ಥರು ಸನ್ಯಾಸಿಗಳು ಅವರಲ್ಲದೇ ವ್ಯಾಸ ರಾಮಾಚಾರ್ಯ ಹಾಗೂ ಆನಂದಭಟ್ಟಾರಕರು ಪಂಡಿತರು.

1596ನೇ ಇಸವಿಯಲ್ಲಿ ತಮ್ಮ 48ನೇ ವಯಸ್ಸಿನಲ್ಲಿ ತಮಿಳುನಾಡಿನ ತಿರುಕೋಯಿಲೂರಿನ ಸಮೀಪದ ಮಣಂಪುಂಡಿ ಎಂಬ ಗ್ರಾಮದಲ್ಲಿ ಮಾರ್ಗಶಿರ ಶುದ್ಧ ಏಕಾದಶಿಯಂದು ವೃಂದಾವನಸ್ಥರಾದರು. ಮಣಂಪುಂಡಿ ಎಂದರೆ ಮದುವೆಯ ಮಂಟಪ ಎಂದು ಅರ್ಥ ಆ ಪ್ರದೇಶವು ಶಿವಪಾರ್ವತಿಯರ ವಿವಾಹ ಮಂಟಪವೆಂದು ಹೇಳಲಾಗುತ್ತದೆ. ಶ್ರೀರಘೋತ್ತಮರು ಘಟೋತ್ಕಚನ ಅಂಶವೆಂದು ಹೇಳುತ್ತಾರೆ. ಅವರು ಪೂಜೆಯನ್ನು ಮಾಡುವ ಕಾಲದಲ್ಲಿ ಅಷ್ಟ ದಿಕ್ಕ್ ಪಾಲಕರು ಬರುತ್ತಿದ್ದರು ಎಂದು ಹೇಳುತ್ತಾರೆ. ಶ್ರೀರಘೋತ್ತಮರ ಬೃಂದಾವನದ ಹಿಂಬದಿಯಲ್ಲಿ ಅವರ ತಾಯಿಯ ಮುಖವನ್ನು ಕೆತ್ತಿರುತ್ತಾರೆ. ಆ ಬದಿಯಿಂದ ಆರಂಭ ಮಾಡಿ ಸೇವೆಯನ್ನು ಮಾಡಿದರೆ ಬೇಡಿದ ಫಲವು ದೊರಕುವುದು ಎಂಬುದು ಅಲ್ಲಿ ನಡೆದುಕೊಳ್ಳುವವರ ನಂಬಿಕೆ ಅನೇಕರಿಗೆ ಅನುಭವವೂ ಆಗಿದೆ.

ಶ್ರೀರಘೋತ್ತಮರ ವೃಂದಾವನದ ಎಡಬದಿಯಲ್ಲಿ ಹುಣಸೆಮರ ಹಾಗೂ ವೃಂದಾವನದ ಎದುರು ಭಾಗದಲ್ಲಿ ನೆಲ್ಲೀ ಮರಗಳು ಇದ್ದು ಅವುಗಳ ದೊಡ್ಡದಾಗಿ ಬೆಳೆದು ವೃಂದಾವನದ ಮೇಲೆ ನೆರಳನ್ನು ನೀಡಲು ಆರಂಭಿಸಿದರೆ ಆ ರೆಂಬೆಗಳು ತಾವಾಗಿಯೇ ಮುರಿದು ಬೀಳುತ್ತವೆ ಎಂಬುದನ್ನು ನೋಡಿದವರು ಹೇಳುತ್ತಾರೆ. ತಿರುಕೂಯಿಲೂರಿನಲ್ಲಿ ವೃಂದಾವನಕ್ಕೆ ಮುಂಜಾನೆ ನಿರ್ಮಾಲ್ಯ ವಿಸರ್ಜನೆಯ ಪೂಜೆ ಮುಗಿದು ನೈವೇದ್ಯದವರೆಗೂ ಮಾತ್ರ ಶಾಟಿಯನ್ನು ಉಡಿಸಿರುತ್ತಾರೆ. ಗುರುಗಳಿಗೆ ಆರಾಧನೆಯ ಕಾಲದಲ್ಲಿ ಮಾತ್ರ ಅಲಂಕಾರವನ್ನು ಮಾಡಲಾಗುತ್ತದೆ.

ಗುರುಗಳ ಮಹಿಮೆಯ ಅನೇಕ ಕಥೆಗಳನ್ನು ಕೇಳ ಬಹುದಾಗಿದೆ. ಕೆಲ ವರ್ಷಗಳ ಹಿಂದೆ ತಿರುಕೋಯಿಲೂರ್ ರೋಡ್ ಸೇತುವೆ ನಿರ್ಮಾಣ ಮಾಡುವ ಸಮಯದಲ್ಲಿ ವೃಂದಾವನವನ್ನು ಖಾಲಿ ಮಾಡಬೇಕೆಂದು ಬ್ರಿಟೀಷ್ ಸರ್ಕಾರ ಇಂಜಿನಿಯರ್ ನೋಟಿಸ್ ಕೊಟ್ಟಿದ್ದನು.

ಅಲ್ಲಿಯ ಅರ್ಚಕರು ಜನರು ಸರ್ಕಾರಕ್ಕೆ ಮನವಿ ಕೊಟ್ಟರೂ ಅದನ್ನು ಸ್ವೀಕರಿಸಿರಲಿಲ್ಲ.ಆ ಬ್ರಿಟೀಷ್ ಇಂಜಿನಿಯರ್ ತನ್ನ ಪಟ್ಟನ್ನು ಬಿಟ್ಟಿರಲಿಲ್ಲ.ಆದರೆ ಸೇತುವೆ ಕಾರ್ಯ ಆರಂಭವಾಗುವ ಹಿಂದಿನ ದಿನ ಇಂಜಿನಿಯರ್‌ನ ಸ್ವಪ್ನದಲ್ಲಿ ಗುರುಗಳು ಹೋಗಿ ತಮ್ಮ ವೃಂದಾವನದ ಸ್ಥಳವನ್ನು ಬಿಟ್ಟು ಪಕ್ಕದಲ್ಲಿ ಸೇತುವೆಯನ್ನು ನಿರ್ಮಿಸಬೇಕೆಂದು ಇಲ್ಲದೇ ಹೋದರೆ ನಿಮಗೆ ಒಳ್ಳೆಯದಾಗುವುದಿಲ್ಲ ಎಂದು ಹೇಳಿದಂತೆ ಭಾಸವಾಗಿ ಆ ಸೇತುವೆಯನ್ನು ವೃಂದಾವನದಿಂದ ಸ್ವಲ್ಪ ದೂರದಲ್ಲಿ ನಿರ್ಮಿಸಿರುವುದನ್ನು ಇಂದಿಗೂ ನೋಡುತ್ತೇವೆ.

ಇಂದಿಗೂ ಸ್ಥಳೀಯ ಜನರು ಶ್ರೀರಘೋತ್ತಮರ ಆರಾಧನೆಯಲ್ಲಿ ಪ್ರಸಾದದ ಅನ್ನವನ್ನು ತೆಗೆದುಕೊಂಡು ಹೋಗಿ ಒಣಗಿಸಿಟ್ಟುಕೊಂಡು ದನಕರುಗಳಿಗೆ ಅನಾರೋಗ್ಯವಾದಾಗ ಅದನ್ನು ತಿನ್ನಿಸುತ್ತಾರೆ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

# ಪೃಥಾದೇವಿ

ಶ್ರೀಮತಿ. ಡಾ॥ ವಾಣಿಶ್ರೀ ಬಿ.ಎಂ.

94803 22475

ಮಹಾಭಾರತ ಮಹಾಕಾವ್ಯವನ್ನು ವಿಸ್ಮಯಕಾರಕವಾದ ಕಾವ್ಯ ಎನ್ನುತ್ತಾರೆ. ವಿಸ್ಮಯ ಕಾರಕ ಎಂಬ ಮಾತು ಮಹಾಭಾರತದ ಅಗಾಧ ಸಾಧ್ಯತೆಗಳನ್ನು ಕುರಿತು ವಿವರಿಸುತ್ತದೆ. ಅದರ ಕರ್ತೃ ವ್ಯಾಸರು ಧರ್ಮದಿಂದಲೇ ಅರ್ಥ,ಕಾಮಗಳನ್ನು ಸಾಧಿಸಬೇಕೆನ್ನುತ್ತಾರೆ. ಧರ್ಮದ ಮಹತ್ವ, ಅಧರ್ಮದ ನಶ್ವರತೆಯನ್ನು ಈ ಕಾವ್ಯ ಕಟ್ಟಿ ಕೊಡುತ್ತದೆ. ರಾಮಾಯಣ, ಮಹಾಭಾರತ, ಭಗವದ್ಗೀತೆಗಳು ಇಂದಿನ ಕಾಲದಲ್ಲಿ ಅತ್ಯಗತ್ಯವಾಗಿದೆಯಾದರೂ ಹೆಚ್ಚು ಪ್ರಸ್ತುತವಾಗಿದೆ. ಇಂದಿನ ಒತ್ತಡದ ಬದುಕಿಗೆ ಮದ್ದಾಗ ಬಲ್ಲದ್ದಾಗಿದೆ.

ಮಹಾಭಾರತದಲ್ಲಿ ವೈವಿಧ್ಯಮಯವಾದ ಪಾತ್ರಗಳಿವೆ. ಸ್ತ್ರೀ ಪಾತ್ರಗಳು ಅತ್ಯಂತ ಮಹತ್ವ ಪೂರ್ಣವಾದವುಗಳಾಗಿವೆ. ಅದರಲ್ಲಿ ಲೋಕೋತ್ತರ ಪರಾಕ್ರಮಿಗಳಾದ ಪಾಂಡವರ ಜನನಿ ಕುಂತಿಯೂ ಒಬ್ಬಳು. ಕುಂತಿಯ ಮೊದಲ ಹೆಸರು ಪೃಥಾದೇವಿ. ಯಾದವರಲ್ಲಿ ಪ್ರಸಿದ್ಧನಾದ ಶೂರಸೇನನ ಮಗಳು.ವಸುದೇವ ಮೊದಲಾದ ಒಂಬತ್ತು ಸೋದರರು ಮತ್ತು ನಾಲ್ವರು ತಂಗಿಯರು ಇವಳಿಗಿದ್ದರು. ಚೊಚ್ಚಲ ಮಗಳಾದ ಪೃಥೆಯನ್ನು ಶೂರಸೇನನು ತನ್ನ ಸೋದರತ್ತೆಯ ಮಗನಾದ ಕುಂತೀಭೋಜನಿಗೆ ಕೊಟ್ಟುಬಿಟ್ಟನು. ಕುಂತೀಭೋಜನು ಅವಳಿಗೆ ಕುಂತಿ ಎಂದು ನಾಮಕರಣ ಮಾಡಿದನು. ಪೃಥೆ ಅಪ್ರತಿಮ ಸುಂದರಿ, ವಿನಯ ಸೌಜನ್ಯತೆಗಳನ್ನು ಮೈಗೂಡಿಸಿ ಕೊಂಡು ಕುಂತಿ ಬೆಳೆದಳು. ವಿಶಾಲನೇತ್ರೆ, ಧರ್ಮಪರಾಯಣೆ , ಸರ್ವಾಂಗ ಸುಂದರಿ, ಸಕಲ ಸದ್ಗುಣ ಸಂಪನ್ನೆ ತೇಜಸ್ವಿನಿ, ಗುಣಶಾಲಿನಿ.

ಶೂರಸ್ಯ ಪುತ್ರೀ ಗುಣಶೀಲರೂಪ  
ಯುಕ್ತಾ ದತ್ತಾ ಸಖ್ಯುರೇವ ಸ್ವಪಿತ್ರಾ।  
ನಾಮ್ನಾ ಪೃಥಾ ಕುಂತಿಭೋಜಸ್ಯ ತೇನ  
ಕುಂತೀ ಭಾರ್ಯಾ ಪೂರ್ವದೇಹೇಽಪಿ ಪಾಂಡೋಃ

ವಸುದೇವನ ತಂದೆ ಶೂರಸೇನನ ಸೋದರತ್ತೆಯ ಮಗ ಕುಂತಿಭೋಜ. ವೃದ್ಧನಾದ ಅವನಿಗೆ ಸಂತಾನವಿರಲಿಲ್ಲ. ಹಾಗಾಗಿ ಪೃಥೆಯನ್ನು ಅವನಿಗೆ ಶೂರಸೇನ ನೀಡಿದ. ಪಾಂಡುವಿನ ಮೂಲ ರೂಪ ಪರಾವಹ ಎಂಬ ಮರುತ. ಕುಂತಿಯು ಅದೇ ಹೆಸರಿನಿಂದ ಆ ಮರುತನ ಪತ್ನಿ ಯಾಗಿದ್ದಳು ಎಂದು ಶ್ರೀ ವಾದಿರಾಜರ ಅಭಿಪ್ರಾಯ. ನಾರಾಯಣ ಪಂಡಿತಾಚಾರ್ಯರೂ ಸಹ ಕುಂತಿ. ಮಾದ್ರಿಯರು ಹಿಂದಿನ ಜನ್ಮದಲ್ಲೂ ಪಾಂಡುವಿನ ಪತ್ನಿಯರಾಗಿದ್ದರು ಎಂದಿದ್ದಾರೆ. ಆದರೆ ಅವರ ಹೆಸರುಗಳನ್ನು ಹೇಳಿಲ್ಲ.

ಒಮ್ಮೆದೂರ್ವಾಸರು ಕುಂತೀಭೋಜನ ಅರಮನೆಗೆ ಆಗಮಿಸಿದರು.ಮಗಳಿಗೆ ಶ್ರೇಯಸ್ಸು ಉಂಟಾಗಲೆಂದು ಅರಸನು ಕುಂತಿಯನ್ನು ದೇವತೆಗಳ ಪೂಜೆ ಹಾಗೂ ಅತಿಥಿ ಸತ್ಕಾರಕ್ಕಾಗಿ ನೇಮಿಸಿದನು. ಪರಮಕೋಪಿಷ್ಠರಾದ ದೂರ್ವಾಸರು ಕುಂತಿಯ ಜಾಗರೂಕತೆ ಶ್ರದ್ಧಾ ಭಕ್ತಿಗಳಿಂದ ಕೂಡಿದ ಸೇವೆ ಸ್ವೀಕರಿಸಿ ಪ್ರಸನ್ನರಾದರು. ಅವಳಿಗೆ ಮಂತ್ರೋಪದೇಶ ಮಾಡಿ ಅವಳು ಕರೆದ ದೇವತೆ ಬಂದು ವರ ನೀಡುವನೆಂದು ತಿಳಿಸಿ ಅಲ್ಲಿಂದ ತೆರಳಿದರು. ಬಾಲ್ಯ ಸಹಜವಾದ ಕುತೂಹಲ ದಿಂದ ಕುಂತಿ ಸೂರ್ಯನನ್ನು ಕುರಿತು ಮಂತ್ರ ಪುನಃಶ್ಚರಣೆ ಮಾಡಿಬಿಟ್ಟಳು. ಸೂರ್ಯದೇವ ಪ್ರತ್ಯಕ್ಷವಾಗಿ ನಿಂತನು. ಹೆದರಿದ ಕುಂತಿ ಚಾಪಲ್ಯದಿಂದ ಕರೆದಿದ್ದಾಗಿ ಹೇಳಿದಳು.

ಮಹಾಪರಾಕ್ರಮಿಯ ಪತ್ನಿಯಾಗಿಯೂ ಕುಂತಿ ಸುಖ ಪಡಲಿಲ್ಲ. ವಿವಾಹವಾಗಿ ಕೆಲವು ವರ್ಷಗಳು ಮಾತ್ರ ಸೌಖ್ಯ. ಪಾಂಡುವಿನ ಶಾಪದ ಕಾರಣದಿಂದ ಮಕ್ಕಳಿಲ್ಲದಿರುವ ಕೊರಗು. ದೇವತೆಗಳಿಂದ ಪಡೆದ ಮಕ್ಕಳಿಂದಲೂ ಕುಂತಿಗೆ ಸುಖ ದೊರೆಯಲಿಲ್ಲ. ಪಾಂಡುವಿನ ಮರಣಾ ನಂತರ ಕುಂತಿ ಮಕ್ಕಳೊಡನೆ ಗಾಂಧಾರಿಯ ಹಂಗಿನಲ್ಲಿ ಬದುಕಬೇಕಾಯಿತು. ಕೌರವ ಸಂಚುಗಳಿಂದ ಮಕ್ಕಳಿಗೆ ಒದಗಬಹುದಾದ ಪ್ರಾಣಭಯದಿಂದ ಆಕೆ ತಲ್ಲಣಗೊಂಡಿದ್ದಳು. ಪಾಂಡವರ ವನವಾಸ ಕಾಲದಲ್ಲಿ ವ್ರತನಿಷ್ಠಳಾಗಿ ವಿದುರನ ಮನೆಯಲ್ಲಿ ಬದುಕಿದಳು. ಆ 13 ವರ್ಷಗಳು ಅವಳ ಬಾಳಿನ ಅತಿ ದಾರುಣ ದಿನಗಳು. ಅಂತಹ ಸಂಕಷ್ಟದ ಮಧ್ಯದಲ್ಲೂ ಆಕೆ ವಿಚಲಿತಳಾಗದೆ ಕೃಷ್ಣನ ಸ್ಮರಣೆಯಲ್ಲಿ ಜೀವ ಬಿಗಿ ಹಿಡಿದು ಬಾಳಿದ ಧೀರ ಮಹಿಳೆ. ತಂದೆ ತನ್ನನ್ನು ದಾನ ಮಾಡಿದ, ಪತಿ ಅರ್ಧದಲ್ಲಿ ಕೈ ಬಿಟ್ಟು ಹೋದ,ಹೆತ್ತ ಮಗ ಕರ್ಣನನ್ನು ತ್ಯಜಿಸ ಬೇಕಾಯ್ತು. ಧೀರರೂ, ಧರ್ಮಿಷ್ಠರೂ ಆದ ಮಕ್ಕಳ ಬವಣೆ,ಸೊಸೆಯ ಪರಿಭವ ಮೊದಲಾದ ಕಷ್ಟ ಪರಂಪರೆಗೆ ಎದುರಾದ ಕುಂತಿ ಬದುಕಿನಲ್ಲಿ ಕಷ್ಟ ಕೋಟಲೆಗಳ ಸರಮಾಲೆಯನ್ನು ಎದುರಿಸಿದಳು, ಕರ್ಣನಿಗೆ ತಾನು ಮಾಡಿದ ಅನ್ಯಾಯ ಸದಾ ಭಾದಿಸುತ್ತಿತ್ತು. ಕೃಷ್ಣವರ ಬೇಡೆಂದಾಗ ಸದಾ ನನಗೆ ಕಷ್ಟಗಳೇ ಇರಲಿ ಎಂದಳು ಕಷ್ಟವಿದ್ದಾಗ ಕೃಷ್ಣನ ಸ್ಮರಣೆ ಇರುತ್ತದೆ ಆಗ ಭಗವಂತನ ಕೃಪಾ ದೃಷ್ಟಿ ನಮ್ಮ ಮೇಲಿರುತ್ತದೆ. ಇಂತಹ ಬೇಡಿಕೆ ಅಹಂಕಾರ ರಹಿತರಲ್ಲಿ ಮಾತ್ರ ಇರಲು ಸಾಧ್ಯ. ಬದುಕಿನ ಕಷ್ಟಗಳು ಅವಳಲ್ಲಿ ನಿಷ್ಕಲ್ಮಷ ಭಕ್ತಿ ಹುಟ್ಟಿಸಿತ್ತು. ಆ ಭಕ್ತಿಯ ಪರಿಣಾಮವಾಗಿ ಭಗವಂತ ಅವಳಿಗೆ ದಕ್ಕಿದ. ತ್ಯಾಗ ಜೀವನಕ್ಕೆ ಕುಂತಿಯ ಬದುಕೇ ಉದಾಹರಣೆ. ಕುಂತಿಯ ಜೀವನವು ದುಃಸ್ವಪ್ನದಂತೆ ಕಳೆಯಿತು. ವಿದುರ ಧೃತರಾಷ್ಟ್ರ. ಗಾಂಧಾರಿಯರೊಡನೆ ವಾನಪ್ರಸ್ಥಕ್ಕೆ ತೆರಳಿದ ಕುಂತಿ ಮಕ್ಕಳನ್ನಗಲಿ ಕಾಳ್ಗಿಚ್ಚಿಗೆ ಸಿಕ್ಕು ಬೆಂದು ಹೋದಳು. ಪಾಂಡವರಂತಹ ಮಕ್ಕಳಿದ್ದರೂ ದುರ್ಮರಣಕ್ಕೀಡಾಗ ಬೇಕಾದದ್ದು ಅವಳ ವಿಧಿಯಾಗಿತ್ತು. ಆದರೂ ಕುಂತಿ ಧೃತಿಗೆಡದೆ ಬದುಕಿನ ಆಟದಲ್ಲಿ ಎಲ್ಲವನ್ನೂ ಸಹಿಸಿ ಕಷ್ಟ ಸಹಿಷ್ಣುವಾದಳು ಧರ್ಮದ ಹೊರತು ಯಾವುದೂ ಶಾಶ್ವತವಲ್ಲ ಕೊನೆಗೆ ಜೀವನ ಸಹ ಎಂಬ ಪಾಠವನ್ನು ಕುಂತಿ ಇಂದಿಗೂ ಕಲಿಸುತ್ತಾಳೆ.



### ತಿರುಮಲೆ ತಿರುಪತಿ ದೇವಸ್ಥಾನಗಳು

# ಶ್ರೀ ವೆಂಕಟೇಶ್ವರ ಅನ್ನಪ್ರಸಾದ ಟ್ರಸ್ಟ್

### (ಒಂದು ದಿನದ ದೇಣಿಗೆ ಕೊಡುವ ಯೋಜನೆ)

ಅನ್ನವೇ ಪರಬ್ರಹ್ಮ ಸ್ವರೂಪ, ಹಸಿದವನಿಗೆ ಅನ್ನ ನೀಡುವುದಕ್ಕಿಂತ ಉತ್ತಮವಾದ ಪುಣ್ಯ ಮತ್ತೊಂದಿಲ್ಲ. ತಿರುಮಲೆ ತಿರುಪತಿ ದೇವಸ್ಥಾನವು ತಿರುಮಲೆ ಮತ್ತು ತಿರುಚಾನೂರಿನಲ್ಲಿ ನಿತ್ಯವೂ ಅನ್ನಪ್ರಸಾದ ವಿತರಣೆಯನ್ನು ನಡೆಸುತ್ತಿದೆ. ಈ ಕಾರ್ಯಕ್ಕೆ ಅನೇಕ ದಾನಿಗಳು ಉದಾರವಾಗಿ ದೇಣಿಗೆ ನೀಡುತ್ತಾರೆ, ಎಂಬುದು ತಿಳಿದಿರುವ ವಿಷಯ! ಪ್ರತಿಯೊಬ್ಬರಿಗೂ ಭೂಮಿಯನ್ನು ದಾನ ಮಾಡಲು ಸಾಧ್ಯವಿಲ್ಲ. ಇದನ್ನು ಗಮನಿಸಿದ ತಿ.ತಿ.ದೇ., ಒಂದು ದಿನದ ಅನ್ನಪ್ರಸಾದದ ವೆಚ್ಚವನ್ನು ಭಕ್ತರಿಂದ ಕಾಣಿಕೆಯಾಗಿ ಸ್ವೀಕರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಕ್ತರು ಸ್ಪಂದಿಸಿ ! ಮತ್ತೊಬ್ಬರ ಹಸಿವನ್ನು ತೀರಿಸಿ! ಮಾಧವನ ಕೃಪೆಗೆ ಪಾತ್ರರಾಗಿ !!!

ದೇಣಿಗೆಯನ್ನು ವ್ಯಕ್ತಿಗಳು ಮಾತ್ರವಲ್ಲದೆ ಕಂಪನಿಗಳು, ಸಂಸ್ಥೆಗಳು ಮತ್ತು ಟ್ರಸ್ಟ್‌ಗಳು ಸಂಯುಕ್ತವಾಗಿಯೂ ಸಹ ವಿರಾಳವನ್ನು ನೀಡಬಹುದು.

ದಾನಿಗಳು ದೈನಂದಿನ ಮೊತ್ತವನ್ನು (ರೂ. 38 ಲಕ್ಷಗಳು ) ಅಲ್ಪಾಹಾರ - (ರೂ. 8 ಲಕ್ಷಗಳು) ಮಧ್ಯಾಹ್ನ ಭೋಜನ (ರೂ. 15 ಲಕ್ಷಗಳು ) ಅಥವಾ ರಾತ್ರಿ ಭೋಜನ (ರೂ. 15 ಲಕ್ಷಗಳು) ವಿತರಿಸಲು ಆಯ್ಕೆ ಮಾಡಬಹುದು. ದಾತರಿಗೆ ತಿ.ತಿ.ದೇ., ದೇವಸ್ಥಾನದವರು ಕಲ್ಪಿಸುವ ಸೌಕರ್ಯಗಳು ಒಂದೇ ಮಾದರಿಯಲ್ಲಿ ಇರುತ್ತದೆ.

**ಹೆಚ್ಚಿನ ವಿವರಗಳಿಗಾಗಿ :**


**ಉಪಕಾರ್ಯ ನಿರ್ವಹಣಾಧಿಕಾರಿ (ಡೋನಾರ್ ಸೆಲ್) ಎಫ್.ಎ.ಸಿ.,**

**ತಿ.ತಿ.ದೇ., ತಿರುಮಲೆ. ಫೋನ್ : -**

**0877 - 2263001, 2263472.**

**ಈ ಮೇಲ್ ಐ.ಡಿ. :-**

**cdmc.ttd@tirumala.org**


ಇದರಲ್ಲಿ ಪಾಲ್ಗೊಂಡ ಭಕ್ತದಾತರು ಭಕ್ತರಿಗೆ ತಾವೇ ಸೇವೆ ಸಲ್ಲಿಸುವ ಅವಕಾಶವಿರುತ್ತದೆ. ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ವಿತರಣಾ ಕೇಂದ್ರದಲ್ಲಿ ಅವರ ಹೆಸರನ್ನು ಪ್ರದರ್ಶಿಸಲಾಗುತ್ತದೆ.

**ದೈನಂದಿನ ವೆಚ್ಚಗಳು**

| | |
|---|---|
| 1. ಅಲ್ಪಹಾರ (ಟಿಫಿನ್ ) | - 08 ಲಕ್ಷಗಳು |
| 2.ಮಧ್ಯಾಹ್ನ ಭೋಜನ | - 15 ಲಕ್ಷಗಳು |
| 3. ರಾತ್ರಿ ಭೋಜನ | - 15 ಲಕ್ಷಗಳು |
| ಒಟ್ಟು ಮೊತ್ತ | - 38 ಲಕ್ಷಗಳು |



**ಈ ಮೊತ್ತವನ್ನು ದಾನಿಗಳು ತಿ.ತಿ.ದೇ., ಅನ್ನಪ್ರಸಾದ ಟ್ರಸ್ಟ್‌ನಲ್ಲಿ ನೀಡಬಹುದು.**

# 108 ದಿವ್ಯ ದೇಶಗಳು

# ತಿರುನಾಗೈ ಪಟ್ಟಣ

ಆಚಾರ್ಯ ಚಕ್ರವರ್ತಿ ರಂಗನಾಥನ್
ಅನುವಾದ : ಸೂರ್ಯವಂಶಿ



ಶ್ರೀವೈಷ್ಣವ ಸಂಪ್ರದಾಯದಲ್ಲಿ ಆದಿಶೇಷನು ಸೇವಕರಲ್ಲಿ ಅಗ್ರಗಣ್ಯನೆಂದು ಪ್ರಸಿದ್ಧಿ ಪಡೆದಿದ್ದಾನೆ. ಅವನನ್ನು ನಾಗರಾಜು ಎಂದು ಕರೆಯುತ್ತಾರೆ. ನಾಗರಾಜು ಎಂಬ ಹೆಸರಿನಿಂದ ಪ್ರಸಿದ್ಧವಾದ ಕ್ಷೇತ್ರವೇ ನಾಗ ಪಟ್ಟಣ. ಈ ಕ್ಷೇತ್ರ ತಿರುವಾರೂರ್ ಕ್ಷೇತ್ರದಿಂದ 24 ಕಿ.ಲೋ ಮೀಟರ್ ದೂರದಲ್ಲಿ ಪೂರ್ವ ದಿಕ್ಕಿನಲ್ಲಿದೆ. ಮೂರು ಪ್ರಾಕಾರಗಳೊಂದಿಗೆ, ಅದ್ಭುತವಾದ ಪ್ರಕೃತಿ ರಮಣೀಯತೆಯಿಂದ ಏಳು ಅಂತಸ್ತುಗಳ ರಾಜಗೋಪುರದೊಂದಿಗೆ ಈ ಕ್ಷೇತ್ರ ರಾರಾಜಿಸುತ್ತಿದೆ. ಇಲ್ಲಿನ ಮೂಲಮೂರ್ತಿ ಯಾದ ನೀಲಮೇಘ ಪೆರುಮಾಳ್ ಶ್ರೀದೇವಿ ಭೂದೇವಿ ಸಮೇತನಾಗಿ ಪೂರ್ವ ದಿಕ್ಕಿನಲ್ಲಿ ನಿಂತಿರುವ ಭಂಗಿಯಲ್ಲಿ ನೆಲೆಸಿದ್ದಾನೆ. ಉತ್ಸವ ಮೂರ್ತಿ ಸೌಂದರ್ಯರಾಜ ಪೆರುಮಾಳ್, ಅಮ್ಮನವರು ಸೌಂದ ರ್ಯವಲ್ಲಿ ತಾಯಾರ್. ಈ ಆಲಯತೀರ್ಥ ''ಸಾರ ಪುಷ್ಕರಿಣಿ'' ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ. ಮಾವಿನ ಮರ ಇಲ್ಲಿನ ಸ್ಥಳದ ''ವೃಕ್ಷ'' ಇಲ್ಲಿನ ವಿಶೇಷವೆನೆಂದರೆ ಆದಿ ಶೇಷನು ಭಗವಂತನ ಸೇವೆ ಮಾಡುವ ವಿಧದಲ್ಲಿದ್ದು, ನಿಂತಿರುವ ಭಂಗಿಯಲ್ಲಿ ನೀಲಮೇಘ ಪೆರುಮಾಳ್ ಎಂದು, ಕುಳಿತಿ ರುವ ಭಂಗಿಯಲ್ಲಿ ಗೋವಿಂದರಾಜ ಸ್ವಾಮಿಯಾಗಿ, ಶಯನ ಭಂಗಿಯಲ್ಲಿ ರಂಗ ನಾಥ ಸ್ವಾಮಿಯಾಗಿ ಪ್ರತ್ಯೇಕ ಸನ್ನಿಧಿಯಲ್ಲಿ ನೆಲಸಿ ಅನುಗ್ರಹಿಸುತ್ತಿದ್ದಾನೆ. ಹಾಗೇ ನಾವು ಎಲ್ಲಿಯೂ ಕಾಣದಂತಹ 8 ಭುಜಗಳೊಂದಿಗೆ ಅಷ್ಟ ಭುಜನರಸಿಂಹ ಮೂರ್ತಿಯನ್ನು ಇಲ್ಲಿ ಕಾಣುತ್ತೇವೆ ಒಂದು ಕೈಯನ್ನು ಪ್ರಹ್ಲಾದನ ಶಿರಸ್ಸಿನ ಮೇಲೆ ಇರಿಸಿರುವಂತೆ, ಮತ್ತೊಂದು ಅಭಯ ಹಸ್ತದೊಂದಿಗೆ ಉಳಿದ ಕೈಗಳೊಂದಿಗೆ ಹಿರಣ್ಯ ಕಶಿಪುವನ್ನು ಸಂಹರಿಸುತ್ತಿರುವಂತೆ ಕಾಣುತ್ತದೆ.

## ಸ್ಥಳ ಪುರಾಣ:

ನಾರದನ ಉಪದೇಶದಂತೆ ಧ್ರುವನು ಭಗವಂತನನ್ನು ಕುರಿತು ತಪಸ್ಸು ಮಾಡಬೇಕೆಂದುಕೊಂಡನು. ದೇವದೇವನು ಅವನ ತಪಸ್ಸನ್ನು ಮೆಚ್ಚಿ ಲೋಕದ ಜನರನ್ನು ಉದ್ಧರಿಸಬೇಕೆಂದು ಸಂಕಲ್ಪ ಮಾಡಿ, ರಾಜ ಭೋಗಗಳನ್ನು ತ್ಯಜಿಸಿದ ಧ್ರುವನ ಪ್ರಾರ್ಥನೆಯ ಮೇರೆಗೆ ಈ ಕ್ಷೇತ್ರದಲ್ಲಿ ನೆಲೆಸಿದ್ದಾನೆ.

ಈ ಕ್ಷೇತ್ರದಲ್ಲಿನ ಸೌಂದರ್ಯರಾಜಸ್ವಾಮಿಗೆ ನಮಸ್ಕರಿಸಿದವರಿಗೆ ಸಮಸ್ತ ದೋಷಗಳು ತೊಲಗುತ್ತವೆ. ಪಾರ್ವತೀ ದೇವಿ ಭಗವಂತನ ಕುರಿತು ತಪಸ್ಸು ಮಾಡಿ, ತಾನು ಕಳೆದುಕೊಂಡಿದ್ದ ಸೌಂದರ್ಯವನ್ನು ಪುನಃ ಪಡೆದಂತೆ ಇಲ್ಲಿನ ಸ್ಥಳ ಪುರಾಣವು ತಿಳಿಸುತ್ತಿದೆ. ಹಾಗೇ ಚೋಳರ ನಾಡನ್ನು ಪರಿಪಾಲಿಸುತ್ತಿದ್ದ ಶಾಲಿಶುಕನೆಂಬ ರಾಜನಿಗೆ ಈ ಸೌಂದರ್ಯರಾಜ ಸ್ವಾಮಿಯನ್ನು ಪ್ರತಿನಿತ್ಯವೂ ಸೇವಿಸುವ ಅಭ್ಯಾಸವಿತ್ತಂತೆ. ತನ್ನ ರಾಜ್ಯಾಡಳಿತದ ಕಾಲದಲ್ಲಿ ಎಂತಹಾ ಲೋಪವೂ ಬರಬಾರದೆಂದು ಒಂದು ಸುರಂಗಮಾರ್ಗವನ್ನು ತೋಡಿ, ಅದರ ಮೂಲಕ ಪ್ರತಿದಿನವೂ ಈ ಸ್ವಾಮಿಯನ್ನು ಸೇವಿಸುತ್ತಿದ್ದನಂತೆ. ಒಮ್ಮೆ ಆ ಸುರಂಗ ಮಾರ್ಗದಲ್ಲಿ ಪ್ರಕೃತಿಗೆ ಭಿನ್ನವಾಗಿ ಮೂರು ಸ್ತನಗಳೊಂದಿಗೆ ಇದ್ದ ಒಂದು ಸುಂದರವಾದ ಹುಡುಗಿಯನ್ನು ನೋಡಿದನಂತೆ. ನಾಗ ಕುಲದ ಜಾತಿಗೆ ಸೇರಿದ ಆ ಹುಡುಗಿಯನ್ನು ನೋಡಿದ ಕೂಡಲೇ, ಸ್ವಾಮಿಯ ಮಹಿಮೆಯಿಂದಾಗಿ ಆಕೆಯ ಮೂರನೇಯ ಸ್ತನವು ಮಾಯವಾಯಿತಂತೆ.

ನಂತರ ಇಬ್ಬರೂ ಸೌಂದರ್ಯರಾಜಸ್ವಾಮಿಯ ಎದಿರಿನಲ್ಲೇ ವಿವಾಹವನ್ನು ಮಾಡಿಕೊಂಡರು. ನಂತರ ಆ ದೇವಾಲಯಕ್ಕೆ ಅನೇಕ ವಿಧವಾದ ಸೇವೆಗಳನ್ನು ಸಮರ್ಪಿಸಿದ್ದಾರೆ. ಶರೀರದಲ್ಲಿ ಎಂತಹಾ ಅವಯವ ದೋಷಗಳಿದ್ದರೂ ಈ ಸ್ವಾಮಿಯ ಅನುಗ್ರಹದಿಂದ ಅವುಗಳೆಲ್ಲವೂ ತೊಲಗಿ ಹೋಗುತ್ತದೆಂಬ ಪ್ರತೀತಿ ಇದೆ. ತಿರುಮಂಗೈಯಾಳ್ವಾರು ಈ ಸ್ವಾಮಿಯನ್ನು ಹತ್ತು ಪಾಶುರಗಳಿಂದ ಕೀರ್ತಿಸಿದ್ದಾನೆ. ಇಲ್ಲಿ ಪಾಂಚರಾತ್ರಾಗಮೋಕ್ತವಾಗಿ ಸ್ವಾಮಿಗೆ ಪೂಜೆಗಳನ್ನು ನಡೆಸಲಾಗುತ್ತದೆ. ಚೋಳರು, ಪಲ್ಲವರು, ಮರಾಠರು ಈ ದೇವಾಲಯಕ್ಕೆ ಅನೇಕ ವಿಧದಲ್ಲಿ ತಮ್ಮ ಸೇವೆಗಳನ್ನು ಸಲ್ಲಿಸಿದ್ದಾರೆ. ಮುತ್ತುಸ್ವಾಮಿ ದೀಕ್ಷಿತರು ಈ ಸ್ವಾಮಿಯನ್ನು ಅದ್ಭುತವಾಗಿ ಕೀರ್ತಿಸಿದ್ದಾರೆ. ಇಂತಹಾ ಪ್ರಸಿದ್ಧ ಕ್ಷೇತ್ರವನ್ನು ಇಲ್ಲಿನ ಭಗವಂತನನ್ನು ಯಾರು ದರ್ಶಿಸುತ್ತಾರೋ, ಅವರ ಅವಯವಗಳ ಕೊರತೆಗಳೆಲ್ಲವೂ ತೀರುತ್ತವೆ. ಆದ್ದರಿಂದ ಪ್ರತಿಯೊಬ್ಬರೂ ಈ ದಿವ್ಯಕ್ಷೇತ್ರವನ್ನು ದರ್ಶಿಸಿ ತಮ್ಮ ಲೋಪ ದೋಷಗಳನ್ನು ನೀಗಿಸಿಕೊಂಡು ಸುಖಮಯವಾದ ಜೀವನನ್ನು ನಡೆಸುತ್ತಾ ಧನ್ಯರಾಗಿ.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

**- ಕಳೆದ ಸಂಚಿಕೆಯಿಂದ**

ಇದು ತೀರಿದಾನಂತರ, ಗೋವಿಂದರಾಜಸ್ವಾಮಿ ಬಹುಕಾಲ ಭಗದ್ರಾಮಾನುಜರ ಏರ್ಪಾಟಿನಂತೆಯೇ ಅಧ್ಯಯನೋತ್ಸವವನ್ನು ಸ್ವೀಕರಿಸುತ್ತಿದ್ದರು. ಹೀಗೆ ಸ್ವಲ್ಪ ಕಾಲ ಕಳೆಯಲು ಅಲ್ಲಿನ ಹಿರಿಯರು ಇಂತಹ ಉತ್ಸವದಲ್ಲಿ ಏನಾದರೂ ಒಂದು ವಿಶೇಷವಿರತಕ್ಕುದ್ದೆಂದು ತಿಳಿದು, ಅದೇ ನಿಟ್ಟಿನಲ್ಲಿ ಗೋವಿಂದರಾಜಸ್ವಾಮಿ ಅಧ್ಯಯನೋತ್ಸವವು ಮುಗಿಸಿದ ನಂತರ ನಿತ್ಯಮುಕ್ತರೊಂದಿಗೆ ಆಳ್ವಾರು ತೀರ್ಥಕ್ಕೆ ಬಂದು ಮರಳಿ ಶ್ರೀರಾಜ ಬೀದಿಯಲ್ಲಿ ಪ್ರದಕ್ಷಿಣಾಕಾರದಲ್ಲಿ ವಿಜಯವನ್ನು ಮಾಡಿ ಶ್ರೀಗೋಪುರದ ಹತ್ತಿರ ಗೋವರ್ಧನೋತ್ಸವವನ್ನು ಶ್ರೀಮಂಟಪದಲ್ಲಿ ನಿತ್ಯಮುಕ್ತರು, ಆಳ್ವಾರರು, ಆಚಾರ್ಯರನ್ನು ಸ್ವಾಮಿಯ ಎರಡು ಬದಿಗಳಲ್ಲಿ ಸೇವಿಸುತ್ತಾ ನಿಂತಿರಲು ಆಗ ಅವರಿಗೆ ದಿವ್ಯಮಾಲಿಕೆ, ಶ್ರೀಶಠಕೋಪ, ಮೊದಲಾದ ಮರ್ಯಾದೆಗಳನ್ನು ಪ್ರಸಾದಿಸಿದ ನಂತರ ಪ್ರಬಂಧಗಾಯಕರು ಆಳ್ವಾರರ, ಆಚಾರ್ಯರ ವಿಷಯಗಳಲ್ಲಿ ಒಂದೊಂದಾಗಿ (ಪ್ರಶಸ್ತಿಗೀತೆ)ಯನ್ನು, ಅವರು ಪ್ರಸಾದಿಸಿದ ಪ್ರಬಂಧದಿಂದ ಮೊದಲ ಗೀತೆಯನ್ನು ಅನುಸಂಧಿಸುವಂತೆಯೂ, ಕಟ್ಟಿಯವನ್ನು (ಪ್ರಶಸ್ತಿ ಪ್ರಬಂಧವನ್ನು) ಕೇಳಿಸುವವರು ಆಳ್ವಾರರರ ಆಚಾರ್ಯರ ವಿಷಯದಲ್ಲಿನ ಒಂದೊಂದು ಶ್ಲೋಕವನ್ನು ಅನುಸಂಧಾನ ಮಾಡಿಯೇ ವಿರಾಮ ತೆಗೆದುಕೊಳ್ಳಬೇಕೆಂದು ಕಟ್ಟಳೆಯನ್ನು ವಿಧಿಸಿದ್ದಾರೆ.

**ವಿಡ್ಕೋಲುಕ್ರಮ - ಗೀತೆಗಳ ವರಸೆ - ಶ್ಲೋಕಗಳ ಕ್ರಮ**

ಮೊಟ್ಟಮೊದಲು ಶ್ರೀಮನ್ನಾಥನಿಗೆ ಶೇಷಾಂಶುಕವನ್ನೂ, ಶ್ರೀಮಾಲೆಯನ್ನು, ಶ್ರೀಶಠಕೋಪವನ್ನೂ ಪ್ರಸಾದಿಸಿ ಅದರೊಡನೆ ಪ್ರಬಂಧ ಗಾಯಕರಿಗೆ ಪ್ರಸಾದಿಸಿದ ಬಳಿಕ, ಪ್ರಬಂಧಗಾಯಕರು ಶ್ರೀಶಠಕೋಪವನ್ನು, ಶ್ರೀಮಾಲಿಕೆಯನ್ನು......ಶೇಷಾಂಶುಕವನ್ನು ಬಂಗಾರದ ಹರಿವಾಣದಲ್ಲಿಟ್ಟು ತಲೆಯ ಮೇಲಿಟ್ಟುಕೊಂಡು ಒಯ್ಯುವಾಗ ನಿತ್ಯಮುಕ್ತರೆಲ್ಲರು ಕ್ರಮಾನುಸಾರ ಅರ್ಚಕರು ಶ್ರೀಶಠಕೋಪದ ಮೊದಲು ಅವುಗಳನ್ನು ಪ್ರಬಂಧ ಗಾಯಕರು ನಿತ್ಯಮುಕ್ತ ವಿಷಯದ ಪ್ರಶಸ್ತಿ ಗೀತೆಗಳನ್ನು ಮೊದಲು ಅನುಸಂಧಾನ ಮಾಡಿ ಅವರು ಗಾಯನ ಮಾಡಿದ ಪ್ರಥಮ ಪ್ರಬಂಧಗಳಲ್ಲಿ ಮೊದಲ ಗೀತೆಯನ್ನು ದೇವಗಾನ ಪದ್ಧತಿಯಲ್ಲಿ ಅನುಸಂಧಿಸಲು ಆಗ ಕಟ್ಟಿಯನ್ನು ಕೇಳಿಸಬೇಕೆಂದು, ನಿತ್ಯಮುಕ್ತರೆಲ್ಲರಿಗೆ ಕ್ರಮವಾಗಿ ಹೇಳಿದ ತತ್ತದ್ವಿಷಯಗಳನ್ನೂ ಶ್ಲೋಕಗಳನ್ನೂ ಅನುಸಂಧಾನ ಮಾಡಿ ಬೀಳ್ಕೊಡುಗೆ ಅಂತಹ ಎಲ್ಲರನ್ನು ಬೀಳ್ಕೊಟ್ಟು ಕೃತಾರ್ಥರಾಗಿ ತಂತಮ್ಮ ಸನ್ನಿಧಿಗೆ ವಿಜಯವನ್ನು ಮಾಡಿದರು.

ಮೊದಲು ಗರುತ್ಮಂತನಿಗೆ 'ದಾಸಸ್ಸಖಾ' ಎಂಬ ಶ್ಲೋಕವನ್ನು, ಆದಿಶೇಷನಿಗೆ 'ಶೆನ್ರಾಲ್ ಕುಡೈಯಾಮ್' 'ನಿವಾಸಶಯ್ಯಾಸನ ಎಂಬ ಗೀತೆ- ಶ್ಲೋಕ



ವನ್ನು ಅನುಸಂಧಾನ ಮಾಡಬೇಕು. ಪೋಯ್‌ಗೈ ಆಳ್ವಾರ್, ಭೂತತ್ತಾಳ್ವಾರು, ಪೇಯಾಳ್ವಾರು, ಕೈತ್ತಶೆರ್, ವೈಯಂತಗಳಿಯಾ, ಎನ್‌ಪಿರವಿತಿ, ಆನ್ವೇತ ಗಳಿಯಾ, ಶೀರಾರುಮ್, ಮಾಡಮ್, ತಿರುಕ್ಕಂಡನ್-ಅನುನವಿಯು, ತಿರು ಮಳಿಶೈ ಆಳ್ವಾರುಗಳಿಗೆ ನಾರಾಯಣನ್ ನಾನ್ಮುಗನ್ನೈ-ಎಂಬುದನ್ನು, ನಮ್ಮಾಳ್ವಾರರಿಗೆ ಕರುವಿರುತ್ತಕ್ಕುಳಿ ಪೋಯ್ ನಂನಿಂದ್ಯೆ-ಎಂಬುದನ್ನು, ಶ್ರೀ ಕುಲಶೇಖರಾಳ್ವಾರರಿಗೆ ಇನ್ನಮುದಮ್, ಇರುಳಿರಿಯ ಎಂಬುದನ್ನು ಪೆರಿ ಯಾಳ್ವಾರರಿಗೆ ಪಾಂಡಿಯನ್ ಕೊಂಡಾಟ, ಪಲ್ಲಾಂಡು, ಪಲ್ಲಾಂಡು- ಎಂಬು ವುದನ್ನು, ಶ್ರೀಗೋದಾದೇವಿಗೆ ಅಲ್ಲಿವಾಳ್ ತಾವರೈ ಮೇಲ್, ತ್ತೆಯುರು ತಿಂಗಳಮ್-ಎಂಬುವುದನ್ನು ಅನುಸಂಧಿಸತಕ್ಕದ್ದು.

ಎಲ್ಲದಕ್ಕೂ ಮೊದಲು ಪ್ರಬಂಧಪ್ರಶಸ್ತಿ ಪದ್ಯದಲ್ಲಿನವುಗಳನ್ನು ಅನು ಸಂಧಿಸಿ, ಗೋದಾದೇವಿಗೆ ಚರಮ ಪ್ರಬಂಧ ಪ್ರಶಸ್ತಿ ಪದ್ಯವನ್ನು ಅನುಸಂಧಿ ಸಲು ಕಾರಣವು ವೇಂಕಟೇಶ್ವರನಿಗೆ ನನ್ನನ್ನೇ ಸಮರ್ಪಿಸುವೆ ಎಂದು ಪ್ರಬಂಧ ದಲ್ಲಿರುವುದೇ ಆಗಿದೆ.

ತೊಂಡರಡಿಪ್ಪಾಡಿ ಆಳ್ವಾರರಿಗೆ (ವಿಪ್ರನಾರಾಯಣನು) ಮತ್ತೋ ಣಮ್, ಕಾವಲಿಲ್‌ಪುಲನ್ಯೆ-ಎಂಬುವುಗಳನ್ನು ತಿರುಪ್ಪಾಣಾಳ್ವಾರರುಗಳಿಗೆ ಕಾಟ್ಟವೇ, ಅಮಲನಾದಿಪಿರಾನ್-ಎಂಬುದನ್ನು, ತಿರುಮಂಗೈ ಆಳ್ವಾರರಿಗೆ ವಾಳಿಪರಕಾಲನ್, ವಾಡಿನೇನ್‌ವಾಡಿ-ಎಂಬುದನ್ನು, ಶ್ರೀಮಧುರಕವಿಯಾ ಳ್ವಾರರಿಗೆ 'ವೇರಾನ್ನುಮ್' ಕಟ್ಟಿನುಣ್‌ಶಿರತ್ತಾಂಬಿನಾಲ್ ಎಂಬುದನ್ನು ಭಗವದ್ರಾಮಾನುಜರಿಗೆ 'ಶೋಲ್ಲಿನ್ ತಾಕೈ' ಅಖಿಲಭುವನ ಜನ್ಮ - ಎಂಬುದನ್ನೂ ವಿಶ್ವಕ್ಸೇನರಿಗೆ ತ್ವದೀಯಭುಕ್ತೊಚ್ಛಿತ - ಎಂಬುದು ಶ್ರೀಮನ್ನಾಥಮುನಿಗೆ ನಮೋಚಿಂತ್ಯ ಎಂಬುದನ್ನು ಪ್ರಬಂಧಗಾಯಕರಿಗೆ "ನಮೋ ಚಿಂತ್ಯ" ಎಂಬುದನ್ನು ಅನುಸಂಧಿಸಲಾಗುತ್ತದೆ.

ನಿತ್ಯ ಸೂರರನುಗ್ರಹಿಸಿದ ಪ್ರಬಂಧವೊಂದೂ ಇಲ್ಲದಿರು ವುದರಿಂದ ಅವರಿಂದ ಕೈಕೊಳ್ಳಲಾಗುವ ಕೈಂಕರ್ಯಗಳನ್ನು ಪ್ರತಿ ಪಾದಿ ಸುವ ಶ್ಲೋಕವನ್ನು ಅನುಸಂಧಿಸತಕ್ಕದ್ದು ಆಳ್ವಾರರು ಪರಂಪರೆಯಲ್ಲಿ ದಿವ್ಯಾವತಾರ ಕ್ರಮೇಣ ಮಂಗಳಶಾಸನಗಳು ನಂತರ ಶ್ರೀಮಧು ಕರರು, ಶ್ರೀಭಾಷ್ಯಕಾರರು, ಮಹಾರಾಜ್ಯಾದಿತರ ಆಶ್ರಿತ ರರಿಗೆ ಬಹು ಮಾನ ಮಾಡಿದ ನಂತರ, ಸೇನಾಧಿಪತಿ ಸನ್ಮಾನ, ಮಾಡಿಸಿ ಲೋಕ ನ್ಯಾಯ ನಿರ್ಣಯವನ್ನು ಹೇಳುವುದು. ಎಲ್ಲರ ನಂತರ ವಿಶ್ವಕ್ಸೇನರಿಗೆ ಬಹುಮಾನವನ್ನು ಮುಕ್ತರಾದ ಆಳ್ವಾರರನು ವಾಚಾಕೈಂಕರ್ಯ ಕ್ಕೆಂದೇ ಮಂಗಳಾಶಾಸನವನ್ನು ಪ್ರಸಾದಿಸಿದ ಪ್ರಕರಣವನ್ನು ನಿತ್ಯ ಕೈಂಕರ್ಯದೊಳಗಳವಡಿಸಿ ಉಪಚಾರಾರ್ಥ ವಾಗಿ ಮಂಗಳಶಾಸನ ವನ್ನು ಪ್ರಸಾದಿಸುವ ಕ್ರಮ.

**ಕಟ್ಟಿಯಂನಲ್ಲಿ ಕೇಳಿಸುವ ಶ್ಲೋಕಗಳು :**

ಶ್ರೀ ಭೂಮಿನಾಯಕ ದಯಾಕರ ದಿವ್ಯಮೂರ್ತೇ
ದೇವಾಧಿದೇವ ಜಗದೇಶಶರಣ್ಯ ವಿಷ್ಣೋ
ಗೋಪಾಂಗನಾಕುಚ ಸರೋರುಹ ಭೃಂಗರಾಜ
ಗೋವಿಂದ ರಾಜ ವಿಜಯೀ ಭವ ಕೋಮಲಾಂಗ
ದೇವಾಧಿದೇವ ಫಣಿರಾಜ ವಿಹಂಗರಾಜ
ರಾಜತ್ಕಿರೀಟ ಮಣಿರಾಜಿವಿರಾಜಿತಾಂಘ್ರೇ
ರಾಜಾಧಿರಾಜ ಯದುರಾಜಕುಲಾಧಿರಾಜ
ಗೋವಿಂದರಾಜ ವಿಜಯೀ ಭವ ಗೋಪಚಂದ್ರ"

(ಶ್ರೀದೇವಿ ಭೂದೇವಿ ಪ್ರಿಯಾ! ದಯಾಲೂ! ದಿವ್ಯ ವಿಗ್ರಹ ದೇವತೆ ಗಳ ದೇವ ಜಗದೇಕ ಶರಣ್ಯಾ! ವಿಷ್ಣೋ! ಗೋಪಸ್ತ್ರೀಲ ಕುಚಗಳ ಮೇಲೆ ವಾಸಿ ಸುವ ಭೃಂಗರಾಜ ಕೋಮಲಾಂಗಾ ! ಗೋವಿಂದರಾಜಾ! ಜಯಶೀಲನಾದ ವನಲ್ಲದೆ ಮತ್ತಾರು.

- ಮುಂದುವರೆಯುತ್ತದೆ.




## ನವೆಂಬರ್ 2023 ತಿಂಗಳ ರಸಪ್ರಶ್ನೆಯ ಉತ್ತರಗಳು

1. ಧನಲಕ್ಷ್ಮೀ ಪೂಜೆ
2. ಧಾತ್ರಿ ವ್ರತ
3. ಕುಮಾರಿ ಪೂಜೆ, ಕನ್ನಿಕಾ ಪೂಜೆ
4. ಆದಿಕೇಶವ
5. ಪವಿತ್ರಗೊಳಿಸುವುದು
6. ಹದಿನೆಂಟು ಅಡಿ
7. ಸಂವರಣ
8. ಶ್ರೀಪದ್ಮಾವತಿ ಅಮ್ಮನವರ
9. ನವವಿಧ
10. ತಾವರೆಯ ದಳಗಳ ಮೇಲೆ
11. ಹಿಂದೂಧರ್ಮವನ್ನು
12. ವೇದವತಿ
13. ವಾಯು ದೇವನಿಗೆ
14. ಮಾತಿನ ಮೇಲೆ
15. ಸೈಂಧವನು

**ವಿಜೇತರು**
**ಎನ್. ಎಸ್. ಹಿತೈಷಿ**
**IM 26012208580181**



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ಇದು ನಾವ್ಪೂ ಒಪ್ಪತಕ್ಕ ವಿಚಾರ. ಒಂದು ವಿಷಯ ಮಾತ್ರ ಅಗೋಚರವಾಗಿಯೇ ಉಳಿಯುತ್ತದೆ. ಇದು ನಮೂದಿಸಲ್ಪಡುವ ಅಂಶ. ಈ ವಿಗ್ರಹದ ಅವಿಭಾಜ್ಯ ಅಂಗಗಳೆಂದು ಶಂಖ ಚಕ್ರಗಳನ್ನು ದೇವರ ತಿರುಮಜ್ಜನದ ಸಮಯದಲ್ಲೂ ಕಳೆಯುವುದಿಲ್ಲವೆನ್ನುತ್ತಾರೆ. ಅವುಗಳನ್ನು ರಾಮಾನುಜಾಚಾರ್ಯರು ಈ ವಿಗ್ರಹ ವಿಷ್ಣುವಿನೆಂದು ಸ್ಥಿರಪಡಿಸಲೋಸುಗ ಅವರ ಕಾಲದಲ್ಲಿ ಪ್ರಯಾಸಪಟ್ಟು ಅಳವಡಿಸಿದ್ದಾಗಿ ಕಥೆಯಿದೆ. ರಾಮಾನುಜರನ್ನು "ಅಪ್ಪನುಕ್ಕ್ ಚುಗಾರುಯೆರುತ್ತರುಳುಂ ಪೆರುಮಾಳ್ "ಎಂದು ಹೊಗಳುತ್ತಾರೆ. ಆದರೆ ಅವರಿಗಿಂತ ಬಹಳ ಹಿಂದಿನ ಆಳ್ವಾರ್‌ಗಳು ಸ್ಪಷ್ಟವಾಗಿ ವೇಂಗಡದೊಡೆಯನು ಶಂಖ ಚಕ್ರಧಾರಿಯೆಂದೇ ಹಾಡಿದ್ದಾರೆ. ಹಾಗಾದರೆ ಆಳ್ವಾರುಗಳ ಕಾಲದಲ್ಲಿ ಅವರು ಕೂಡ ಶಂಖ ಚಕ್ರಗಳು ಏನಾದವು. ಇಲ್ಲಿ ಆಳ್ವಾರುಗಳು ಹಾಡಿರುವುದೇ ಸುಳ್ಳೆ? ಇಲ್ಲಿ ಆಳ್ವಾರುಗಳು ಗುರುತಿಸಿದ್ದ ಶಂಖ ಚಕ್ರಗಳನ್ನು ಜೈನ ಬೌದ್ಧ ಶಾರ್ತ್ತೀಯ ಕಾಪಾಲಿಕರು ಪ್ರಾಬಲ್ಯರಾಗಿದ್ದ ಕಾಲದಲ್ಲಿ ನಷ್ಟಗೊಳಿಸಿರಬಹುದಾದ ಸಂದರ್ಭ ಏರ್ಪಟ್ಟಿರುವುದೇ? ಇದಕ್ಕೆ ಪೂರಕವೆನ್ನುವಂತೆ ಒಂದು ವಿಚಿತ್ರ ಕತೆಯು ಪ್ರಚಾರದಲ್ಲಿದೆ. ಕಲಿ ಯುಗದಲ್ಲಿ ತನ್ನ ಪರಮ ಭಕ್ತನಾದ ತೊಂಡಮಾನ್ ಚಕ್ರ ವರ್ತಿಯು ಶತ್ರುನಿಗ್ರಹಕ್ಕಾಗಿ ಬೇಡಿಕೊಳ್ಳಲು ಪರಮ ಕಾರುಣಿಕ ನಾದ ಶ್ರೀನಿವಾಸನು ತನ್ನ ಶಂಖ, ಚಕ್ರಗಳನ್ನೇ ಅವನಿಗೆ ನೀಡಿದನಂತೆ, ಶಂಖ, ಚಕ್ರಗಳಿಲ್ಲದ ಸ್ವಾಮಿಯನ್ನು ಕಂಡ ಕಾಳಹಸ್ತಿಯ ಕೆಲವು ಶೈವರು ಆಗ ರಾಜನಾಗಿದ್ದ ಯಾದವರಾಯನೆಂಬುವನ ಮನಸ್ಸನ್ನು ಕೆಡಿಸಿ ತಿರುಮಲೆಯ ದೇವರು ಕುಮಾರಸ್ವಾಮಿ ಎಂಬುದಾಗಿಯೂ, ಶಿವನೆಂಬುದಾಗಿಯೂ, ಹರಿಹರ ಮೂರ್ತಿಯೆಂಬುದಾಗಿಯೂ ತಮ್ಮ ಮನಸ್ಸಿಗೆ ಬಂದಂತೆಲ್ಲಾ ಕಥೆ ಕಟ್ಟಿ ನಂಬಿಸಿ ಆ ದಿವ್ಯ ಕ್ಷೇತ್ರವನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸುತ್ತಿರಲು ಆ ದಿವ್ಯ ಕ್ಷೇತ್ರದಲ್ಲಿದ್ದ ಶ್ರೀವೈಷ್ಣವರು ಮಾರ್ಗ ಕಾಣದೆ ರಾಮಾನುಜಾಚಾರ್ಯರನ್ನು ಶ್ರೀರಂಗದಿಂದ ಕರೆಸಿ ಆ ರಾಜನಿಗೆ ನಿಜ ಸ್ಥಿತಿ ಅರಿವಾಗುವಂತೆ ಮಾಡಿ ಮತ್ತೆ ಸ್ವಾಮಿಗೆ ಶಂಖ, ಚಕ್ರಗಳನ್ನು ಧಾರಣ ಮಾಡಿಸಿ ಶ್ರೀವೈಷ್ಣವ ವಿಗ್ರಹವಾಗುವಂತೆ ಏರ್ಪಡಿಸಿದರು ಎಂಬ ವಿವರಣೆ "ಕೋವಿಲೊಳುಗು" ಎನ್ನುವ ಪುಸ್ತಕದಲ್ಲಿ ವಿದಿತವಾಗಿದೆ. ಇದು ಸ್ವಲ್ಪ ವಿಚಿತ್ರವ್ರೂ, ಉತ್ಪ್ರೇಕ್ಷೆಯಿಂದ ಕೂಡಿರುವುದು ಎನಿಸಿದರೂ ಕೂಡ ಇದರಲ್ಲಿ ಸ್ವಲ್ಪವಾದರೂ ಸತ್ಯಾಂಶ ಇರಲೇಬೇಕು ಎನಿಸುತ್ತದೆ. ತೊಂಡಮಾನನ ಕಾಲ ಇಲ್ಲಿಯೂ ಅಸ್ಪಷ್ಟವಾಗಿಯೇ ಉಳಿಯುತ್ತದೆ. ಅಂದರೆ ಆಳ್ವಾರ್‌ಗಳ ಕಾಲದ ನಂತರವೇ ತೊಂಡಮಾನನು ಇದ್ದದ್ದು? ಮತ್ತೆ ಶ್ರೀನಿವಾಸನು ಮದುವೆ ಮಾಡಿಕೊಂಡ ನಂತರ ತಕ್ಷಣವೇ ತಾನು ಗೃಹಸ್ಥನಾಗಿರುವುದರಿಂದ ತನಗೆ ಒಂದು ಆಲಯ ಬೇಕಾಗಿದೆ ಎಂದು ಬೇಡಿದನೆಂದು ಸೀತಾಪತಿಯವರ ವಿಚಾರಧಾರೆಯಲ್ಲಿ ತಿಳಿದು ಬರು

ವುದು ಉತ್ಪ್ರೇಕ್ಷೆಯಾಗುವುದಲ್ಲವೆ. ಶ್ರೀವೆಂಕಟೇಶ ಮಹಾತ್ಮ್ಯೆ ಆಳ್ವಾರ್ ಕಾಲಕ್ಕೆ ಈಚಿನದೇ?ಎಲ್ಲವೂ ಗೊಂದಲಮಯ ವಾಗುತ್ತದೆ. ಅಂತು ಒಂದು ವಿಚಾರ ಸ್ಪಷ್ಟ. ತಿರುಪತಿಯ ಸುತ್ತ ಮುತ್ತಲಿನ ಶೈವರು ಈ ವಿಗ್ರಹದ ಶಂಖ, ಚಕ್ರ ಮತ್ತು ಕೈಗಳಿಗೆ ಭಂಗವನ್ನು ಉಂಟು ಮಾಡಿರಬೇಕು. ಅದನ್ನು ಮತ್ತೆ ರಾಮಾನುಜರು ಪ್ರಯಾಸದಿಂದ ಸರಿಪಡಿಸಿ ವಿಷ್ಣು ವಿಗ್ರಹವನ್ನಾಗಿ ಮತ್ತೆ ಪರಿವರ್ತಿಸಿರಬೇಕು ಎಂದೆನಿಸುತ್ತದೆ. ಆದ್ದರಿಂದಲೇ ಈ ಶಂಖ,ಚಕ್ರಗಳನ್ನು ಕಳಚುವುದಿಲ್ಲ ಎಂದು ಊಹಿಸಬೇಕಾಗುತ್ತದೆ. ದೇವರು ಛಿನ್ನ ಹಸ್ತನಾಗಿದ್ದಾನೆಯೋ ಏನೋ ಹೇಳುವವರಾರು?

ಕಟಿಹಸ್ತನಾದ ಸ್ವಾಮಿಯನ್ನು ಸುಬ್ರಹ್ಮಣ್ಯನೆನ್ನುತ್ತಾರೆ. ಆದರೆ ನವಿಲು ಮತ್ತು ಸ್ಪಷ್ಟವಾದ ಶೂಲ ಇವುಗಳು ಇಲ್ಲದಿರುವುದು ಸುಬ್ರಹ್ಮಣ್ಯನೆಂದು ಸಿದ್ಧಪಡಿಸಲು ಅಸಾಧ್ಯವಾಗಿದೆ.

ಹಾಗಾದರೆ ಈ ವಿಗ್ರಹ ಯಾವುದು? ವಿಷ್ಣುವೂ ಅಲ್ಲ, ಶಿವನೂ ಅಲ್ಲ, ಸುಬ್ರಹ್ಮಣ್ಯನೂ ಅಲ್ಲ ಎಂದ ಮೇಲೆ ಹೇಗೆ ತೀರ್ಮಾನಿಸುವುದು? ಇದರ ತಲೆಗೂದಲು ಕತ್ತಿನವರೆಗೂ ಹಬ್ಬಿದೆ. ನಡುಪಟ್ಟಿ ನಾಗಾಭರಣವಿದ್ದೂ ನಡುವಿಗೆ ಕತ್ತಿಯೊಂದುತೂಗಲ್ಪಟ್ಟಿದೆ, ಎಂದಾಗ ಅದು ಕ್ಷತ್ರಿಯನೋರ್ವನ ವಿಗ್ರಹವೆಂದು ಏತಕ್ಕೆ ಪರಿಗಣಿಸಬಾರದು ಎನ್ನುವ ವಾದವೂ ಇಲ್ಲದಿಲ್ಲ, ಇದಕ್ಕೆ ಎರಡು ಕೈಗಳು ಸ್ಪಷ್ಟವಿದ್ದು ಎರಡು ಕೈಗಳು ಸ್ಪಷ್ಟವಿಲ್ಲದಿರುವುದೂ ಇಂಬುದು ಗೊತ್ತಾಗುತ್ತದೆ ಎನ್ನಬಹುದು. ವೆಂಕಟೇಶ್ವರನ ಚಿತ್ರವನ್ನು ಗಮನವಿಟ್ಟು ನೋಡಿದರೆ ಶಂಖ ಚಕ್ರ ಧರಿಸಿರುವ ಕೈಗಳು ಸರಿಯಾಗಿ ಗೋಚರಗೊಳ್ಳುವುದೇ ಇಲ್ಲ. ಈ ಎರಡು ಕೈಗಳು ಸ್ವಾಭಾವಿಕವಿಲ್ಲದ್ದು ದೈವತ್ವಕ್ಕೆ ಆ ವಿಗ್ರಹವನ್ನು ಏರಿಸಿರುವುದರಿಂದ ನಂತರ ಸೃಷ್ಟಿಸಲ್ಪಟ್ಟಿತೋ ಎಂಬ ಸಮಸ್ಯೆಗೆ ಎಡೆಗೊಡುತ್ತದೆ.

ಆದರೆ ನಂಬಿಕೆಗೂ ನಾವು ಬೆಲೆ ಕೊಡಬೇಕಾಗುತ್ತದೆ. ಈ ವಿಗ್ರಹ ಜನರ ಅಭೀಷ್ಟವನ್ನು ಪೂರೈಸುತ್ತಿದೆ. ಕೃಪೆಯನ್ನು ನೀಡಿ ಆದರಗಳಿಸಿದೆ, ಗಳಿಸುತ್ತಿದೆ ; ಜನರಿಂದ ಪೂಜೆಗೊಳ್ಳುತ್ತಿದೆ. ಜಾತಿ ಮತ ಭೇದವಿಲ್ಲದೆ ಭಕ್ತರಿಂದ ಓಲೈಸಿಕೊಳ್ಳುತ್ತಿದೆ, ನಮ್ಮ ದೇವರು ಎನ್ನುವ ಆತ್ಮೀಯ ಭಾವವನ್ನು ಒಳಗೊಂಡಿದೆ. ದಿನೇ ದಿನೇ ಭಕ್ತಾದಿಗಳು ಹೆಚ್ಚುತ್ತಿದ್ದಾರೆ. ಈ ವೈಭವವಂತೂ ಯಾವ ದೇವರಿಗುಂಟು;ಯಾವ ದೇವರಿಗೆ ಇಲ್ಲ.ಸ್ತೋತ್ರ, ಸಾಹಿತ್ಯ, ಸಂಗೀತ,ವೇದ,ವೇದಾಂತ ಎಲ್ಲದರ ಆಧಾರದಿಂದಲೂ ಪರಮ ಭೋಗ್ಯಭಾಜನನಾಗಿ ಭೂಲೋಕ ವೈಕುಂಠವನ್ನಾಗಿ ಮಾಡಿರುವ ಈ ಮೂರ್ತಿಯನ್ನು ಕ್ಷುಲ್ಲಕವಾಗಿ ನಾವು ತಾರ್ಕಿಕ ವಾತಾವರಣಕ್ಕೆ ಎಳೆಯುತ್ತಾ ಕಚ್ಚಾಡುವ ಪ್ರಮೇಯವಿಲ್ಲ.ಇದನ್ನೇ ಸೀತಾಪತಿಯವರು ಕೂಡ ತೀರ್ಮಾನವಾಗಿ ಹೇಳಿರುವರು. ಅವನು ಎಲ್ಲರನ್ನೂ ಎಂದೆಂದಿಗೂ ಕೃಪೆ ಮಾಡುತ್ತಾ ಬಾಳಲಿ ಎಂದು ನಾವೂ ಮಂಗಳಾಶಾಸನ ಮಾಡಿ ಈ ಕ್ಷುಣ್ಣ ಭಾವನೆಗಳನ್ನು ಕ್ಷುಲ್ಲಕ ಜನರ ಪಾಲಿಗೇ ಬಿಟ್ಟು ಮುಂದುವರೆಯೋಣವಲ್ಲವೆ?


"ಅವರವರ್ ತಾಮ್ ತಾಮ್ ಅರಿಂದ ವಾರೇತ್ತಿ ಇವರಿವರ್ ಎಂಬೆರು ಮಾನೆನ್ರು" ಎನ್ನುವ ಆಳ್ವಾರ್ ಮಾತು ಒಪ್ಪತಕ್ಕಂತಹುದು!

ಈ ವೇಂಗಡ ಎನ್ನುವ ಪದವಾದರೂ ಹೇಗೆ ಬಂದಿರಬಹುದು ಎನ್ನುವುದು ಜಿಜ್ಞಾಸೆಯ ವಿಷಯ. ಶ್ರೀ ರಾಯರೇನೋ ಋಗ್ವೇದ ಮಂತ್ರದಲ್ಲಿ 'ವಿಕಟ' ಎಂಬ ಪ್ರಯೋಗವನ್ನು ತೋರಿಸಿ ಅದರಿಂದ 'ವೇಂಕಟ' ಎಂಬ ಅಪಭ್ರಂಶವಾಗಿ 'ವೇಂಗಡ' ವಾಗಿದೆ ಎನ್ನುತ್ತಾರೆ. ವಿಕುಂಠ ಎನ್ನುವುದರ ರೂಪಾಂತರ ವೈಕುಂಠವಾಗಿ ಅದು ವೇಂಗಡವೆಂದು ಪರಿವರ್ತನೆಗೊಂಡಿರಲೂ ಸಾಧ್ಯ ಎನುತ್ತಾರೆ. ವೇಂಗಡ ಎನ್ನುವ ಪದಕ್ಕೆ 'ಸುಡುಗಾಡು' ಎನ್ನುವ ಅರ್ಥವ್ಯಾಪ್ತಿಯನ್ನೂ ತೋರಿಸಿದ್ದಾರೆ. ಆದರೆ 'ವೇಂಗಡ' ಎನ್ನುವ ಪದವು ಹೇಗೆ ಮೂಲರೂಪವಾಗಿಯೇ ಇದ್ದು ಅರ್ಥವ್ಯಾಪ್ತಿಗೊಂಡಿದೆ ಎನ್ನುವುದನ್ನು ವಿವರಿಸಿಲ್ಲ. ಒಂದು ವೇಳೆ 'ವೈಕುಂಠ'ಎನ್ನುವುದರ ತಮಿಳು ಸಮಾನ ಪದವೊಂದರ ಅಪಭ್ರಂಶ 'ವೇಂಗಡವೋ'ಎನ್ನುವ ಅನುಮಾನವೂ ಬಾರದೇ ಇರುವುದಿಲ್ಲ. ಏತಕ್ಕೆಂದರೆ ವೈಕುಂಠಕ್ಕೆ ತಮಿಳಿನಲ್ಲಿ 'ವೈಕುಂತಂ' ಎಂದೇ ಇಂದಿಗೂ ಹೇಳುತ್ತಾರೆ. ಈ ವೈಕುಂತಂ ವೇಂಗಡವಾಗುವುದಕ್ಕೆ ಸಾಧ್ಯವೇ ಎಂದು ತಮಿಳು ಭಾಷಾ ಬಿಜ್ಞರು ತಿಳಿಸಬೇಕಾದ ವಿಚಾರ. ನನಗೆ ತಿಳಿದಂತೆ ಕೆಲವು ಜಿಜ್ಞಾಸೆಗಳನ್ನು ನಾನೂ ಈ ಸಂದರ್ಭದಲ್ಲಿ ವಾಚಕರ ಮುಂದಿಡಲು ಬಯಸುತ್ತೇನೆ. ಇವುಗಳಲ್ಲಿ ಸತ್ಯಾಂಶಗಳೂ ಇರಬಹುದೆಂದು ತೋರುತ್ತದೆ. ಅದರ ಸಾಧ್ಯಾಸಾಧ್ಯತೆಗಳನ್ನು ವಾಚಕರು ವಿಮರ್ಶಿಸಲಿ.

ವೈಕುಂಠ-ವಿಕುಂಠ-ವಿಕಟ-ವೇಂಕಟ-ವೇಂಗಡ ಎಂದು ವೇಂಗಡದ ವ್ಯುತ್ಪತ್ತಿ ಬಂದಿರಲಿಕ್ಕೂ ಸಾಕು. ವೈಕುಂಠ -ವೈಕುಂತಂ-ವೇಂಗಡಂ ಎಂದು ಈ ವೈಕುಂಠ ಪದವು ನೇರವಾಗಿ ತಮಿಳಿಗೇ ಬಂದಿರಲೂ ಸಾಧ್ಯ. ಈ ಪರ್ವತಾಗ್ರವು ಗಗನಚುಂಬಿಯಾಗಿದ್ದು ಇದನ್ನೇ ಜನ ಒಂದು ಕಾಲಕ್ಕೆ ವೈಕುಂಠವೆಂದು ಭಾವಿಸಿ ಹಾಗೆ ಕರೆದಿರತಕ್ಕ ಸಂಭವವೂ ಉಂಟು- ಗ್ರೀಕರಲ್ಲಿ ಒಲಿಂಪಸ್ ಪರ್ವತದ ಅಗ್ರದಲ್ಲಿ ಜೂಸ್ ದೇವನು ನೆಲಸಿದ್ದಂತೆಯೂ, ಅರ್ಜುನ ಪರಿವಾರ ದೇವತೆಗಳೆಲ್ಲಾ ಅಲ್ಲಿಂದಲೇ ಬರುತ್ತಿದ್ದುದಾಗಿಯೂ, ಗ್ರೀಕರು ಒಂದು ಕಾಲಕ್ಕೆ ಆ ಪರ್ವತಕ್ಕೆ ದೇವಲೋಕವೆಂದು ತೀರ್ಮಾನವಿತ್ತಿದ್ದಂತೆ! ಹಿಮಾಲಯ ಪರ್ವತಾಗ್ರವನ್ನೇ ನಾವು ಶಿವನ ನೆಲೆಯಾದ ಕೈಲಾಸವೆಂಬುದಾಗಿಯೂ ದೇವತೆಗಳ ನೆಲೆ ಎಂಬುದಾಗಿಯೂ ನಂಬಿಕೆ ಇಟ್ಟುಕೊಂಡಿರುವಂತೆ.!



- ಮುಂದುವರೆಯುತ್ತದೆ.



# ಶ್ರೀವೆಂಕಟಾಚಲ ಮಹಾತ್ಮೆ

ತೆಲುಗು ಮೂಲ - ಆಚಾರ್ಯ ಕೆ. ಸರ್ವೋತ್ತಮ ರಾವ್,
ಅನುವಾದ - ಶ್ರೀಮತಿ. ಎನ್. ಪಾರ್ವತಿ



ಹಿಂದಿನ ಸಂಚಿಕೆಯ ನಂತರ.....

ಸ್ವಾಮಿಯವರು ವೆಂಕಟಾಚಲದಲ್ಲಿ ಶ್ರೀದೇವಿಯೊಂದಿಗೆ ಕ್ರೀಡಾದ್ರಿ ಪರಿಸರದಲ್ಲಿ ವಿಹರಿಸುತ್ತಿರುವಾಗ ಕೆಲವು ತಪಸ್ವಿ ದಂಪತಿಗಳು ದೂರಪ್ರಾಂತದಿಂದ ಆ ಪ್ರದೇಶಕ್ಕೆ ಬಂದರು. ಅಲ್ಲಿನ ಪರಿಸರಕ್ಕೆ ಪರವಶರಾದರು. ಬಣ್ಣ ಬಣ್ಣದ ಹೂಗಳು, ಆಕರ್ಷಕವಾದ ವೃಕ್ಷಗಳು. ನಳ ನಳಿಸುತ್ತಿರುವ ಬಳ್ಳಿಗಳು. ಆಕಾಶಕ್ಕಿಂತಲೂ ಎತ್ತರವಾದ ಗಿಡಮರಗಳು, ಅಷ್ಟೇ ಅಲ್ಲದೆ ಆ ಪ್ರದೇಶದಲ್ಲಿ ಲಭಿಸುತ್ತಿದ್ದ ಗೆಡ್ಡೆ, ಗೆಣಸು ಫಲಾದಿಗಳ ಸಮೃದ್ಧಿಯನ್ನು ಅವಲೋಕಿಸಿ ತಪಸ್ವಿಗಳು ನಿಬ್ಬೆರಗಾದರು.

ಆಹಾ! ಈ ಪರ್ವತ ಎಷ್ಟು ರಮಣೀಯವಾಗಿದೆ ಅಲ್ಲವೇ! ಈ ಪ್ರದೇಶವನ್ನು ನೋಡಿದ ಮೇಲೆ ಮತ್ತೆಲ್ಲಿಗೂ ಹೋಗಬಾರದೆಂದು ಮನಸ್ಸು ಮಾಡಿದರು. ಅದಕ್ಕಾಗಿ ಅಗತ್ಯವಾದ ಪರ್ಣಶಾಲಾದಿಗಳ ನಿರ್ಮಾಣಗಳನ್ನು ಕೂಡ ತುರ್ತಾಗಿ ಮಾಡಿದರು. ದಿನಗಳು ಕಳೆಯುತ್ತಿದ್ದಂತೆ ತಮಗೆ ಆಶ್ರಯ ನೀಡಿದ ಇಂತಹ ಪವಿತ್ರ ಭೂಮಿಯಲ್ಲಿ ಸರ್ವಲೋಕ ಸಂಕ್ಷೇಮಕ್ಕಾಗಿ ಒಂದು ಯಾಗವನ್ನು ಮಾಡಲು ನಿರ್ಣಯಿಸಿದರು. ಅದಕ್ಕೆ ಅಗತ್ಯವಾಗಿರುವ ಸಿದ್ಧತೆಗಳನ್ನು ಸಹ ಪ್ರಾರಂಭಿಸಿದರು.

ಈ ಎಲ್ಲ ಸಂಗತಿಗಳನ್ನು ವೀಕ್ಷಿಸುತ್ತಿದ್ದ ಶ್ರೀಹರಿಯು ಸಾಗರ ತನಯೆಯನ್ನು ಕುರಿತು "ಲಕ್ಷ್ಮೀದೇವಿ! ಈ ಬೆಟ್ಟದಲ್ಲಿ ನಾವು ಎಷ್ಟೋ ಬಾರಿ ವಿಹರಿಸಿದ್ದೇವೆ. ಇಲ್ಲಿಯ ಪ್ರಕೃತಿ ರಮಣೀಯ ಪರಿಸರಕ್ಕೆ ವಶರಾಗಿದ್ದೇವೆ. ಆದರೆ ಜನ ಸಂಚಾರ ಇಲ್ಲದಿರುವ ಪ್ರದೇಶದಲ್ಲಿ ತಾಪಸಿ ಮುನಿಗಳಾರೋ ಯಾಗ ಮಾಡಲು ಸಿದ್ಧರಾಗಿರುವಂತಿದೆ. ಆ ಪ್ರದೇಶಕ್ಕೆ ಹೋಗಿ ನಾವು ನೋಡೋಣವೇ? ಅದಲ್ಲದೆ ನಮ್ಮ ಸಹಜವೇಷವನ್ನು ತೊರೆದು ಅನ್ಯವೇಷದಿಂದ ಅಲ್ಲಿಗೆ ಹೋಗೋಣ. ನಾನು ಬೇಟೆಗಾರನ ವೇಶವನ್ನು ಧರಿಸುತ್ತೇನೆ. ನೀನು ಕೂಡ ಅದೇ ವೇಷದಲ್ಲಿ ನನ್ನನ್ನು ಅನುಸರಿಸು. ನಾವಿಬ್ಬರೂ ಯಾಗ ಭೂಮಿಯನ್ನೆಲ್ಲಾ ಸುತ್ತಿ ಬರೋಣ, ಮತ್ತೊಂದು ವಿಷಯ, ಯಾಗದ ನಂತರ ಬ್ರಾಹ್ಮಣರು ಅಗ್ನಿ ಕುಂಡದಲ್ಲಿ ಹವಿಸ್ಸನ್ನು ಅರ್ಪಿಸುವ ವೇಳೆ ನಾನೇ ಸ್ವಸ್ವರೂಪದಲ್ಲಿ ಆ ಹವಿಸ್ಸನ್ನು ಸ್ವೀಕರಿಸುತ್ತೇನೆ. ನೀನು ಆ ದೃಶ್ಯವನ್ನು ನೋಡುವವಳಾಗು" ಎಂದನು. ಹರಿ ಆದೇಶಿಸಿದಂತೆ ಶ್ರೀ ಸತಿಯು ವಿಶ್ವ ಮೋಹಿನಿದೇವಿ ಆಕಾರ ಸ್ವರೂಪಿಣಿ ಆದಳು. ಹಾಗೆಯೇ ಹರಿಯು ಎಲ್ಲರನ್ನೂ ಆಕರ್ಷಿಸುವ ಬೇಟೆಗಾರನ ವೇಷಧಾರಿಯಾದನು. ಶ್ರೀದೇವಿಯು ಹರಿಯನ್ನು ಹಿಂಬಾಲಿಸಿದಳು. ಇಬ್ಬರೂ ವಿಲಾಸದಿಂದ ಸಂಚರಿಸುತ್ತಿದ್ದರು. ಯಾಗ ಭೂಮಿಯಲ್ಲಿನ ತಪಸ್ವಿಗಳು ತದೇಕ ಚಿತ್ತದಿಂದ ಆ ದಂಪತಿಗಳನ್ನು ನೋಡಿ ದರು.

"ಯಾರು ನೀವು? ಈ ಯಾಗಭೂಮಿಯಲ್ಲಿ ಏಕೆ ಸಂಚರಿಸುತ್ತಿರುವಿರಿ?" ಈ ಸುಂದರನು ವಸಂತ ಮಾಧವನಾ? ನಳನಾ? ಜಯಂತನಾ? ದೇವೇಂದ್ರನಾ? ಚಂದ್ರನಾ ಅಥವಾ ಈಶ್ವರನಾ? ಆದರೂ ಇವರು ನಿರ್ಜನವಾದ ಭಯಂಕರ ಕ್ರೀಡಾರಣ್ಯದಲ್ಲಿ ಏಕೆ ಬಂದಿದ್ದಾರೆ? ಇವರು ಬ್ರಾಹ್ಮಣರೇ? ಎದೆಯ ಮೇಲೆ ಯಜ್ಞೋಪವೀತವಿದೆ. ಇಲ್ಲ, ಕ್ಷತ್ರಿಯರ ಹಾಗೆ ಇದ್ದಾರೆ. ಗಂಡಸಿನ ಕೈಯಲ್ಲಿ ದಿವ್ಯ ಆಯುಧ ಇದೆ. ಇವರ ವೇಷ ಮಾತ್ರ ಬೇಟೆಗಾರನಂತೆ ಇರುವುದು ವಿಚಿತ್ರವಾಗಿದೆ ಎಂದು ತಪಸ್ವಿಗಳು ತಮ್ಮ ತಮ್ಮಲ್ಲಿಯೇ ಮಾತನಾಡಿಕೊಂಡರು. ಇದ್ಯಾವುದನ್ನೂ ಗಮನಿಸದೇ, ಬೇಟೆಗಾರ ದಂಪತಿಗಳು ತಪಸ್ವಿಗಳ ಗುಂಪುಗಳಲ್ಲಿ ಒಬ್ಬರಾಗಿ ಸೇರಿ ಹೋಗಿ,

ಒಂದು ಮೂಲೆಯಲ್ಲಿ ಕುಳಿತು ವಿಲಾಸದಿಂದ ತಾಂಬೂಲ ಸೇವನೆಯನ್ನು ಮಾಡುತ್ತಿದ್ದರು. ಆ ದಂಪತಿಗಳು ಲೀಲಿಯಿಂದ ಸೇವಿಸುತ್ತಿದ್ದ ಕಸ್ತೂರಿಭರಿತ ತಾಂಬೂಲದ ಸುಗಂಧದಿಂದ ತಪಸ್ವಿಗಳು ಆಶ್ಚರ್ಯಚಕಿತರಾದರು. ಆದರೂ ಸ್ವಲ್ಪ ಸಮಯದ ನಂತರ ಸಮಾಧಾನಿಸಿಕೊಂಡು ಆ ದಂಪತಿಗಳನ್ನು ಉದ್ದೇಶಿಸಿ "ಮಹಾರಾಜ! ನಿಮ್ಮ ಊರು ಯಾವುದು? ನಿಮ್ಮ ಹೆಸರೇನು? ನಿಮ್ಮ ತಂದೆ ತಾಯಿಗಳಾರು? ಈ ನಿರ್ಜನ ಪ್ರದೇಶದಲ್ಲಿ ಏಕೆ ಬಂದಿದ್ದೀರಿ? ನೀವು ತಿರುಗುವ ಸ್ಥಳ ಇದು ಅಲ್ಲ? ನೋಡಿ. ಇಲ್ಲಿ ತಪಸ್ವಿಗಳು ಒಂದು ಯಾಗವನ್ನು ಮಾಡುತ್ತಿದ್ದಾರೆ. ಆದರೂ ನೀವು ಬಂದಿರುವುದು,ಇಲ್ಲಿ ನಾವು ನಿಮ್ಮನ್ನು ನೋಡುತ್ತಿರುವುದು ನಮ್ಮ ಅದೃಷ್ಟವೇ ಸರಿ, ನೀವು ನಮ್ಮಲ್ಲಿಯೇ ಇರಿ. ಆದರೆ ಒಂದು ಸಣ್ಣ ಚಿನ್ನಹ. ನಮ್ಮ ಯಾಗವನ್ನು ಧ್ವಂಸ ಮಾಡಲು ಎಷ್ಟೋ ಜನರು ಬರಬಹುದು. ನೀವು ನಮಗೆ ಸಹಾಯಕರಾಗಿ ಇದ್ದು. ಯಾಗ ನಿರ್ವಹಣೆಯಲ್ಲಿ ಅಡ್ಡ ಬರುವ ರಾಕ್ಷಸರಿಂದ ಯಾಗ ವನ್ನು ಮತ್ತು ನಮ್ಮನ್ನು ರಕ್ಷಿಸಿ.ತಪಸ್ವಿಗಳಿಗೆ ರಾಜರೇ ಅಲ್ಲವೇ ಸದಾ ರಕ್ಷಕರು. ಆದರೂ ನಾವು ಸರ್ವಲೋಕಹಿತಕ್ಕಾಗಿ ಧರ್ಮಯಾಗವನ್ನು ಮಾಡುತ್ತಿದ್ದೇವೆ.ಈಯಾಗಕ್ಕೆ ನೀವೇ ನಿರ್ವಾಹಕರಾಗಿರಿ" ಎಂದು ಸವಿನಯವಾಗಿ ಪ್ರಾರ್ಥಿಸಿದರು.

ತಪಸ್ಸಿಗಳ ಮಾತುಗಳನ್ನು ಕೇಳಿದ ಚಕ್ರಿಯು ನಗುತ್ತಾ "ತಪಸ್ವಿಗಳೇ ನಾನು ಬ್ರಾಹ್ಮಣನೂ ಅಲ್ಲ, ರಾಜನೂ ಅಲ್ಲ, ಇನ್ನು ಹೇಳಬೇಕೆಂದರೆ ವೈಶ್ಯನೂ ಅಲ್ಲ. ನನಗೆ ಜಾತಿ ಎನ್ನುವುದೇ ಇಲ್ಲ. ತಂದೆ ತಾಯಿಗಳು ಯಾರು ಎಂದು ಕೇಳಿದ್ದೀರಲ್ಲವೇ? ನನಗೆ ತಂದೆ ತಾಯಿಗಳು ಇಲ್ಲ. ನನಗೆ ಒಂದೆಡೆ ನಿವಾಸ ಎಂಬುದು ಇಲ್ಲ. "ಎಲ್ಲಾ ಸ್ಥಳದಲ್ಲಿಯೂ ಇರುತ್ತೇನೆ.ಎಲ್ಲಾ ರೂಪ ದಲ್ಲಿಯೂ ಇರುತ್ತೇನೆ. ಒಂದೇ ಹೆಸರು ಇಲ್ಲದೆ ನನಗೆ ವಯಸ್ಸಿ ಗನುಗುಣವಾದ ಬ್ರಹ್ಮಚರ್ಯಾದಿ ಆಶ್ರಮಗಳು ಕೂಡ ಇಲ್ಲ." ಎಂದು ಹೇಳುತ್ತಿದ್ದಂತೆ ಮುನಿಗಳು ಆಶ್ಚರ್ಯಚಕಿತರಾದರು.

"ಅಯ್ಯಾ! ನೀವು ಹೇಳುತ್ತಿರುವುದು ಅರ್ಥ ಆಗುತ್ತಿಲ್ಲ. ಆದರೂ ನಿಮ್ಮೊಂದಿಗೆ ಕುಳಿತಿರುವ ಆ ತಾಯಿ ಯಾರು?" ಎಂದು ಪ್ರಶ್ನಿಸಿದರು.

ಓಹೋ! ಹಾಗೋ,ನನ್ನ ಪಕ್ಕ ಕುಳಿತಿರುವ ಆಕೆಯ ಕುರಿತು ವಿಚಾರಿಸುತ್ತಿರುವಿರಾ. ಈಗಾಗಲೇ ನನಗೆ ಯಾರು ಇಲ್ಲ ಎಂದು ಹೇಳಿದ್ದೇನೆ ಅಲ್ಲವೇ, ನಾನು ಒಂಟಿಯಾಗಿ ವಿಹರಿಸು ತ್ತಿದ್ದಾಗ ಈಕೆಯು ಅಡವಿಯಿಂದ ವೈಯ್ಯಾರವಾಗಿ ನಡೆದು ಬಂದು ಮೋಹಿನಿಯಾಗಿ ನನ್ನನ್ನು ಹಿಡಿದಳು. ಹೋಗಲಿ ಬಿಡು ಎಂದು ಆಕೆಯೊಂದಿಗೆ ವಿಹರಿಸುತ್ತಿದ್ದಾಗ ನಿಮ್ಮ ಯಾಗಶಾಲೆ ಕಾಣಿಸಿತು. ನಿಮ್ಮಂತಹ ಮಹಾಮಹಿಮರನ್ನು ಹತ್ತಿರದಿಂದ ನೋಡಲೆಂದು ಬಂದಿದ್ದೇವೆ. ಆದರೂ ತಿಳಿಯದೆ ಕೇಳುತ್ತಿದ್ದೇನೆ. ಏನು ತಿಳಿಯ ಬೇಡಿ, ನಿಮ್ಮಲ್ಲಿ,ಕೆಲವರು ಒಂದು ಕಡೆ ಕುಳಿತು ಸುಶ್ರಾವ್ಯವಾಗಿ ಹಾಡುತ್ತಿರುವಿರಿ. ಆ ಹಾಡು ಯಾವುದು? ಅದು ಯಾವ ವಿಧದ ಸಂಗೀತ? ಎಂದಿಗೂ ಇಂಥ ಸಂಗೀತವನ್ನು ನಾವು ಕೇಳಿಲ್ಲ. ಆದರೂ ಕೆಲವರು ದೇವತೆಗಳನ್ನು ಏರು ದನಿ ಯಿಂದ ಕರೆಯುತ್ತಿರುವಿರಿ. ಏಕೆ? ಆ ಪ್ರದೇಶದಲ್ಲೆಲ್ಲ ಅಗ್ನಿಕುಂಡ ಗಳನ್ನೇ ಏಕೆ ಇಟ್ಟಿ ರುವಿರಿ? ಇಲ್ಲಿ ಕೇವಲ ಗುಡ್ಡ ಕಾಡು ಜನರೇ ಕಾಣಿಸುತ್ತಿರುವರೇಕೆ? ಯೂಪ ಸ್ತಂಭಕ್ಕೇ ಪ್ರಾಣಿಗಳನ್ನೇಕೆ ಕಟ್ಟಿರುವಿರಿ? ಎಲ್ಲ ವಿಚಿತ್ರವಾಗಿದೆ" ಎಂದು ಒಂದಾದ ನಂತರ ಒಂದು ಪ್ರಶ್ನೆಗಳನ್ನು ಕೇಳುತ್ತಿದ್ದನು.

ಹೀಗೆ ಅಗ್ನಿ ಕುಂಡದ ಹತ್ತಿರ ಇರುವ ವ್ಯಕ್ತಿಗಳು ನೂತನ ವಾಗಿ ಬಂದಿರುವ ದಂಪತಿಗಳೊಂದಿಗೆ ಮಾತು ಬೆಳೆಸುತ್ತಿರುವು ದನ್ನು ನೋಡಿ ತಪಸ್ವಿಗಳು "ಬನ್ನಿ ಬನ್ನಿ ಸಮಯವಾಗುತ್ತಿದೆ. "ವಪ" ಹೋಮವನ್ನು ಮಾಡಬೇಕು. ಆಹುತಿ ಆದ ನಂತರ ದಂಪತಿಗಳ ಹತ್ತಿರ ಬಂದು ಶಾಂತವಾಗಿ ಹೇಳುವಿರಾಗಿ" ಎಂದು ಆದೇಶಿಸಿದರು.

ತಪಸ್ವಿಗಳು ತಕ್ಷಣವೇ ಬೇಗ ಬೇಗನೇ ಅಗ್ನಿಕುಂಡವನ್ನು ಸಿದ್ಧಪಡಿಸಿ ತೆರಳಿದರು.ವೇದೋಕ್ತ ಮಂತ್ರಗಳೊಂದಿಗೆ ವಪವನ್ನು ಅರ್ಪಿಸುತ್ತಿರುವಾಗ ಶ್ರೀಹರಿಯು ಶಂಖ, ಚಕ್ರಾದಿಗಳಿಂದ ಸಾಕ್ಷಾ ತ್ಕರಿಸಿ ತಪಸ್ವಿಗಳು ಅರ್ಪಿಸಿದ ವಪವನ್ನು ಸ್ವೀಕರಿಸಿದನು. ಈ ದೃಶ್ಯವನ್ನು ನೋಡಿದ ತಪಸ್ವಿಗಳು ನಿಬ್ಬೆರಗಾದರು.ಬೊಂಬೆ ಗಳಂತೆ ನಿಶ್ಚಲವಾದರು.

ಸ್ವಾಮಿಯು ಶ್ರೀವತ್ಸಲಾಂಛನದೊಂದಿಗೆ.ದಿವ್ಯರಥಾ ಭರಣಗಳೊಂದಿಗೆ, ಸಹಸ್ರಕೋಟಿ ಸೂರ್ಯಕಾಂತಿಗಳೊಂದಿಗೆ ಪರಿಮಳಿಸುವ ಅದರ ಬಿಂಬಗಳೊಂದಿಗೆ ಕರುಣಾ ಕಟಾಕ್ಷಗಳನ್ನು ಪ್ರಸರಿಸುತ್ತಾ "ತಪಸ್ವಿಗಳೇ, ನೀವು ಸರ್ವಲೋಕಸಂಕ್ಷೇಮ ಕ್ಕಾಗಿ ಪ್ರಾರಂಭಿಸಿರುವ ಯಾಗ ಸಂಕಲ್ಪದಿಂದ ನಾನು ಪ್ರಸನ್ನ ನಾಗಿದ್ದೇನೆ."ಎನ್ನುತ್ತಾ ರಮಾದೇವಿಯೊಂದಿಗೆ ಅಂತರ್ಧಾನ ನಾದನು,ತಪಸ್ವಿಗಳು ನಿಬ್ಬೆರಗಾದರು.

"ನಾವು ಧನ್ಯರು, ಪುಣ್ಯವಂತರು. ಎಷ್ಟೋ ಜನರು ಯಾಗ ಗಳನ್ನು ಮಾಡುತ್ತಾರೆ. ಆದರೆ ಯಾವ ಫಲದಾತನೂ ಸ್ವಸ್ವರೂಪ ಪ್ರತ್ಯಕ್ಷನಾಗಿ "ವಪ"ಯನ್ನು ಸ್ವೀಕರಿಸುವುದನ್ನು ಎಲ್ಲಿಯೂ ಕೇಳಿಲ್ಲ. ಅದಲ್ಲದೆ ಶ್ರೀಲಕ್ಷ್ಮಿ ಮಹಾವಿಷ್ಣುವಿನ ರೂಪಗಳನ್ನು ಕಣ್ಣಾರೆ ನೋಡಿದ್ದೇವೆ ಅದಲ್ಲದೆ ಆ ದೇವತೆಗಳೊಂದಿಗೆ ಸ್ವಯಂ ಮಾತ ನಾಡಿದ್ದೇವೆ.ನಮ್ಮ ಜನ್ಮಗಳು ಸಾರ್ಥಕವಾಗಿವೆ.ಯಾರಿಗೂ ಲಭಿಸದ ಸ್ವಾಮಿ ಸಾಕ್ಷಾತ್ಕಾರವು ನಮಗೆ ಲಭಿಸಿದೆ. ಆದರೆ "ವಪ" ಹೋಮದೊಂದಿಗೆ ಯಾಗ ನಿಂತು ಹೋಗಬಾರದು. ಅಂತ್ಯದಲ್ಲಿ ಅವಬೃಥಸ್ನಾನದೊಂದಿಗೆ ಯಾಗವನ್ನು ಪರಿ ಸಮಾಪ್ತಿ" ಗೊಳಿಸಬೇಕು. ಎನ್ನುತ್ತಾ ಆ ಕಾರ್ಯಕ್ರಮವನ್ನು ಸಲಕ್ಷಣವಾಗಿ ಪೂರ್ತಿ ಮಾಡಿದರು, ಎಂದು ಸೂತನು ಶೌನ ಕಾದಿ ಮುನಿಗಳಿಗೆ ಹೇಳಲಾಗಿ ಅನಂತರದ ವೃತ್ತಾಂತವನ್ನು ತಿಳಿಸಬೇಕೆಂದು ಮುನಿಗಳು ಕೋರಿದರು.

- ಮುಂದುವರೆಯುತ್ತದೆ.





## ಜನವರಿ 2024

# ರಾಶಿ ಫಲಗಳು



ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್

**ಮೇಷ**

ಭೂಮಿ ಖರೀದಿ ಅಥವಾ ಭೂ ಆದಾಯ ಅಧಿಕವಾಗಿ ಬರುತ್ತದೆ. ಅನಾವಶ್ಯಕ ಖರ್ಚುಗಳನ್ನು ಕಡಿಮೆ ಮಾಡುವುದು ಉತ್ತಮ. ತಂದೆ ಅಥವಾ ತಂದೆ ಕಡೆಯ ಸಂಬಂಧಿಗಳೊಡನೆ ವಾಗ್ವಾದಗಳು,ಪುಣ್ಯಕ್ಷೇತ್ರ ಸಂದರ್ಶನಗಳು,ಮನೆಯಲ್ಲಿ ಮಂಗಳ ತೋರಣ ಶುಭಪ್ರದ ಆನಂದದಾಯಕವಾದ ಒಕ್ಕೂಟಗಳು ಸಂಭವಿಸಲಿವೆ. ಗೃಹ ವಾತಾವರಣ ಅನುಕೂಲಕರವಾಗಿದೆ.

**ವೃಷಭ**

ರವಿ ಕುಜರು ಈ ತಿಂಗಳಲ್ಲಿ ಸಹಾ ಅಷ್ಟೇನು ಅನುಕೂಲಕರವಾಗಿಲ್ಲ. ರಕ್ತ ಪ್ರಸರಣ. ಅಜೀರ್ಣ ಮೂಲವ್ಯಾಧಿ ಸಮಸ್ಯೆಗಳು ಬರಬಹುದು. ವಾಹನಗಳನ್ನು ನಡೆಸುವಾಗ ಅತೀವ ಜಾಗ್ರತೆ ಅಗತ್ಯ. ಸುಬ್ರಮಣ್ಯ ಆರಾಧನೆ ಮಾಡುವುದರಿಂದ ಅಷ್ಟಮ ಕುಜ ಪ್ರಭಾವದಿಂದ ಹೊರ ಬರಬಹುದು. ಅನಗತ್ಯವಾದ ಖರ್ಚುಗಳಿಗೆ ಕೈ ಹಾಕಿ ನಷ್ಟವಾಗದಂತೆ ಜಾಗ್ರತೆವಹಿಸುವ ಅಗತ್ಯವಿದೆ.ಆದರೆ ಆಕಸ್ಮಿಕ ಧನಲಾಭ ಉಂಟಾಗಲಿದೆ.

**ಮಿಥುನ**

ಜ್ಞಾನವೃದ್ಧಿ ಅನೇಕ ರೀತಿಯಲ್ಲಿ ವ್ಯಾಪಾರ ಪ್ರಯೋಜನಗಳನ್ನು ಹೊಂದುತ್ತಾರೆ. ಬಂಧು ಮಿತ್ರರಿಂದ ಆನಂದದಿಂದಿರುವಿರಿ. ಬಾಹ್ಯ ವಿಹಾರಗಳಿಗೆ ಹಣ ವ್ಯಯಮಾಡುವಿರಿ. ಸಂತಾನ ವಿಷಯಗಳಲ್ಲಿ ಆನಂದವುಂಟಾಗುವುದು. ದೂರ ಪ್ರಯಾಣಗಳನ್ನು ಮಾಡುವಿರಿ. ಆಹ್ಲಾದಕರವಾದ ವಾತಾವರಣವನ್ನು ಅನುಭವಿಸುವಿರಿ.

**ಕರ್ಕಾಟಕ**

ಒಳ್ಳೆಯ ಸಾಮಾಜಿಕ ಜೀವನ ಸಂಗೀತ, ಮೊದಲಾದ ಕಲೆಗಳ ಸೃಜನಾತ್ಮಕ ವಿಷಯಗಳಲ್ಲಿ ಸಮಯವನ್ನು ವ್ಯಯ ಮಾಡುವ ಅವಕಾಶಗಳು ಬಂದು ನಿಮ್ಮ ಅಭಿರುಚಿಗಳನ್ನು ಆಸ್ವಾದಿಸುವಿರಿ. ಅಧಿಕಾರ,ಶಕ್ತಿ, ಶ್ರೇಯಸ್ಸು ಸಮಾಜದಲ್ಲಿ ಗೌರವ ಸ್ಥಾನ ಹಾಗೂ ವಿಲಾಸವಾದ ಜೀವನವುಂಟಾಗಲಿದೆ. ಹಣ ಸಂಬಂಧಿ ಒತ್ತಡವಿಲ್ಲದಿದ್ದರೂ ಕಾರ್ಯಕಲಾಪಗಳ ಒತ್ತಡವು ಶಾರೀರಕ ಒತ್ತಡದೊಂದಿಗೆ ಬೆರೆತು ಜರ್ಜರಿತರಾಗಲಿದ್ದೀರಿ.

**ಸಿಂಹ**

ಶುಕ್ರ ಸಂಚಾರ ಅನುಕೂಲಕರ ಹೆಸರು,ಕೀರ್ತಿಯಿಂದ ಒಳ್ಳೆಯ ಆದಾಯ ಕುಟುಂಬದಲ್ಲಿ ಆನಂದ ಒಳ್ಳೆಯ ಆರೋಗ್ಯ ಮತ್ತು ಭೌತಿಕ ಸುಖಗಳು ಜೀವನ ಸಂಗಾತಿ ಹಾಗೂ ಮಕ್ಕಳೊಂದಿಗೆ ಹೆಚ್ಚು ಕಾಲ ಕಳೆಯಲು ಬಯಸುತ್ತೀರಿ. ನೀವು ಹೊಸ ಸ್ನೇಹಿತರನ್ನು ಸಹಾ ಸಂಪಾದಿಸಿಕೊಳ್ಳುವಿರಿ ರಾಜಕೀಯವಾಗಿ ಹೊಸ ತಿರುವು ಪಡೆದುಕೊಳ್ಳುವಿರಿ. ಶಾರೀರಿಕ ಆರೋಗ್ಯ ಉತ್ತಮ ರೀತಿಯಲ್ಲೇ ಇರುತ್ತದೆ.

**ಕನ್ಯ**

ಮುಖ ಕಳೆಗುಂದಿದಂತಿರುತ್ತದೆ.ಮನೆಯಲ್ಲಿನ ಶುಭಮಂಗಳ ಯೋಗಕ್ಕಾಗಿ ವಿಚಾರ ಮಾಡುವಿರಿ. ಮಗಳ ಮದುವೆಯ ವಿಚಾರಕ್ಕೆ ಪ್ರಾಧಾನ್ಯತೆ ನೀಡುವಿರಿ. ನೂತನ ಗೃಹ ಪ್ರವೇಶ ಮಾಡುವ ಸಂಭವವಿದೆ. ನೂತನ ವಸ್ತು ವಸ್ತ್ರಗಳನ್ನು ಗ್ರಹಿಸುವಿರಿ. ನಿಮಗೆ ಕುಟುಂಬ ಸದಸ್ಯರೊಂದಿಗೆ ವಿನೋದ ಅವಕಾಶಗಳು, ದ್ರವ್ಯಲಾಭಗಳು ಉಂಟಾಗುತ್ತದೆ. ನಾಯಕತ್ವದಿಂದ ಆದಾಯವನ್ನು ಗಳಿಸುವಿರಿ.

**ತುಲಾ**

ಪ್ರಸ್ತುತ ಆರೋಗ್ಯ ಉತ್ತಮವಾಗಿರುತ್ತದೆ. ವ್ಯಾಪಾರಗಳಲ್ಲಿ ಚೆನ್ನಾಗಿ ವಿರಾಜಿಸುವಿರಿ. ನಿಮ್ಮ ಬಂಧುಗಳು, ಕುಟುಂಬ ಸದಸ್ಯರು, ಸ್ನೇಹಿತರು ನಿಮ್ಮ ನಿಲುವನ್ನು ಗುರುತಿಸುತ್ತಾರೆ ಹಾಗೂ ಗೌರವಿಸುತ್ತಾರೆ. ಈ ದಿನಗಳಲ್ಲಿ ನೀವು ಸಾಕಷ್ಟು ಮಾನಸಿಕ ಪ್ರಶಾಂತತೆ ಹಾಗೂ ಉಪಶಮನವನ್ನು ಅನುಭವಿಸುತ್ತೀರಿ. ಅಂದುಕೊಂಡದ್ದನ್ನು ಸಾಧಿಸುವಿರಿ.

**ವೃಶ್ಚಿಕ**

ವಾಕ್ಚಾತುರ್ಯ ಪ್ರದರ್ಶಿಸಿ,ಸ್ಪರ್ಧೆಗಳಲ್ಲಿ ಭಾಗವಹಿಸುವುದು, ಬಹುಮಾನಗಳನ್ನು ಗೆಲ್ಲುವುದು, ಸಮಾಜದಲ್ಲಿ ಆದರದ ಗೌರವಗಳನ್ನು ಪಡೆಯುವುದು ಉಂಟಾಗಲಿದೆ. ವಿನೋದ ಹಾಗೂ ವ್ಯಾಪಾರಗಳಲ್ಲಿ ಪ್ರಗತಿಯನ್ನು ಹೆಚ್ಚಿಸಲಿದೆ.ಆರ್ಥಿಕವಾಗಿ ಲಾಭ ಪಡೆಯುವಿರಿ. ವಿದ್ಯೆ ಹಾಗೂ ಉದ್ಯೋಗ ವಿಷಯದಲ್ಲಿ ಉತ್ತಮರಾಗಿ ವಿರಾಜಿಸುವಿರಿ. ಅಧ್ಯಯನ, ಹೊಸ ಪರಿಶೋಧನೆಗಳಲ್ಲಿ ಹೆಚ್ಚು ರಾರಾಜಿಸುವಿರಿ.

**ಧನಸ್ಸು**

ರಾಜಕೀಯದಲ್ಲಿ ಬಲಾಬಲಿಗಳನ್ನು ಹಿಮ್ಮೆಟ್ಟಿಸುವಿರಿ. ನಿಮ್ಮ ಆದರ್ಶಗಳಿಗೆ ಬದ್ಧರಾಗಿರುವಿರಿ. ನಿಮ್ಮ ಮನೆಯ ಮರ್ಯಾದೆ, ಮಿತ್ರ ಸಮೂಹ, ದೇಹಾರೋಗ್ಯದ ಕಡೆ ಹೆಚ್ಚು ಶ್ರದ್ಧೆ ವಹಿಸುವಿರಿ. ರಕ್ತಚಲನೆ, ನರಗಳ ಬಲಹೀನತೆ ಇಂತಹವುಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುತ್ತೀರಿ. ಬಿರುಸಾಗಿ ಮಾತನಾಡುವುದರಿಂದ ಇತರರು ನೊಂದುಕೊಳ್ಳುವ ಸಂಭವವಿದೆ.

**ಮಕರ**

ವ್ಯವಸಾಯ ಲಾಭಗಳನ್ನು ಪಡೆಯುವಿರಿ. ಹೊಸ ಹೂಡಿಕೆಗಳಲ್ಲಿ ಅಧಿಕ ಲಾಭ ಗಳಿಸುವಿರಿ. ನಿದ್ರಾಹೀನತೆಯಿಂದ ಮಾನಸಿಕ ಕ್ಷೋಭೆ ಉಂಟಾಗಲಿದೆ. ಅಧಿಕ ಹಣವನ್ನು ಖರ್ಚು ಮಾಡುವಿರಿ. ನೀವು ಸಂಪತ್ತು ಹಾಗೂ ಅಭಿವೃದ್ಧಿಯ ವಿಷಯಗಳಲ್ಲಿ ಸ್ನೇಹಿತರಿಂದ ಉಪಶಮನವನ್ನು ಪಡೆಯುವಿರಿ. ನಿಮ್ಮ ಪ್ರಯತ್ನಗಳಲ್ಲಿ ಜಯಗಳಿಸುವಿರಿ.

**ಕುಂಭ**

ಪ್ರಾಣಾಯಾಮ,ಯೋಗಾಭ್ಯಾಸದಂಥಹ ವಿಷಯಗಳಲ್ಲಿ ಆಸಕ್ತಿ ಹೊಂದುವರಿ.ವ್ಯಾಪಾರಗಳು ಲಾಭದಲ್ಲಿ ನಡೆಯಲಿವೆ. ವೃತ್ತಿ-ಉದ್ಯೋಗ ವಿಷಯಗಳು ಅದೇ ರೀತಿ ಪ್ರೋತ್ಸಾಹಕರವಾಗಿ ನಡೆಯಲಿವೆ. ಇತರ ದೇಶಗಳಲ್ಲಿರುವ ನಿಮ್ಮ ಮಕ್ಕಳಿಂದ ಅವರ ವಿದ್ಯೆ ಉದ್ಯೋಗ ವಿಜಯದ ವಾರ್ತೆಗಳು ಬರಲಿವೆ. ಎಲ್ಲದರಲ್ಲೂ ವಿಜಯವನ್ನು ಕಾಣುವಿರಿ. ಅನುಕೂಲಕರವಾದ ಸಮಯ.

**ಮೀನ**

ರಾಜಕೀಯ ನಾಯಕರುಗಳಿಗೆ ಪರೀಕ್ಷೆಯ ಸಮಯ. ಪ್ರಜೆಗಳಿಂದ ಬೆಂಬಲ ಪಡೆಯುವ ಪ್ರಯತ್ನ ನಡೆಸುವಿರಿ. ಈ ನಿಟ್ಟಿನಲ್ಲಿ ಇಮ್ಮಡಿ, ಮೂರ್ಮಡಿ ಹಣವನ್ನು ಖರ್ಚು ಮಾಡುತ್ತೀರಿ.ವಿದ್ಯಾರ್ಥಿಗಳು ವಿರಾಜಿಸುತ್ತಾರೆ. ಈ ತಿಂಗಳಲ್ಲಿ ನಿಮ್ಮ ಮನೆಗೆ ವಿಶೇಷ ಅತಿಥಿಗಳು ಬಂದು ನಿಮಗೆ ವಿಶೇಷ ಆರಕ್ಷಣೆ ನೀಡುತ್ತಾರೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ. ಅನಸೂಯ ಎಸ್.ರಾಜೀವ್

**1.ಸಂಕ್ರಾಂತಿ ಹಬ್ಬದ ವೈಶಿಷ್ಟ್ಯವೇನು?**

**ಉತ್ತರ :** ಸಂಕ್ರಾಂತಿ ಎಂದರೆ ಎಲ್ಲವನ್ನು ಕ್ರಮಿಸಿ ಉನ್ನತ ಸ್ಥಿತಿಗೆ ಹೋಗುವುದು ಎಂದರ್ಥ. ನಮ್ಮೊಳಗಿನ ಚೈತನ್ಯವೇ ಸೂರ್ಯ. ಪ್ರಜ್ಞಾನ ಬ್ರಹ್ಮವನ್ನು ತಲುಪುವುದೇ ಸಂಕ್ರಾಂತಿ. ಪ್ರಜ್ಞಾನದ ಕಡೆಗೆ ಗಮನ ಹೋಗುವುದೇ ಉತ್ತರಾಯಣ. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವ ದಿನ ಸಂಕ್ರಾಂತಿ. ಸೂರ್ಯನು ಮಕರರಾಶಿಗೆ ಪ್ರವೇಶಿಸುವ ದಿನ ಮಕರ ಸಂಕ್ರಾಂತಿ. ಕಾಲಪುರುಷನ ರಾಶಿ ಚಕ್ರದಲ್ಲಿ ಮಕರರಾಶಿ ದಶಮ ಸ್ಥಾನದಲ್ಲಿದೆ. ಮನುಷ್ಯನಿಗೆ ಶಿರಸ್ಸು ಎಷ್ಟು ಪ್ರಧಾನವೋ ಹಾಗೆ ಬ್ರಹ್ಮಾಂಡಕ್ಕೆ ಮಕರವೂ ಅಂತಹುದು.ಆದ್ದರಿಂದ ಬ್ರಹ್ಮಜ್ಞಾನವನ್ನೂ ಕಲ್ಪಿಸುವ ಹಬ್ಬ ಮಕರಸಂಕ್ರಾಂತಿ.

ಬ್ರಹ್ಮಾಂಡವೆಲ್ಲವನ್ನೂ ತನ್ನ ಎರಡು ಅಡಿಗಳಿಂದ ಅಳೆದು ಮೂರನೆಯ ಪಾದವನ್ನು ಬಲಿಯ ತಲೆ ಮೇಲಿಟ್ಟ ವಾಮನಾವತಾರ ನಡೆದಿದ್ದು ಸಂಕ್ರಾಂತಿ ದಿನದಂದೇ. ಶ್ರೀ ಹರಿಯು ಆದಿವರಾಹ ಮೂರ್ತಿ ರೂಪದಲ್ಲಿ ಪ್ರಳಯಕಾಲದಲ್ಲಿ ಭೂಮಿಯನ್ನು ರಕ್ಷಿಸಿದ್ದು ಈ ದಿನದಂದೇ ಹಿರಣ್ಯಾಕ್ಷನ ಸಂಹಾರವು ಇಂದೇ. ಮಕರರಾಶಿಯಲ್ಲೇ ಶ್ರವಣ ನಕ್ಷತ್ರವಿದ್ದು ಅದು ವಿಷ್ಣುವಿನ ರಾಶಿಯಾಗಿದೆ. ಸೃಷ್ಟ್ಯಾದಿಯಲ್ಲಿ ಅನಂತಪದ್ಮನಾಭ ಸ್ವಾಮಿಯಾಗಿ ಶ್ರೀ ಹರಿಯು ಬ್ರಹ್ಮನಿಗೆ ದರ್ಶನ ನೀಡಿದ್ದೂ ಸಹ ಈ ರಾಶಿಯಲ್ಲಿಯೇ ಈ ಕಾಲದಲ್ಲಿ ಸೃಷ್ಟಿ ಎಲ್ಲವೂ ಜಾಗೃತವಾಗಿ ಚೈತನ್ಯ ವಿಕಸಿತವಾಗುತ್ತದೆ. ಆಗ ಸೂರ್ಯನು ಸಪ್ತಾಶ್ವ ರಥವನ್ನು ಅಧಿರೂಹಿಸಿ ಮಂದ ಗಮನದಿಂದ ಸಂಚರಿಸುತ್ತಾನೆ. ಈ ಸಮಯದಲ್ಲಿ ಹಗಲು ವೃದ್ಧಿಯಾಗಿ ರಾತ್ರಿಯ ಅವಧಿ ತಗ್ಗುತ್ತದೆ. ಉತ್ತರಾಯಣ ಪುಣ್ಯಕಾಲದ ಈ ಹಬ್ಬವು ನಿಸ್ತೇಜ ತುಂಬಿರುವ ಪ್ರಕೃತಿಯಲ್ಲಿ ಉತ್ಸಾಹವನ್ನು, ಉಲ್ಲಾಸವನ್ನು ತುಂಬಿ ಜನಬಾಹುಳ್ಯದಲ್ಲಿ ಹೊಚ್ಚ ಹೊಸದಾದ ಒತ್ತಾಸೆ ಸಹಕಾರ ಹಾಗೂ ಪರಿಹಾರವನ್ನು ಕಲ್ಪಿಸುವ ಹಬ್ಬವಾಗಿದೆ.

**2.ಸಂಕ್ರಾಂತಿಯಂದು ಸ್ನಾನ ಹಾಗೂ ದಾನಗಳಿಗೆ ಮಹತ್ವ ಕೊಡಲಾಗಿದೆ ಏಕೆ?**

**ಉತ್ತರ :** ಮಕರ ಸಂಕ್ರಾಂತಿಯು ಉತ್ತರಾಯಣದ ಪ್ರಥಮ ದಿನವಾಗಿದೆ. ಇದು ಅತ್ಯಂತ ಪುಣ್ಯ ಕಾಲವಾಗಿರುವುದರಿಂದ ಅಂದು ಪುಣ್ಯ ತೀರ್ಥಗಳಲ್ಲಿ ಸ್ನಾನ ಮಾಡುವುದು ಪ್ರಶಸ್ತ. ಇದು ಶರೀರದ ಕೊಳೆಯನ್ನು ತೊಳೆಯುವ ಮಲಾಪಕರ್ಷಣ ಸ್ನಾನವಲ್ಲ. ಮಾನಸಿಕ ದೋಷಗಳನ್ನು ತೊಳೆಯುವ ಪುಣ್ಯ ಸ್ನಾನವಾಗಿದೆ. ಅಂದು ದೇವರಿಗೆ ಪೂಜೆ ಮಾಡಿ ಎಳ್ಳು ಹಾಗೂ ಪೊಂಗಲ್ ನಿವೇದಿಸುವುದು ಚಳಿಗಾಲದ ಚಳಿಯಿಂದ ಬೆಚ್ಚಗಾಗಿಸುವ ಹಾಗೂ ಚಳಿಯನ್ನು ಎದುರಿಸುವ ಸಾಮರ್ಥ್ಯವನ್ನು ಕೊಡುವ ಪರಮ ಪವಿತ್ರ ಸಾತ್ವಿಕ ಆಹಾರ. ಸಂಕ್ರಾಂತಿ ಸಮಯ ರೈತಾಪಿ ಜನರಿಗೆ ಸುಗ್ಗಿಯ ಕಾಲ. ಆದ್ದರಿಂದ ಮೊದಲ ಪಸಲಾದ ಎಳ್ಳು, ಬೆಲ್ಲ ಸಕ್ಕರೆ, ಕಬ್ಬು, ಕಡಲೆ, ಕೊಬ್ಬರಿ ಮುಂತಾದವುಗಳನ್ನು ದೇವರಿಗೆ ನಿವೇದಿಸಿ ಎಳ್ಳು ತಿಂದು ಒಳ್ಳೆ ಮಾತನಾಡು ಎಂದು ಹೇಳಿ ಪ್ರಸಾದ ಸ್ವೀಕರಿಸುತ್ತೇವೆ. ಇದರಿಂದ ಶನಿದೋಷ ನಿವಾರಣೆ . ಅಂದು ನಾಸ್ತಿ ಎಂಬ ಮಾತೇ ಬರದಂತೆ ದಾನ ಮಾಡಬೇಕು. ಸಂಕ್ರಾಂತಿಯಂದು ಕೊಡುವ ದಾನ ತುಂಬಾ ಫಲಪ್ರದ. ಎಳ್ಳುದಾನ, ಗೋದಾನ ತುಂಬಾ ಶ್ರೇಷ್ಠ. ಬ್ರಹ್ಮಾಂಡಕ್ಕೆ ಸಂಕೇತವಾದ ಕುಂಬಳಕಾಯಿನ್ನು ದಾನ ನೀಡಿದರೆ ವಿಷ್ಣುವಿನ ಅನುಗ್ರಹ ದೊರೆಯುತ್ತದೆ ಎಂಬ ನಂಬಿಕೆ ಇದೆ.

**3.ಸಂಕ್ರಾಂತಿಯಂದು ಗೋಪೂಜೆ ಮಾಡುವುದರ ವಿಶೇಷತೆಯೇನು?**

**ಉತ್ತರ :** ಗೋಮಾತೆ ಪ್ರತಿನಿತ್ಯ ಪೂಜ್ಯಳು. ಸಂಕ್ರಾಂತಿಯಂದು ವಿಶೇಷ , ಏಕೆಂದರೆ ಗೋಮಾತೆಯ ಎರಡು ಕೊಂಬುಗಳನ್ನು ಉತ್ತರಾಯಣ ಮತ್ತು ದಕ್ಷಿಣಾಯನ ಕಾಲಗಳ ಅಧಿದೇವತೆಗಳು ಅಲಂಕರಿಸಿದ್ದಾರೆ. ಮಕರ ಸಂಕ್ರಾಂತಿಯು ಆ ಎರಡು ಆಯನಗಳ ಸಂಧಿಕಾಲವಾದ್ದರಿಂದ ಅಂದು ಆ ಆಯನ ದೇವತೆಗಳಿಗೆ ವಾಸಸ್ಥಾನವಾಗಿರುವ ಕಾಮಧೇನುವನ್ನು ಪೂಜಿಸುವುದು ಯುಕ್ತವಾಗಿದೆ. ಸಂಕ್ರಾಂತಿ ಪುಣ್ಯಕಾಲವು ತ್ರಿಮೂರ್ತಿಗಳು ಒಂದಾಗಿ ಸೇರುವ ಸುಸಮಯ.

**4.ಸಂಕ್ರಾಂತಿಯಂದು ಎಳ್ಳು ಬೀರುವುದರ ಸಂಕೇತವೇನು?**

**ಉತ್ತರ :** ಸಂಕ್ರಾಂತಿಯಂದು ಮನೆಮನೆಗೆ ಹೋಗಿ ಎಳ್ಳು ಬೀರುವುದು ವಾಡಿಕೆ. ಸುಮ್ಮನೆ ಎಲ್ಲರ ಮನೆಗೂ ಹೋಗುವುದಕ್ಕಾಗುವುದಿಲ್ಲ. ಸೌಹಾರ್ದತೆ, ಸ್ನೇಹ ಬೆಳೆಯಲಿಕ್ಕೆ ಎಳ್ಳು ಬೀರುವುದು ಒಂದು ಸುಸಂಪ್ರದಾಯ ಎಳ್ಳಿನ ಜೊತೆಗೆ ಕಬ್ಬನ್ನೂ ಹಂಚುತ್ತೇವೆ. ಮನಸ್ತತ್ವದರೂಪವಾದ ಕಬ್ಬಿನ ಜಲ್ಲೆಯು ತಾಯಿ ರಾಜರಾಜೇಶ್ವರಿಯು ಕೈಯನ್ನು ಅಲಂಕರಿಸಿದೆ.

**5.ಸಂಕ್ರಾಂತಿಯಂದು ಚಿಕ್ಕಮಕ್ಕಳಿಗೆ ಆರತಿ ಎತ್ತುವುದರ ವಿಶೇಷತೆ ಏನು?**

**ಉತ್ತರ :** ಸಂಕ್ರಾಂತಿಯಂದು ಐದು ವರ್ಷದವರೆಗಿನ ಮಕ್ಕಳಿಗೆ ಆರತಿ ಮಾಡಿ ಅವರ ಮೇಲೆ ಬೆರೆಸಿದ ಎಳ್ಳನ್ನು ಸುರಿಯುತ್ತಾರೆ. ಕಾರಣವೆಂದರೆ ಎಳ್ಳಿನ ಸ್ಪರ್ಶದಿಂದ ಶೈಶವಕ್ಕೆ ಸಂಬಂಧಪಟ್ಟ ಪೀಡೆಗಳು ಪರಿಹಾರವಾಗುತ್ತದೆ. ಶಿಶುಗಳ ಬೆಳವಣಿಗೆಗೆ ಬೇಕಾದ ಕೇಂದ್ರಗಳು ವಿಕಾಸಗೊಳ್ಳುತ್ತವೆ. ಆದ್ದರಿಂದ ಮಕ್ಕಳಿಗೆ ಎಳ್ಳುಸುರಿದು ಗುರುಹಿರಿಯರ ಆಶೀರ್ವಾದದ ಅನುಗ್ರಹದ ಮಳೆ ಕರೆಯುವಂತೆ ಮಾಡುತ್ತಾರೆ.



# ಹಾಲಿನಂಥ ಸಾರ್ಥಕ ಬದುಕು ಬಾಳೋಣ

- ಡಾ|| ಗುರುರಾಜ ಪೋಶೆಟ್ಟಿಹಳ್ಳಿ
97393 69621



ಒಂದು ಸಲ ಹಾಲು ದೇವರನ್ನು ಕುರಿತು ತಪಸ್ಸು ಮಾಡಿತಂತೆ. ದೇವರು ಪ್ರತ್ಯಕ್ಷನಾಗಿ ಏನು ಸಮಸ್ಯೆ ಎಂದನಂತೆ.ಆಗ ಹಾಲು ಹೇಳಿತಂತೆ, ದೇವರೆ,ನಾನು ಹಾಲು,ಆಕಳು/ಎಮ್ಮೆಯಿಂದ ಬಂದಾಗ ಶುದ್ಧವಾಗೇ ಇರುತ್ತೇನೆ. ಆದರೆ ಈ ಪಾಪಿ ಮಾನವ ನನಗೆ ಹುಳಿ ಹಿಂಡಿ ನನ್ನ ಮನಸ್ಸನ್ನು ಕೆಡಿಸಿ ಬಿಡುತ್ತಾನೆ. ನನಗೆ ಹಾಲಾಗೇ ಇರುವಂತೆ ವರ ಕೊಡು ಎಂದು ಬೇಡಿಕೊಂಡಿತಂತೆ.

ಆಗ ದೇವರು ನಕ್ಕು, "ಎಲೈ... ಹಾಲೇ ಇಲ್ಲಿ ಕೇಳು... ನೀನು ಹಾಲಾಗಿ ಇರುವ ಬದುಕಿಗೆ ಆಸೆ ಪಡುವ ಮೊದಲು ಈ ಮಾತನ್ನು ಕೇಳು. ನೀನು ಹಾಲಾದರೆ ಒಂದು ದಿನ ಮಾತ್ರ ಬದುಕುವೆ.ಹಾಲಿಗೆ ಹೆಪ್ಪಾಕಿದರೆ ಎರಡು ದಿನ ಬದುಕುವೆ. ಮಜ್ಜಿಗೆ ಯಿಂದ ಬಂದ ಬೆಣ್ಣೆಯಾದರೆ ವಾರಗಟ್ಟಲೆ ಬದು ಕುವೆ. ಬೆಣ್ಣೆಯನ್ನು ಹದವಾಗಿ ಕಾಯಿಸಿದ ಮೇಲೆ ಒಂದೆರೆಡು ವೀಳ್ಯೆದೆಲೆ ಹಾಕಿದರೆ ಘಮಗುಡುವ ತುಪ್ಪ ವಾಗುವೆ. ತುಂಬಾ ದಿನ ಬದುಕುವೆ ಹಾಗೂ ಔಷಧ ವಾಗುವೆ. ಆ ತುಪ್ಪದಿಂದ ದೀಪ ಹಚ್ಚಿದರೆ ನನಗೆ ಬೆಳಕಾಗುವೆ."

ಈಗ ಹೇಳು ಒಂದು ದಿನ ಹಾಲಾಗಿಯೇ ಹುಟ್ಟಿ ಹಾಲಾಗಿಯೇ ಸಾಯುವೆಯಾ,ಅಥವಾ ಕ್ಷಣ ಕ್ಷಣವೂ..ಅನುದಿನವೂ...ದಿನ ದಿನವೂ...ಬೆಳೆದು.ರೂಪಾಂತರ ಪಡೆದು ಭಗವಂತನಿಗೆ ಬೆಳಕಾಗುವೆಯಾ" ಎಂದು ದೇವರು ಪ್ರಶ್ನಿಸಿದನಂತೆ.. ದೇವರ ಮಾತಿಗೆ ಹಾಲು ಮೂಕವಾಯಿತು ಶರಣಾಯಿತು.ತನ್ನ ಮನದ ಅಂಧಕಾರ, ಮದದಿಂದ ಹೊರಬಂತು. ದೇವರ ಮುಂದೆ ಪ್ರಜ್ವಲಿ ಸುವ ಬೆಳಕಾಯಿತು.

ನಾವು ಹಾಗೇ ಅಲ್ವಾ.ನಮ್ಮ ಮನಸ್ಸಿಗೆ ಯಾರೋ ಹುಳಿ ಹಿಂಡಿದ ರೆಂದು ಕೊರಗದೆ ಎಲ್ಲ ಕಷ್ಟಗಳನ್ನು ಸಹಿಸಿಕೊಂಡು ಹಾಲಾಗಿ, ಮೊಸ ರಾಗಿ, ಮಜ್ಜಿಗೆ, ಬೆಣ್ಣೆ, ತುಪ್ಪದಂತೆ ದೇವರ ಮುಂದೆ ದೀಪವಾಗುವ ಸಾರ್ಥ ಕತೆಯ ಬದುಕು ಬಾಳೋಣ.

**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು.**


**ಜೊತೆಗೆ "ಓಂ ನಮೋ ವೇಂಕಟೇಶಾಯ" ಎಂದು ನಾಮ ಸ್ಮರಣೆಯನ್ನು ಧ್ಯಾನಿಸಬೇಕು.**

**ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು.**

**ಬೇರೆಯವರನ್ನು ಸಂಬೋಧನೆ ಮಾಡುವಾಗ "ಗೋವಿಂದಾ" ಎಂದು ಸಂಬೋಧನೆ ಮಾಡೋಣ.**

**ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿಯೇ ಇರಬೇಕು.**


ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....



ಈ ಗೊಂಬೆಯನ್ನು ನೋಡಿ ಬಣ್ಣವನ್ನು ತುಂಬಿರಿ.








ದೊಡ್ಡ ದೊಡ್ಡ ರಂಗೋಳಿಗಳು, ಸಗಣಿಯಿಂದ ಮಾಡಿದ ಗೊಬ್ಬಿ ದೇವತೆಯನ್ನು ಮಾಡಿ ರಂಗೋಳಿಯಲ್ಲಿ ಇಟ್ಟು, ಡೋಲುಬಾರಿಸುವವರು ಕನುಮ ಪೂಜೆ ಮಾಡುವ ಹಬ್ಬ ಯಾವುದು?
...............



ಇದರಲ್ಲಿರುವ ಯಾವ ದೇವರಿಗೆ ಯಾವ ಆಯುಧವೆಂದು ಕಂಡು ಹಿಡಿಯಿರಿ ಮಕ್ಕಳೇ ನೋಡೋಣ





ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | | | | | |
|---|---|---|---|---|---|---|---|---|
| ನೆ | ಬಿ | ಯ | ಕಾ | ದ | ವ | ಇ | | ಆ |
| ಳು | ದ್ದ | ನಾ | ಳು | ಟ್ಟಾ | ಕಾ | ಳಿ | ಮ | ರೆ |

## ದಾರಿ ತೋರಿಸಿ



| | | | | | | |
|---|---|---|---|---|---|---|
| | | 0 | 3 | 2 | 9 | 5 |
| | | → | 1 | 2 | 3 | 4 |
| 8 | 9 | 5 | 4 | 3 | 7 | 8 |
| 7 | 10 | 11 | 8 | 4 | 5 | 9 |
| 12 | 14 | 13 | 12 | 9 | 6 | 16 |
| 6 | 4 | 10 | 9 | 8 | 7 | 15 |
| 16 | 15 | 11 | 12 | 13 | 14 | 10 |
| 15 | 13 | 12 | 18 | 15 | | |
| 15 | 14 | 15 | 16 | → | | |




ಯಾವ ದಾರಿಯಲ್ಲಿ ಗಿಳಿ ಹೋದರೆ ಗೋದಾದೇವಿಯನ್ನು ಸೇರುತ್ತದೆಂದು ಮಕ್ಕಳೇ ದಾರಿಯನ್ನು ತೋರಿಸಿ ನೋಡೋಣ.



ಇಲ್ಲಿರುವ ಸ್ಥಳಗಳು ಯಾವ ರಾಜ್ಯದಲ್ಲಿ ಇದೆಯೆಂದು ಮಕ್ಕಳೇ ಹೇಳಿ ನೋಡೋಣ

# ಮಕ್ಕಳೇ ಇದು ನಿಮಗಾಗಿ



## ರಸಪ್ರಶ್ನೆಗಳು

01.ಎಷ್ಟು ವರ್ಷಗಳಿಗೊಮ್ಮೆ ಪರ್ಯಾಯ ನಡೆಯುತ್ತದೆ?........................................

02.ಸಂಕ್ರಾಂತಿಯೆಂದು ಏನನ್ನು ಹಂಚುತ್ತಾರೆ? ........................................

03.ಸರಯೂ ನದಿಯ ಉಲ್ಲೇಖ ಎಲ್ಲಿ ಕಾಣಿಸುತ್ತದೆ?........................................

04.ಯಾವ ಮಾಸದಲ್ಲಿ ಬರುವ ಹುಣ್ಣಿಮೆಯನ್ನು ಬನದ ಹುಣ್ಣಿಮೆ ಎನ್ನುತ್ತಾರೆ? ........................................

05.ತಿರುಪ್ಪಾವೈ ವ್ರತದ ಆಚರಣೆಯನ್ನು ಯಾವ ಮಾಸದಲ್ಲಿ ಮಾಡುತ್ತಾರೆ? ........................................

06.ಗುರು ಗೋವಿಂದದಾಸರು ಎಂದು ಧರೆಯಿಂದ ಮರೆಯಾದರು? ........................................

07. ಚುಂಚನಕಟ್ಟೆ ಶ್ರೀಕೋದಂಡರಾಮಸ್ವಾಮಿಯ ಬ್ರಹ್ಮರಥೋತ್ಸವ ಯಾವ ತಿಂಗಳಿನಲ್ಲಿ ನಡೆಯುತ್ತದೆ ?........................................

08. ಶ್ರೀರಘೋತ್ತಮರು ಯಾವ ಅಂಶವೆಂದು ಹೇಳುತ್ತಾರೆ?........................................

09. ಕುಂತಿದೇವಿಯು ಯಾರನ್ನು ಕುರಿತು ತಪಸ್ಸು ಮಾಡಿದರು? ........................................

10.ತಿರುವಾರೂರ್ ಆಲಯದಲ್ಲಿರುವ ಪುಷ್ಕರಿಣಿಯನ್ನು ಯಾವ ಹೆಸರಿನಿಂದ ಕರೆಯಲ್ಪಡುತ್ತದೆ? ........................................

11. ತೊಂಡರಡಿಪ್ಪಾಡಿ ಆಳ್ವಾರರ ಮತ್ತೊಂದು ಹೆಸರೇನು?........................................

12.ವೈಕುಂಠಕ್ಕೆ ತಮಿಳಿನಲ್ಲಿ ಏನೆಂದು ಹೇಳುತ್ತಾರೆ?........................................

13. ಅಂತ್ಯದಲ್ಲಿ ಯಾವುದರಿಂದ ಯಾಗವನ್ನು ಪರಿಸಮಾಪ್ತಿಗೊಳಿಸಬೇಕು ?........................................

14. ಹಾಲು ಯಾರನ್ನು ಕುರಿತು ತಪಸ್ಸು ಮಾಡಿತು ? ........................................

15. ಯಾವುದರಿಂದ ಮನೆಯ ಮುಂಬಾಗಿಲನ್ನು ಸಾರಿಸುತ್ತಾರೆ? ........................................





## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.01.2024
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
**ತಿ.ತಿ.ದೇ. ಪ್ರೆಸ್ ಕಾಂಪೌಂಡ್**
**ಕೆ.ಟಿ. ರಸ್ತೆ, ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| **ಹೆಸರು** : | **ವಿಳಾಸ :** |
| **ಚಂದಾ ಸಂಖ್ಯೆ** : | |
| **ತಂದೆಯ ಹೆಸರು** : | |
| **ತಾಯಿಯ ಹೆಸರು:** | **ದೂರವಾಣಿ ಸಂಖ್ಯೆ :** |






**ಮಕ್ಕಳೇ ಈ ಚಕ್ರವನ್ನು ತಿರುಗಿಸಿದಾಗ ಬಂದ ಪ್ರಶ್ನೆಗೆ ಉತ್ತರವನ್ನು ಆ ಬಣ್ಣದ ಹತ್ತಿರ ತುಂಬಿರಿ**



ಮಕ್ಕಳೇ ವ್ಯತ್ಯಾಸಗಳನ್ನು ಕಂಡು ಹಿಡಿಯಿರಿ ನೋಡೋಣ



**ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ. ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.**

# ಗೋಪಿಕೆಯರ ಚಿತ್ತಚೋರನಿಗೆ ವಂದನೆಗಳು

**ಚಿತ್ರಕಥೆ**


**ಕಥೆ: ತೆಲುಗು ಮೂಲ** : ಶ್ರೀನಿವಾಸ ದೀಕ್ಷಿತರು

**ಅನುವಾದ** : ಪದ್ಮಜ ಬಿ.

**ಚಿತ್ರಗಳು** : ಕೆ. ತುಳಸೀ ಪ್ರಸಾದ್






ಸುತ್ತಲೂ ಯುವತಿಯರು-ನಿಂತರು. ಸಗಣಿಯಿಂದ ಮಾಡಿದ ಆಕಾರಗಳನ್ನು ಗೋಪಿಕೆಯರು-ಮಧ್ಯೆ ಲಕ್ಷ್ಮೀದೇವಿ-ಗೌರೀದೇವಿ... ಕೃಷ್ಣಯ್ಯ ಎಂದು ಭಾವಿಸಿ ಎಲ್ಲರನ್ನೂ ಅರ್ಚಿಸೋಣ.ಧೂಪ-ದೀಪ ನೈವೇದ್ಯ-ಆರತಿ ಎಲ್ಲವನ್ನೂ ಸಮರ್ಪಿಸೋಣ.
ಹಣ್ಣು-ಬೆಲ್ಲ-ನೈವೇದ್ಯವಾಗಿರಿಸೋಣ
ವಂದನೆಗಳು-ವಂದನೆಗಳು
ಗೋಪಿಕೆಯರ ಚಿತ್ತಚೋರನಿಗೆ ವಂದನೆಗಳು
ಗೊಬ್ಬಿದೇವತೆಗಳ ಸುತ್ತಲೂ ಕೈಚಪ್ಪಾಳೆ ತಟ್ಟುತ್ತಾ, ಅವುಗಳ ಸುತ್ತಲೂ ತಿರುಗುತ್ತಾ ಹಾಡುಗಳನ್ನು ಹಾಡೋಣ. ನಮಗೆ ಸಂಪತ್ತು. ಸೌಭಾಗ್ಯ ಎಲ್ಲವೂ ಉಂಟಾಗುತ್ತವೆ. ಬೆಳೆ ಸಮೃದ್ಧಿಯಾಗುತ್ತದೆ. ಆರೋಗ್ಯ ವೃದ್ಧಿಯಾಗುತ್ತದೆ.
ಯದುಕುಲಸ್ವಾಮಿಗೆ ವಂದನೆಗಳು
ಯದುಕುಲಸ್ವಾಮಿಗೆ ವಂದನೆಗಳು
ಇನ್ನು ಗೊಬ್ಬಿದೇವತೆಗಳನ್ನು ಎಚ್ಚರಿಕೆಯಿಂದ ತೆಗೆದು ರಂಗೋಲಿಯ ಮಧ್ಯದಲ್ಲಿ ಇರಿಸೋಣ..
ಬೆರಣಿಗಳನ್ನಾಗಿ ಮಾಡಿ ಗೋಡೆಗೆ ತಟ್ಟೋಣ. ಭೋಗಿಯ ಹಬ್ಬದಂದು-ಒಂದು ತಿಂಗಳ ಕಾಲ ಒಣಗಿದ ಬೆರಣಿಗಳನ್ನು ತೆಗೆದು ಒಲೆಯಲ್ಲಿ ಪೇರಿಸಿ ಹುಗ್ಗಿಯನ್ನು ಮಾಡಿ, ಸೂರ್ಯನಿಗೆ ನೈವೇದ್ಯಮಾಡೋಣ
ಸಂಜೆಯ ಸಮಯ! ಗೊಬ್ಬಿದೇವತೆಗಳನ್ನು ಕೀರ್ತಿಸುತ್ತಾ
ವಂದನೆಗಳಮ್ಮ ಗೊಬ್ಬಿದೇವತೆ!
ಭೋಗಿಯ ಹಬ್ಬದಂದು ಈ ಪೂಜೆ ಮಾಡಿದವರಿಗೆ ಭೋಗ ಭಾಗ್ಯಗಳು ಲಭಿಸುತ್ತವೆಂದು ಹಿರಿಯರು ಹೇಳುತ್ತಾರೆ
ಸರ್ವೇಜನಃ ಸುಖಿನೋ ಭವತ್ತು

### ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -''ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507''.

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777


Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.



19-11-2023 ರಂದು ತಿರುಮಲೆಯಲ್ಲಿ ಸ್ವಾಮಿಯವರಿಗೆ ನಡೆದ ಪುಷ್ಪಯಾಗ ಮಹೋತ್ಸವ



19-11-2023 ರಂದು ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರಿಗೆ ನಡೆದ ಪುಷ್ಪಯಾಗ ಮಹೋತ್ಸವ



ಕೈಶಿಕ ದ್ವಾದಶಿ ಪರ್ವದಿನದ ಸಂದರ್ಭದಲ್ಲಿ 24-11-2023 ರಂದು ತಿರುಮಲೆ ಮಾಡಬೀದಿಗಳಲ್ಲಿ ವೈಭವವಾಗಿ ಮೆರವಣಿಗೆ ಹೊರಟ ಶ್ರೀದೇವಿ, ಭೂದೇವಿ ಸಮೇತ ಶ್ರೀ ಉಗ್ರಶ್ರೀನಿವಾಸಮೂರ್ತಿ, ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶ್ರೀ ಶ್ರೀ ಶ್ರೀ ಪೆದ್ದಜೀಯರ್ ಸ್ವಾಮಿಯವರು ಮತ್ತು ಶ್ರೀ ಶ್ರೀ ಶ್ರೀ ಚಿನ್ನಜೀಯರ್ ಸ್ವಾಮಿಯವರು ಮತ್ತು ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರ ರೆಡ್ಡಿ, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಏ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್., ಮತ್ತು ಆಡಳಿತ ಮಂಡಳಿಯ ಸದಸ್ಯರು, ಆಲಯಾಧಿಕಾರಿಗಳು ಮತ್ತು ಸಿಬ್ಬಂದಿಗಳು



26-11-2023 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ವೈಭವವಾಗಿ ನಡೆದ ಕಾರ್ತೀಕ ದೀಪೋತ್ಸವ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶ್ರೀ ಶ್ರೀ ಶ್ರೀ ಪೆದ್ದಜೀಯರ್ ಸ್ವಾಮಿಯವರು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಏ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್. ಅರ್ಚಕರು ಮತ್ತು ಆಲಯಾಧಿಕಾರಿಗಳು ಪಾಲ್ಗೊಂಡರು.




26-11-2023 ರಂದು ದರ್ಶನ ನಿಮಿತ್ತ ಆಗಮಿಸಿದ ಭಾರತದ ಪ್ರಧಾನ ಮಂತ್ರಿ ಗೌ॥ ಶ್ರೀ ನರೇಂದ್ರ ಮೋದಿಯವರನ್ನು ಸ್ವಾಗತಿಸುತ್ತಿರುವ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಗೌ॥ ಶ್ರೀ ವೈ.ಎಸ್. ಜಗನ್‌ಮೋಹನ್ ರೆಡ್ಡಿಯವರು, ಮತ್ತು ಆಂಧ್ರಪ್ರದೇಶದ ರಾಜ್ಯಪಾಲರು ಗೌ॥ ಶ್ರೀ ಎಸ್. ಅಬ್ದುಲ್ ನಜೀರ್‌ರವರು.

27-11-2023 ರಂದು ತಿರುಮಲೆ ಸ್ವಾಮಿಯವರ ದರ್ಶನಕ್ಕೆ ಆಗಮಿಸಿದ ಭಾರತದ ಪ್ರಧಾನ ಮಂತ್ರಿ ಗೌ॥ ಶ್ರೀ ನರೇಂದ್ರ ಮೋದಿಯವರು. ದರ್ಶನಾನಂತರ ಪ್ರಧಾನ ಮಂತ್ರಿಯವರಿಗೆ ತೀರ್ಥ ಪ್ರಸಾದಗಳನ್ನು ನೀಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿ ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಏ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ರವರು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-12–2023 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment
No. PMGK/RNP/WPP-04(6)/ 2024-2026" Posting on 5th of Every Month.



ಶ್ರೀ ಗೋದಾದೇವಿಯ ಅಲಂಕಾರದಲ್ಲಿ
ಶ್ರೀ ಮಲೆಯಪ್ಪ ಸ್ವಾಮಿಯವರು